SAPTHAGIRI(KANNADA)
ILLUSTRATED MONTHLY
Volume:01, Issue:12, Pages:56
July-2022,Price Rs.5/-

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜುಲೈ 2022

ಬೆಲೆ ರೂ. 5/-




ತಿರುಮಲೆ
ಸ್ವಾಮಿಯವರ
ಆಣಿವರ ಆಸ್ಥಾನ
17-07-2022



ಆಂಧ್ರಪ್ರದೇಶದ ಅಮರಾವತಿಯಲ್ಲಿರುವ ವೆಂಕಟಪಾಳ್ಯಂ ಬಳಿ ತಿ.ತಿ.ದೇ., ನಿರ್ಮಿಸಿದ ಶ್ರೀವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ಜೂನ್ 5 ರಿಂದ 9 ರ ವರೆಗೆ ನಡೆದ ಆಲಯದ ಮಹಾಸಂಪ್ರೋಕ್ಷಣ ಕಾರ್ಯಕ್ರಮದ ದೃಶ್ಯಗಳು.

ಈ ಕಾರ್ಯಕ್ರಮದಲ್ಲಿ ಶಾರದಾಪೀಠಾಧಿಪತಿ ಶ್ರೀ ಶ್ರೀ ಶ್ರೀ ಸ್ವರೂಪಾನಂದೇಂದ್ರ ಸರಸ್ವತಿ,ಉತ್ತರಾಧಿಕಾರಿ ಶ್ರೀ ಶ್ರೀ ಶ್ರೀ ಸ್ವಾತ್ಮಾನಂದೇಂದ್ರ ಸರಸ್ವತಿ, ರಾಷ್ಟ್ರ ಗವರ್ನರ್ ಶ್ರೀ ವಿಶ್ವ ಭೂಷಣ್ ಹರಿಚಂದನ್, ದೇವದಾಯಶಾಖೆಯ ಮಂತ್ರಿ ಶ್ರೀ ಕೆ.ಸತ್ಯನಾರಾಯಣ, ತಿ.ತಿ.ದೇ.,ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ.ವೈ.ವಿ.ಸುಬ್ಬಾರೆಡ್ಡಿ ಮುಂತಾದವರು ಪಾಲ್ಗೊಂಡರು.













# ಭಗವದ್ಗೀತೆ



ಕುಲಕ್ಷಯೇ ಪ್ರಣಶ್ಯಂತಿ ಕುಲಧರ್ಮಾಃ ಸನಾತನಾಃ।
ಧರ್ಮೇ ನಷ್ಟೇ ಕುಲಂ ಕೃತ್ಸ್ನಂ ಅಧರ್ಮೋಽಭಿಭವತ್ಯುತ ॥

(ಶ್ರೀ ಮದ್ಭಗವದ್ಗೀತೆ - ಅಧ್ಯಾಯ 1, ಶ್ಲೋಕ -39)

ಕುಲನಾಶವಾದರೆ ಬಹುಕಾಲದಿಂದ ನಡೆದು ಬಂದ ಕುಲಧರ್ಮಗಳೆಲ್ಲ ಹೋಗಿ ಬಿಡುವುವು, ಕುಲಧರ್ಮ ಹಾಳಾದರೆ ಕುಲವನ್ನೆಲ್ಲ ಅಧರ್ಮವು ಆಕ್ರಮಿಸಿ ಬಿಡುವುದು.




ಸೇ (ಸಾ)ರಿದೆ ನಿನ್ನ ವೆಂಕಟರನ್ನ ಪಾಲಿಸು ಎನ್ನ ಅ -
ಪಾರ ಜನುಮಕ್ಕೆ ನೀನೇ ದೈವವೆಂದು
ಶೂನ್ಯಜ್ಞನು ನಾನು ಅನ್ಯಥಾಗತಿ ಅರಿಯೆ
ಅನ್ಯರಲ್ಲಿಗೆ ಕೊಡದೆ ಧನ್ಯನ ಮಾಡೊ ಬಿಡದೆ
ಕಲ್ಪತರುವು ಎಂದು ಒಪ್ಪದಿಂದಲಿ ಬಂದೆ
ಅಲ್ಪರಿಯದಂತೆ ನಾಗಕಲ್ಪನೆ  ಫಲವೀಯೊ
ವರುಷಾ ವರುಷ ಹೀಗೆ ದರುಶನ ಕೊಡು ಎನಗೆ
ಹರುಷವಾಗಲಿ ಪರಮಪುರುಷ ವಿಜಯವಿಠಲಾ

- ಶ್ರೀ ವಿಜಯದಾಸರು

(ಏಳನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಖಿಲಂ ಚೇತೋವೃತ್ತೇಃ ಕಿಮಿದಮಿತಿ ವಿಸ್ಮೇರಭುವನಂ ಕೃಪೇ ಸಿಂಹಕ್ಷ್ಮಾಭೃತ್ತ್ಯತ ಮುಖಚಮತ್ಕಾರಕರಣಮ್**

**ಭರನ್ಯಾಸಚ್ಛನ್ನ ಪ್ರಬಲವೃಜಿನ ಪ್ರಾಭೃತಭೃತಾಮ್ ಪ್ರತಿಪ್ರಸ್ಥಾನಂ ತೇ ಶ್ರುತಿನಗರ ಶೃಂಗಾಟಕಜುಷಃ॥ 20॥**

ಇಲ್ಲಿನವರೆಗೆ ಈ ದಶಕದಲ್ಲಿ ಪ್ರಪನ್ನರ ವಿಷಯದಲ್ಲಿ ದಯಾದೇವಿಯು ಮಾಡುವ ಉಪಕಾರಗಳನ್ನು ತಿಳಿಸಿ, ಆದರಿಂದಲೇ ಪ್ರಪನ್ನನು ನಿರ್ಭಯವಾಗಿರಬಹುದೆಂದು ಪ್ರತಿಪಾದಿಸಿದರು. ಈಗ ಕೊನೆಯದಾಗಿ, ಇವನ ವಿಷಯದಲ್ಲಿ ದಯಾದೇವಿಯು ಮಾಡುವ ಅತ್ಯಂತ ಮುಖ್ಯವೂ ಹಿರಿಯದೂ ಆದ ಉಪಕಾರವೊಂದನ್ನು ಪ್ರಕಾಶಪಡಿಸಿ ಈ ದಶಕವನ್ನು ಮುಗಿಸುತ್ತಾರೆ.

ವೇದವೆಂಬುದು ಒಂದು ದೊಡ್ಡ ನಗರ. ನಗರದಲ್ಲಿ ಎಲ್ಲ ಪದಾರ್ಥಗಳೂ ದೊರಕುವಂತೆ ವೇದದಲ್ಲಿ ಐಶ್ವರ್ಯ, ಕೈವಲ್ಯ ಮೋಕ್ಷವೆಂಬ ಎಲ್ಲ ಪುರುಷಾರ್ಥಗಳು ದೊರಕುವುವು. ಅಂದರೆ ಅವುಗಳನ್ನು ಪಡೆಯುವ ಉಪಾಯಗಳು ವೇದದಲ್ಲಿ ಇವೆಯೆಂದು ಭಾವವು. ನಗರಗಳಲ್ಲಿ ನಾಲ್ಕು ರಸ್ತೆಗಳು ಸೇರುವ ಚೌಕವು ಹೇಗೆ ಮುಖ್ಯವಾದ ಭಾಗವೋ ಹಾಗೆಯೇ ವೇದಕ್ಕೆ ಉಪನಿಷದ್ಭಾಗವೂ ಮುಖ್ಯವಾದದು. ಏಕೆಂದರೆ, ಎಲ್ಲ ಮಾರ್ಗಗಳನ್ನೂ ಭಗವಂತನಲ್ಲಿ ಸಮನ್ವಯ ಮಾಡಿಕೊಡುವಂತಹ ಮಾರ್ಗವದು. ಅಂತಹ ಜಾಗದಲ್ಲಿ ಭಗವಂತನ ದಯೆಯ ಪ್ರಭಾವವು ಸ್ಪಷ್ಟವಾಗಿ ಗೋಚರಿಸುವುದರಿಂದ ಚತುಷ್ಪಥದಲ್ಲಿರುವಳೆಂದು ಆಚ್ಯಾರು ಚಿತ್ರಿಸಿರುತ್ತಾರೆ. ಅಂತಹ ಚೌಕದಲ್ಲಿರುವವರಿಗೆ ಯಾರು ಯಾವ ರಸ್ತೆಯಿಂದ ಬಂದರೂ ಚೆನ್ನಾಗಿ ಕಾಣುವಂತೆ, ದಯಾದೇವಿಗೂ ಕೂಡ "ಚತುರ್ವಿಧಾ ಭಜಂತೇ ಮಾಂ" ಎಂಬಂತೆ ಯಾರು ಯಾವ ಫಲವನ್ನು ಅಪೇಕ್ಷಿಸಿ ಬಂದರೂ ಸ್ಪಷ್ಟವಾಗಿ ತಿಳಿಯುವುದು. ತಿಳಿದೊಡನೆಯೇ ಅವರಿಗೆ ಬೇಕಾದ ಫಲಗಳನ್ನು ಅನುಗ್ರಹಿಸುವಳು. ಹೀಗಿರುವಾಗ, ಮೋಕ್ಷವನ್ನು ಬಯಸಿ ಪ್ರಪತ್ತಿ ಮಾಡುವವನು ವಿಷಯದಲ್ಲಿ ಈ ದಯಾದೇವಿಯು ತೋರಿಸುವ ಆದರವು ಅತ್ಯಂತ ವಿಸ್ಮಯಕಾರಿಯಾದುದೆಂದು ಆಚಾರ್ಯರು ತಮ್ಮ ಆಶ್ಚರ್ಯವನ್ನು ವ್ಯಕ್ತಪಡಿಸುತ್ತಾರೆ. ಶರಣಾಗತಿ ಮಾಡುವವನು ತನ್ನ ಮಹಾಪಾಪಗಳನ್ನೆ ದಯಾದೇವಿಗೆ ಉಪಹಾರವನ್ನಾಗಿಕೊಂಡು ಹೋಗುತ್ತಾನೆ. ಏಕೆಂದರೆ ಇವನಿಗಿರುವ ಧನವೆಂದರೆ ಇದೇ.(ಪಾಪವೇ) ಅವರವರಲ್ಲಿರುವ ವಸ್ತುಗಳನ್ನೇ ಅವರವರ ದೇವತೆಗಳಿಗೂ ಸಮರ್ಪಿಸಬೇಕಲ್ಲವೆ? ಆದ್ದರಿಂದ ಈ ಪಾಪೋಪಹಾರವನ್ನು ಶರಣಾಗತಿಯೆಂಬ ಒಂದು ಸಣ್ಣ ಧರ್ಮರೂಪವಾದ ಸಣ್ಣ ಬಟ್ಟೆಯಲ್ಲಿ ಕಟ್ಟಿಕೊಂಡು ಹೋಗುವನು ಮೇಲೆ ಮುಚ್ಚಿರುವ ವಸ್ತುವಿನ ಶ್ರೇಷ್ಠತೆಯನ್ನು ಕಂಡು ಆ ಉಪಹಾರವನ್ನು ಹಾಗೆಯೇ ಸ್ವೀಕರಿಸುವಳು ದಯಾದೇವಿ-ಎಂದು ರಮ್ಯವಾಗಿ ಆಚಾರ್ಯರು ವರ್ಣಿಸಿರುತ್ತಾರೆ. ಈ ಜೀವನು ಇಂತಹ ಉಪಹಾರವನ್ನು ಹೀಗೆ ಮುಚ್ಚಿ ತೆಗೆದುಕೊಂಡು ಹೋಗುವಾಗಲೇ ದಯಾದೇವಿಯು ಅತ್ಯಂತ ಆದರದಿಂದಲೂ ಸಂಭ್ರಮದಿಂದಲೂ ಎದುರುಗೊಂಡು ಬಂದು, ಉಪಚರಿಸಿ,ಅದನ್ನು ಸ್ವೀಕರಿಸುವಳು. ಆಗ ವೇದಗಳೂ ನಿತ್ಯಮುಕ್ತರೂ ಆಶ್ಚರ್ಯಪಡುವರು. ಸರ್ವಲೋಕಸಾರ್ವಭೌಮಿಯಾದ ದಯಾದೇವಿಯಲ್ಲಿ ! ಪಾಪಪುಂಜನಾದ ಇವನನ್ನು ಎದುರುಗೊಳ್ಳುವುದೆಂಬುದು ಇದೆಂತಹ ಆಶ್ಚರ್ಯ ! ಸರ್ವೇಶ್ವರನು ಸರ್ವಜ್ಞನಾದುದರಿಂದ ಜೀವನು ಮಾಡುವ ಪಾಪಗಳನ್ನು ಚೆನ್ನಾಗಿ ಅರಿತಿರುವನ್ನಲ್ಲವೆ! ಹೀಗಿರಲು, ಈಗ ದಯಾದೇವಿಯು ಎದುರುಗೊಂಡು ಆದರಿಸುವುದೆಂದರೆ ಈಶ್ವರನಿಗೂ ದಯಾದೇವಿಗೂ ಈ ಪಾಪಗಳೆಲ್ಲವೂ ಮರೆತು ಹೋದುವೇ? ಆದರಿಂದಲೇ ಈ ದಯಾದೇವಿಯ ಹಿರಿಮೆಯು ಮನಸ್ಸಿನಿಂದಲೂ ಊಹಿಸಲು ಸಾಧ್ಯವಿಲ್ಲದ್ದೆಂದು ಎಲ್ಲರೂ - ಸ್ವತಃ ಸರ್ವತ್ರನಾದ ಶ್ರೀನಿವಾಸನೂ ಆಶ್ಚರ್ಯ ಪಡುವಂತಹುದೆಂದು ಆಚಾರ್ಯರು ಸುಂದರವಾಗಿ ವರ್ಣಿಸಿರುತ್ತಾರೆ.

ಜೀವನು ಎಷ್ಟೇ ಪಾಪಗಳನ್ನು ಮಾಡಿದವನಾದರೂ, ಭಗವಂತನಲ್ಲಿ ನಮ್ರನಾಗಿ, ನಾನೇನೋ ತಿಳಿಯದೆ ಇಷ್ಟೊಂದು ಅಪರಾಧಗಳನ್ನು ಮಾಡಿಬಿಟ್ಟೆ ಇವುಗಳನ್ನು ಹೋಗಲಾಡಿಸುವುದಕ್ಕೆ ಉಪನಿಷತ್ತುಗಳಲ್ಲಿ ತಿಳಿಸಲ್ಪಟ್ಟ ಭಕ್ತಿ ಯೋಗವೇ ಮೊದಲಾದವುಗಳನ್ನು ಆಚರಿಸಲು ನನಗೆ ಶಕ್ತಿಯಿಲ್ಲ. ತಾಳ್ಮೆಯೂ ಇಲ್ಲ. ಆದ್ದರಿಂದ ಆ ಭಕ್ತಿ ಯೋಗವನ್ನು ಆಚರಿಸಿದರೆ ಯಾವ ಫಲವುಂಟಾಗುವುದೋ ಅದೇ ಫಲವನ್ನು ಆ ಭಕ್ತಿಯೋಗದ ಸ್ಥಾನದಲ್ಲಿ ನೀನೇ ನಿಂತು ನನ್ನನ್ನು ಕಾಪಾಡಿ ಸಫಲನನ್ನಾಗಿ ಮಾಡಬೇಕೆಂದು ಶರಣಾಗತನಾದರೆ - ಭಗವಂತನು ಪರಮದಯಾಳುವಾದುದರಿಂದ ಆ ದಯೆಯಿಂದ ಇವನು ಶರಣಾಗತನಾದನೆಂಬ ಕಾರಣವನ್ನೇ ಪ್ರಧಾನವಾಗಿಟ್ಟುಕೊಂಡು ಇವನ ಪಾಪಗಳೆಲ್ಲವನ್ನೂ ಕ್ಷಮಿಸಿ, ಸಂಸಾರದಿಂದ ಬಿಡಿಸಿ, ಮೋಕ್ಷ ಪರ್ಯಂತವಾದ ಐಶ್ವರ್ಯವನ್ನು ಕೊಡುತ್ತಾನೆ. ಇದಿಷ್ಟೂ ದಯೆಯಿಂದಲೇ ನಡೆಯ ತಕ್ಕದ್ದೆಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

ಮುಂದಿನ ದಶಕದ ಆರಂಭದಲ್ಲಿ ಪ್ರಪನ್ನನ ಭರವನ್ನು ದಯೆಯು ವಹಿಸಿರುವಳೆಂದು ಹೇಳಲ್ಪಡುವ ವಿಷಯವನ್ನು ಈ ಪದ್ಯದಲ್ಲಿ ಸೂಕ್ಷ್ಮವಾಗಿ ಸೂಚಿಸಿರುತ್ತಾರೆ.

**ಏಳನೆಯ ದಶಕವು ಮುಗಿದುದು.**

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು



# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀಶುಭಕೃತ್ ನಾಮ ಸಂವತ್ಸರ
ಆಷಾಢ - ಶ್ರಾವಣ ಮಾಸ ಸಂಚಿಕೆ

ಸಂಪುಟ - 01 ಜುಲೈ 2022 ಸಂಚಿಕೆ -12

**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ , ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ಅಗರಬತ್ತಿಗಳ ರೂಪದಲ್ಲಿ ಮರಳಿ ಭಗವಂತನೆಡೆಗೆ | -ಎಸ್.ವಾದಿರಾಜ | 7 |
| ಹರಿಕಥಾಮೃತಸಾರ ಮಹಿಮೆ ಬಲು ಅಪಾರ | -ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ | 10 |
| ಆಷಾಢ ಮಾಸದ ಮಹತ್ವ | -ಡಾ॥ ಎಸ್. ನಂಜುಂಡಸ್ವಾಮಿ | 14 |
| ವಿವಿಧವಿಷಯಗಳಮಹಾಪೂರ ಈ "ಓಂಕಾರ" (ಪುಸ್ತಕವಿಮರ್ಶೆ) | ಡಾ॥- ಗುರುರಾಜ . ಮ. ದೇಶಕುಲಕರ್ಣಿ | 17 |
| ಪ್ರೇಮ ಭಕ್ತಿಯ ಸ್ವರೂಪ ಮತ್ತು ಲಕ್ಷಣ | -ರಾ.ನ.ನ. ಮೂರ್ತಿ | 18 |
| ದಕ್ಷಿಣಾಯಣ ಪುಣ್ಯಕಾಲದ ಮಹತ್ವ | -ಹನುಮಂತ ಮ. ದೇಶಕುಲಕರ್ಣಿ | 20 |
| ಜ್ಯೋತಿ ಭೀಮೇಶ್ವರ ಅಮಾವಾಸ್ಯೆ | -ಶ್ರೀಮತಿ-ಗಿರಿಜಾ ಎಸ್. ದೇಶಪಾಂಡೆ | 21 |
| ಕಡಬದ ಶ್ರೀ ರಾಮಲಕ್ಷ್ಮೀ ಜನಾರ್ದನ ದೇವಾಲಯ | - ಕೆಂಗೇರಿ ಚಕ್ರಪಾಣಿ | 22 |
| ಶ್ರೀ ವೆಂಕಟೇಶ್ವರ ಆಲಯ | - ಬಿ.ಎನ್.ಶ್ರೀನಿವಾಸನ್ | 24 |
| ವಿಭೂತಿ ಪುರುಷರಾದ ಶ್ರೀವೃಂದಾವನಾಚಾರ್ಯರು | -ಶ್ರೀಧರರಾಯಸಂ | 31 |
| ಶ್ರೀ ಜಯತೀರ್ಥರ ಹಿರಿಮೆ - ಸಂದೇಶ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 33 |
| ಸಂಸ್ಕೃತ ಕಲಿಯೋಣ | - ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ | 36 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ. ಪೂರ್ಣ ಪ್ರಸಾದ್ ಸಿದ್ಧಾಂತಿ | 37 |
| ತಾಜ್ಯ ಪದಾರ್ಥಗಳೆಲ್ಲವೂ ಔಷಧಿಗಳೇ | -ಡಿ.ಎಸ್. ಬದ್ರಿನಾಥ್ | 38 |
| 108 ವೈಷ್ಣವ ದಿವ್ಯಕ್ಷೇತ್ರಗಳು - ಅನ್ಬಿಲ್ ಕ್ಷೇತ್ರ (ಬಾಣಾಪುರ) | -ಶ್ರೀಮತಿ. ಸೂರ್ಯವಂಶಿ | 40 |
| ಏಕಾದಶಿ ಮಹಾತ್ಮೆ | ಡಾ॥- ಎ. ಕುಮುದ | 42 |
| ತಿರುಮಲೆ ಕಾಲಾಮಾನಾಚರಣೆಗಳು | -ಶ್ರೀಮತಿ | 44 |
| ಶ್ರೀಮದ್ಭಗವದ್ಗೀತೆ | -ಶ್ರೀಮತಿ ಬಿ. ಪದ್ಮಜ | 46 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ.ಆರ್.ನರಸಿಂಹನ್ | 47 |
| ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ "ಇದು ಯೇನ್ನೆ ಚಂದಾ ನಮ್ಮ ಮನೆಗೆ ಗೋವಿಂದಬಂದಾ" | - ಡಾ॥ ಸುಭಾಸ ಕಾಖಂಡಕಿ | 49 |
| ನೀತಿ ಕಥೆ - ಸೋಮಾರಿತನ | | 51 |
| ಚಿತ್ರಕಥೆ - ಅಯ್ಯೋ ಹುಲಿ | - ಟಿ. ಶಿವಾಜಿ | 52 |
| ಕ್ವಿಜ್ | | 54 |

ಮುಖಚಿತ್ರ - ಸ್ವಾಮಿಯವರ ಆಣಿವರ ಆಸ್ಥಾನ, ತಿರುಮಲೆ
ಹಿಂಬದಿಚಿತ್ರ - ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಸಾಕ್ಷಾತ್ಕಾರ ವೈಭವ, ಶ್ರೀನಿವಾಸಮಂಗಾಪುರು

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

## ಸಂಪಾದಕೀಯ

# ತಿರುಮಲೆಯಲ್ಲಿ ಪ್ಲಾಸ್ಟಿಕ್ ವಸ್ತುಗಳ ನಿಷೇಧ

ಸಾಕ್ಷಾತ್ತು ಶ್ರೀಮನ್ನಾರಾಯಣನು ವೈಕುಂಠದಿಂದ ನೇರವಾಗಿ ಧರೆಗಿಳಿದು ಬಂದು ನೆಲೆಸಿರುವ ಪ್ರದೇಶ ಈ ತಿರುಮಲೆ. ಪ್ರಾಚೀನಕಾಲದಲ್ಲಿ ಎಷ್ಟೋ ಜನ ಮಹನೀಯರು ಈ ಸಪ್ತಗಿರಿಗಳನ್ನು ಹತ್ತುವಾಗ ತಮ್ಮ ಪಾದಗಳನ್ನು ಈ ಪವಿತ್ರವಾದ ಪ್ರದೇಶಕ್ಕೆ ಸ್ಪರ್ಶಿಸಬಾರದೆಂದು ತಮ್ಮ ಮೊಣಕಾಲುಗಳಿಂದ ಹತ್ತಿ ಭಕ್ತಿ ಪರಾಕಾಷ್ಠತೆಯನ್ನು ಮೆರೆದಿದ್ದಾರೆ. ಅಂತಹಾ ದಿವ್ಯ ಪುಣ್ಯಕ್ಷೇತ್ರ ಇಂದು ಆಧುನೀಕರಣದ ಹೆಸರಿನಲ್ಲಿ ಅನೇಕ ನಿಷೇಧಿತ ಪದಾರ್ಥಗಳ ಬಳಕೆಯಿಂದಾಗಿ ಭೂವೈಕುಂಠವೆನಿಸಿದ ಈ ಪ್ರದೇಶದ ಪಾವಿತ್ರ್ಯತೆಗೆ ಭಂಗವನ್ನುಂಟು ಮಾಡುತ್ತಿವೆ. ಅದರಲ್ಲೂ ಪ್ಲಾಸ್ಟಿಕ್ ಬ್ಯಾಗುಗಳು, ಪ್ಲಾಸ್ಟಿಕ್ ನೀರು ತುಂಬಿರುವ ಪ್ಲಾಸ್ಟಿಕ್ ಬಾಟಲುಗಳು, ಪ್ಲಾಸ್ಟಿಕ್ ಕವರ್‌ಗಳು ಇತ್ಯಾದಿಯಾಗಿ ಬಳಸುವುದನ್ನು ನಾವು ಕಾಣಬಹುದಾಗಿದೆ.

ಈ ಪ್ಲಾಸ್ಟಿಕ್ ಪದಾರ್ಥಗಳ ವ್ಯರ್ಥಗಳು ಭೂಮಿಯ ಮೇಲೆ ಬಿದ್ದು ಅವು ವಾತಾವರಣಕ್ಕೆ ಹಾನಿಯುಂಟು ಮಾಡುತ್ತಿವೆ ಅದಲ್ಲದೇ ಅವುಗಳು ಎಷ್ಟೇ ವರ್ಷಗಳಾದರೂ ಹಾಳಾಗುವುದಿಲ್ಲ ಜೊತೆಗೆ ಮಣ್ಣಿನೊಂದಿಗೆ ಕಲೆತು ಹೋಗುವುದೂ ಇಲ್ಲ. ಇದರಿಂದಾಗಿ ಭೂಕಾಲುಷ್ಯತೆ ಹೆಚ್ಚಾಗಿದೆ. ಜೊತೆಗೆ ಇವು ಮಣ್ಣಿನಲ್ಲಿ, ನೀರಿನಲ್ಲಿ ಸೇರಿಕೊಂಡು ಜಲ,ವಾತಾವರಣ ಎಲ್ಲದರ ಕಾಲುಷ್ಯತೆಯೂ ಉಂಟಾಗಿ ಪರಿಸರವನ್ನು ಹಾಳುಮಾಡುತ್ತಿವೆ.

ಹಲವಾರು ಕಾಲುಷ್ಯತೆಗಳಿಂದಾಗಿ ನಾವು ಈಗಾಗಲೇ ದುಬಾರಿ ಬೆಲೆತೆತ್ತಿದ್ದೇವೆ. ಅನೇಕ ವಿಧವಾದ ಪ್ರಕೃತಿ ವಿಕೋಪಗಳನ್ನು ಎದುರಿಸುತ್ತಿದ್ದೇವೆ. ಪ್ರಕೃತಿ ಮಾತೆ ಮುನಿಸಿಕೊಂಡು ಅನೇಕ ಅನರ್ಥಗಳನ್ನು ನಮ್ಮ ಪಾಲಿಗೆ ಶಾಪವನ್ನಾಗಿ ನೀಡಿದ್ದಾಗಿದೆ.ನಮಗೆ ಈ ವಿಷಯ ಇನ್ನೂ ಅರ್ಥವಾಗದೇ ಹೋದರೆ ಮುಂಬರುವ ದಿನಗಳಲ್ಲಿ ಇನ್ನೂ ಭಾರೀ ಬೆಲೆ ತೆರಬೇಕೆನ್ನುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ತಿ.ತಿ.ದೇ. ಯಾಜಮಾನ್ಯದವರು ತಿರುಮಲೆಯಲ್ಲಿ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ನಿಷೇಧಿಸಿದ್ದಾರೆ. ಇದರಿಂದಾಗಿ ತಿರುಮಲೆಯ ಬೆಟ್ಟವನ್ನು ಹತ್ತುವ ಭಕ್ತಾದಿಗಳು ತರುವ ಪ್ಲಾಸ್ಟಿಕ್ ಬಾಟಿಲ್‌ಗಳು ಬೆಟ್ಟದ ಮೇಲೆ ಅಲ್ಲಲ್ಲಿ ಬಿದ್ದು ಹಸಿರು ಹಸಿರಾಗಿರುವ ಆ ಬೆಟ್ಟದ ಪ್ರದೇಶ ಹಾಗೂ ಸುತ್ತಮುತ್ತಲಿನ ಪರಿಸರ ಹಾಳಾಗುವುದನ್ನು ತಡೆಗಟ್ಟಬೇಕೆಂದು ನಿರ್ಧಾರ ಮಾಡಲಾಗಿದೆ. ಇದರ ಮೂಲಕ ಅನೇಕ ಅಪುರೂಪವಾದ ಜೀವಜಾಲಕ್ಕೆ ಹಾಗೂ ವೈವಿಧ್ಯಮಯವಾದ ಔಷಧಿಗಳ ತಾಣವಾಗಿರುವ ಶೇಷಾಚಲವನ್ನು ರಕ್ಷಿಸುವ ಹಾದಿಯಲ್ಲಿ ಹೆಜ್ಜೆಯನ್ನಿರಿಸುತ್ತಿದ್ದಾರೆ. ಅದರಂತೆಯೇ ಬೆಟ್ಟವನ್ನು ಹತ್ತಿ ಬರುವ ಭಕ್ತಾದಿಗಳಿಗೆ ಜಲಪ್ರಸಾದ ಎನ್ನುವ ಹೆಸರಿನ ಮೂಲಕ ಶುದ್ಧೀಕರಿಸಿದ ನೀರನ್ನು ಒದಗಿಸುತ್ತಿದ್ದಾರೆ. ಇದರಿಂದ ಭಕ್ತರಿಗೆ ಕುಡಿಯುವ ನೀರಿನ ಸುವ್ಯವಸ್ಥೆಯನ್ನು ಮಾಡಿದ್ದಾರೆ. ಹಾಗೆಯೇ ಬೆಟ್ಟದ ಮೇಲೆ ಖರೀದಿಸುವ ವಸ್ತುಗಳಿಗಾಗಿ ದೊರೆಯುತ್ತಿದ್ದ ಪ್ಲಾಸ್ಟಿಕ್ ಬ್ಯಾಗುಗಳನ್ನೂ ನಿಷೇಧಿಸುವುದರ ಮೂಲಕ ಪರ್ಯಾವರಣದ ರಕ್ಷಣೆಗಾಗಿ ಪಣತೊಟ್ಟಿದ್ದಾರೆ.

ತಿರುಮಲೆಗೆ ಭೇಟಿನೀಡುವ ಅಸಂಖ್ಯಾತ ಭಕ್ತರುಗಳು ತಮ್ಮ ಭಕ್ತಿ ಪರವಶತೆಯನ್ನು ಮೆರೆಯುವುದರೊಂದಿಗೆ ತಿ.ತಿ.ದೇ. ಅವರ ಈ ನಿಲುವನ್ನು ಪ್ರೋತ್ಸಾಹಿಸಿ, ಆ ದೇವದೇವನನ್ನು ದರ್ಶಿಸಿ,ಪ್ರಕೃತಿಯನ್ನೂ ದೈವವೆಂದೇ ಆರಾಧಿಸಿ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ರಕ್ಷಿಸಿ, ಇಡೀ ಪ್ರಪಂಚಕ್ಕೆ ಹಾನಿಕಾರಕವಾಗಿರುವ ಈ ಪರ್ಯಾವರಣದ ಕಾಲುಷ್ಯತೆಯನ್ನು ನಿವಾರಿಸುವುದರಲ್ಲಿ ಸಹಭಾಗಿಗಳಾಗಿ, ಪ್ರಕೃತಿ ಮಾತೆಯ ವರದೊಂದಿಗೆ ಕಲಿಯುಗದ ಪ್ರತ್ಯಕ್ಷದೈವ ಶ್ರೀವೇಂಕಟೇಶ್ವರನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ.

**ಗೋವಿಂದ ....ಗೋವಿಂದ...ಗೋವಿಂದ**



# ಅಗರಬತ್ತಿಗಳ ರೂಪದಲ್ಲಿ ಮರಳಿ ಭಗವಂತನೆಡಗೆ


ತೆಲುಗು ಮೂಲ : ಡಾ|| ಕೆ. ರವಿಚಂದ್ರನ್

ಅನುವಾದ - ಎಸ್. ವಾದಿರಾಜ






ವಿವಿಧ ಕುಸುಮಗಳು ಆ ಶ್ರೀನಿವಾಸನ ಸೇವೆಗಾಗಿಯೇ ವಿಕಸಿಸಿವೆ. ಆತನ ಪಾದಗಳನ್ನು ಸೇರಿ ಪುನೀತವಾಗಿವೆ. ಶ್ರೀಪದ್ಮಾವತಿ ಅಮ್ಮನವರ ಮುಡಿಯನ್ನು ಸೇರಿ ಪರಿಮಳಿಸಿವೆ.ನಾರಾಯಣನ ಅಲಂಕಾರದಲ್ಲಿ ಶೋಭಾಯಮಾನವಾಗಿವೆ.ಸಿರಿರಾಣಿಯ ಅರ್ಚನೆಯಲ್ಲಿ ಸಂಭ್ರಮಗೊಂಡಿವೆ.ದಿವ್ಯಚರಣಗಳನ್ನು ತೊರೆಯುವ ಸಮಯದಲ್ಲಿ ವಿಲಪಿಸುತ್ತವೆ.ಈಗ ಈ ಪುಷ್ಪಗಳ ವಿಲಾಪಕ್ಕೆ ಉಪಶಮನ ಲಭಿಸಿವೆ.ಅಗರಬತ್ತಿಗಳ ರೂಪದಲ್ಲಿ ಭಗವಂತನ ಸನ್ನಿಧಾನಕ್ಕೆ ಮರಳಿ ಸುಗಂಧಭರಿತವಾದ ಪರಿಮಳವನ್ನು ಹೊರಸೂಸುವ ಅವಕಾಶವನ್ನು ಪಡೆದಿವೆ.

ಪ್ರಾಚೀನಕಾಲದಿಂದಲೂ ಭಾರತೀಯರು ಅರ್ಚಾಮೂರ್ತಿಯನ್ನು ಆರಾಧಿಸುವ ಪದ್ಧತಿ ಚಾಲ್ತಿಯಲ್ಲಿದೆ. ಭೌತಿಕ ಮತ್ತು ಮಾನಸಿಕ ಪೂಜೆಗಳೆಂದು ಪೂಜೆಗಳಲ್ಲಿ ಎರಡು ವಿಧಗಳಿವೆ.ನಮ್ಮ ತನು, ಮನ, ಇಂದ್ರಿಯಗಳು, ಬುದ್ಧಿ. ಇವೆಲ್ಲವೂ ಅರ್ಚಾಮೂರ್ತಿಯನ್ನೇ ವೀಕ್ಷಿಸುತ್ತಾ ಸೇವಿಸುತ್ತಿರುತ್ತವೆ. ಆದ್ದರಿಂದ ಮನಸ್ಸು ವೇಗದಿಂದ ಭಗವಂತನ ಮೂರ್ತಿಯಲ್ಲಿ ಏಕಾಗ್ರತೆಯನ್ನು ಪಡೆದುಕೊಳ್ಳುತ್ತದೆ. ಅರ್ಚನಾವಿಧಾನಗಳು.ಅದಕ್ಕೆ ಬಳಸುವ ವಸ್ತುಗಳು,ಪೂಜೆ ಮುಂತಾದ ನಿಯಮಗಳನ್ನು ಆಗಮಶಾಸ್ತ್ರದಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ.ಇದರಲ್ಲಿ ಷೋಡಶೋಪಚಾರ ಅತ್ಯಂತ ಪ್ರಧಾನವಾದುದು.

ಆವಾಹನ ಮಾನಸಂ ಪಾದ್ಯಮರ್ಘ್ಯ ಮಾಚಮನೀಯಮ್।
ಸ್ನಾನಂ ವಸ್ತ್ರೋಪವೀತೇ ಚ ಭೂಷಣಂ ಪುಷ್ಪಮೇವ ಚ ॥
ಗಂಧೋ ಧೂಪಶ್ಚ ದೀಪಶ್ಚ ನೈವೇದ್ಯಂ ಮುಖವಾಸನಮ್॥
ಅರ್ಚಾನಾಂತೇ ಪ್ರಣಮಶ್ಚೇತ್ಯುಪಚಾರಾಸ್ತು ಷೋಡಶ॥



ಆವಾಹನೆ, ಆಸನವನ್ನು ನೀಡುವುದು. ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ವಸ್ತ್ರ,ಉಪವೀತ ಆಭರಣಗಳನ್ನು ಸಮರ್ಪಿಸುವುದು ಪುಷ್ಪ ಸಮರ್ಪಣೆ, ಗಂಧ,ಧೂಪ, ದೀಪ, ತಾಂಬೂಲ, ನೈವೇದ್ಯ ಪೂಜಾ ನಂತರ ನಮಸ್ಕಾರ ಇವುಗಳನ್ನು ಷೋಡಶೋಪಚಾರ ಎಂದು ಕರೆಯುತ್ತಾರೆ.

ಇವುಗಳನ್ನು ಮಾಡಲು ಸಾಧ್ಯವಾಗದವರಿಗೆ ಶಾಸ್ತ್ರ ಕೆಲವು ಸುಲಭವಾದ ಪದ್ಧತಿಗಳನ್ನು ಅಷ್ಟೋಪಚಾರಗಳ ಹೆಸರಿನಲ್ಲಿ ನೀಡಿದೆ.

ಆಸನಂ ಪಾದ್ಯ ಮಾಚಾ ಮನಂ
ಧೂಪೋ ದೀಪೋಽರ್ಘ್ಯಮೇವ ಚ ।
ಹವಿಃ ಪಾನೀಯಮಿ ತ್ಯಷ್ಟಾವು
ಪಚರಾಃ ಪ್ರಕೀರ್ತಿತಾಃ ॥

ಆಸನ, ಪಾದ್ಯ, ಆಚಮನ, ಧೂಪ, ದೀಪ, ಅರ್ಘ್ಯ, ಹವಿಸ್ಸು,

ಪಾನೀಯ ಎಂಬ ಎಂಟು ಉಪಚಾರಗಳು. ಈ ಎರಡು ವಿಧಾನಗಳಲ್ಲಿ ಧೂಪ ಎಂಬ ಸುವಾಸನಾಯುಕ್ತವಾದ ದ್ರವ್ಯ ಸೇವೆ ನಿಯಮ ಪರಸ್ಪರವಾಗಿ ತಿಳಿಸಲ್ಪಟ್ಟಿದೆ. ದೇವತೆಗಳು ದಿವ್ಯ ಸುಗಂಧ ಶರೀರಗಳು, ಆದ್ದರಿಂದ ಅವರಿಗೆ ಬೆವರು ಬರುವುದಿಲ್ಲ. ಆದರೆ ಮೃದು ಶರೀರನಾದ ಭಗವಂತನನ್ನು ಸೇವಿಸುವಾಗ ಒಂದು ಹಸುಗೂಸಿಗೆ ಹೇಗೆ ಸೇವೆಗಳನ್ನು ಮಾಡುತ್ತೇವೋ ಅದೇ ರೀತಿಯೆಂದು ಭಾವಿಸಿ, ಶ್ರದ್ಧೆಯಿಂದ, ಭಕ್ತಿಯಿಂದ, ಪರಮ ಪ್ರೀತಿಯಿಂದ, ಮೃದುವಾದ ಪದ್ಧತಿಯಲ್ಲಿ ಸೇವೆಗಳನ್ನು ಸಮರ್ಪಿಸಬೇಕು. ಹಸು ಕಂದನಿಗೆ ಸ್ನಾನ ಮಾಡಿಸಿದರೆ ಕೂಡಲೇ ಸಾಂಬ್ರಾಣಿ ಹೊಗೆಯನ್ನು ಹಾಕಿ ಆ ಮಗುವಿನ ಮೈಯನ್ನು ಕಾಯಿಸುತ್ತಾರೆ. ಆ ಸುಗಂಧಮಯವಾದ ಹೊಗೆ ಆ ಹಸು ಕಂದನ ಶರೀರವನ್ನೆಲ್ಲಾ ವ್ಯಾಪಿಸಿ ಶರೀರದ ಮೇಲಿರುವ ತೇವವನ್ನು ಕಳೆಯುತ್ತದೆ ಮಗು ಹಾಯಾಗಿ ನಿದ್ರಿಸ ಬೇಕಾದರೆ ಈ ಧೂಪ ಅತ್ಯಂತ ಸಹಕಾರಿಯಾಗಿದೆ.

ಪೂರ್ವಕಾಲದ ದೇವಾಲಯಗಳಲ್ಲಿ ಮುಖ್ಯವಾಗಿ ಗರ್ಭಗುಡಿಯಲ್ಲಿ ಸೂರ್ಯನ ಕಿರಣಗಳು. ಗಾಳಿ ಬೆಳಕು ಪ್ರವೇಶಿಸುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಅಲ್ಲಿನ ವಾತಾವರಣ ಸುಗಂಧಭರಿತವಾಗಿದ್ದರೆ ಮನಸ್ಸು





ಪ್ರಶಾಂತವಾಗಿರುತ್ತದೆ. ಅದಕ್ಕೇ ಗಂಧದ ಸೇವೆ, ಧೂಪದ ಸೇವೆಯನ್ನು ನಿಯಮಪೂರ್ವಕವಾಗಿ ನೆರವೇರಿಸುವ ಪದ್ಧತಿಯನ್ನು ಏರ್ಪಡಿಸಿರುತ್ತಾರೆ. ಇವೆರಡೂ ಮನಸ್ಸನ್ನು ಆಕರ್ಷಿಸಿ, ಏಕಾಗ್ರತೆಗೆ ಸಹಾಯ ಮಾಡುವುದೇ ಅಲ್ಲದೇ ಶಾರೀರಿಕ ಮಾನಸಿಕ ಸಂಕಟಗಳನ್ನು ಪರಿಹರಿಸುವಂತಹಾ ದಿವ್ಯ ಶಕ್ತಿಯನ್ನು ನೀಡುತ್ತದೆ.

ಪೂಜಾ ದ್ರವ್ಯಗಳಲ್ಲಿ ಪುಷ್ಪಗಳು ಬಹಳ ಪ್ರಧಾನಪಾತ್ರವನ್ನು ವಹಿಸುತ್ತದೆ. ಮೇಲೆ ತಿಳಿಸಿರುವ ಷೋಡಶ, ಅಷ್ಟ ಉಪಚಾರಗಳೊಂದಿಗೆ ಏಕೋಪಚಾರವೆಂಬ ಒಂದು ಪದ್ಧತಿ ಇದೇ ಅದೇ ಪುಷ್ಪೋಪಚಾರ!

ಪುಷ್ಪದಾಮ ಪ್ರದಾನಂ ವಾ ಪ್ರಣಮಸ್ತ್ವೇಕ ವಿಗ್ರಹಃ

ಹೂವಿನಹಾರವನ್ನಾಗಲೀ, ಬಿಡಿಹೂವುಗಳನ್ನಾಗಲೀ ಸಮರ್ಪಿಸುವುದು ಅಥವಾ ಪ್ರಣಾಮಗಳನ್ನು ಸಮರ್ಪಿಸುವುದು ಇವೆಲ್ಲವೂ ಒಂದು ಉಪಚಾರ.

ಹೂವುಗಳೆಂದರೆ ವಿಕಾಸವೆಂದರ್ಥ. ಈ ಕುಸುಮಗಳು ತಾವೂ ವಿಕಸಿಸುತ್ತಾ ನಿಖಿಲಜೀವಜಾಲವನ್ನೂ ವಿಕಸನಗೊಳಿಸುವುವು. ಈ ಪುಷ್ಪಗಳು ಒಳ್ಳೆಯ ಮನಸ್ಸನ್ನು ಹೊಂದಿರುತ್ತವೆ. ಜನರು ಇವುಗಳ ಮೇಲೆ ತಮ್ಮ ಮನಸ್ಸನ್ನು ಇಟ್ಟಿರುತ್ತಾರಾದ್ದರಿಂದ ಪುಷ್ಪಂ "ಸುಮನಾಃ" ಎಂದು ಕರೆಯಲ್ಪಡುತ್ತದೆ. ಸಾಧಾರಣವಾಗಿ ಲೌಕಿಕ ಪುಷ್ಪಗಳ ವಿಕಾಸ ತಾತ್ಕಾಲಿಕವಾದದ್ದು ನಶ್ವರವೂ ಕೂಡಾ ಕೆಲವು ದೇವತಾ ಪುಷ್ಪಗಳಿವೆ. ಅವುಗಳ ಭೌತಿಕವಿಕಾಸವೂ ತಾತ್ಕಾಲಿಕವಾದುದೇ ಆದರೂ ಅವುಗಳ ವಿಕಾಸ ಮಾತ್ರ ಶಾಶ್ವತವಾದುದು! ಇವು ಶಾಶ್ವತವಾದ ಪರಮಾನಂದವನ್ನು ನೀಡುತ್ತವೆ. ಇವನ್ನೇ ದಿವ್ಯ ಪುಷ್ಪಗಳು, ವೈದಿಕಪುಷ್ಪಗಳು ಎನ್ನುತ್ತಾರೆ.

ಪದ್ಮ, ಇಂದೀವರ, ಮಲ್ಲಿಗೆ, ನಾಗಮಲ್ಲಿಗೆ ಪಾರಿಜಾತ, ಕುಮುದ ಮೊದಲಾದವು ದೇವತಾಪುಷ್ಪಗಳು.

ಪದ್ಮವು ಲಕ್ಷ್ಮೀದೇವಿಗೆ ನಿವಾಸಸ್ಥಾನವಾಗಿದೆ. ಇಂದೀವರ ಅಂದರೆ ಕನ್ನೈದಿಲೆ. ಈ ಹೂವುಗಳಿಂದ ಲಕ್ಷ್ಮೀದೇವಿಯನ್ನು ಪೂಜಿಸಿದರೆ ಲಕ್ಷ್ಮೀದೇವಿಯ ಸಂಪೂರ್ಣವಾದ ಅನುಗ್ರಹ ಲಭ್ಯವಾಗುತ್ತದೆ. ಮಹಿಳೆಯರೆಲ್ಲಾ ಇಷ್ಟದಿಂದ ಮುಡಿಗೇರಿಸುವ ಹೂವೆಂದರೆ ಮಲ್ಲಿಗೆ. ಈ ಮಲ್ಲಿಗೆಯ ವೈಭವ ಜಗತ್ಪ್ರಸಿದ್ಧವಾದುದು. ಕುಮುದ ಅಂದರೆ ಬಿಳಿಯ ನೈದಿಲೆ ಹೂವು. ಇದು ಭೂಮಿಯನ್ನು ಸಂತೋಷಗೊಳಿಸುತ್ತದೆ. ಇನ್ನು ಪಾರಿಜಾತ ಉತ್ಪಲ ಇವೆಲ್ಲವೂ ಔಷಧೀಯ ಗುಣಗಳನ್ನು ಹೊಂದಿರುವಂತಹವೇ!

ಏಳು ಸುತ್ತಿನ ಕಮಲದ ಹೂವಿಗೆ 'ಶಾರದಃ' ಎಂದು ಕರೆಯುತ್ತಾರೆ. ಈ ಹೂವು ಶರತ್ಕಾಲದಲ್ಲಿ ವಿಕಸಿಸುತ್ತದಾದ ದ್ದರಿಂದ 'ಶಾರದಾ' ಎಂದು ಕರೆಯುತ್ತಾರೆ. ಶಾರದಾದೇವಿ ವಿದ್ಯಾ ದೇವತೆ. ಅಂದರೆ ಭಾಷೆಗಳಿಗೆ ತಾಯಿ. ಭಾಷೆಯನ್ನು ಏಳು ವರ್ಗ ಗಳಾಗಿ ನೋಡಬಹುದು. ಅವುಗಳು ಕ,ಚ,ಟ, ತ,ಪ,ಯ,ಶ ವರ್ಗ ಗಳು. ಈ ಏಳು ವರ್ಗಗಳಿಗೆ ಪ್ರತಿರೂಪವಾಗಿ ಏಳು ಮುಖ ಗಳೆಂದು ಆದ್ದರಿಂದ ಶಾರದಾ ಪುಷ್ಪಕ್ಕೆ ಏಳು ಪಕಳೆಗಳು ಇರುತ್ತ ವೆಂದು ಆಗಮ ಶಾಸ್ತ್ರದಲ್ಲಿ ತಿಳಿಸಲಾಗಿದೆ. ಅದಕ್ಕೇ ಪ್ರಸಿದ್ಧ ವಿದ್ವಾಂಸರನ್ನು ಶಾರದನೆಂದೂ, ವಿಶಾರದನೆಂದೂ ಕರೆಯು ತ್ತಾರೆ. ಶಾರದ ಅಂದರೆ ಶ್ವೇತಪದ್ಮವೆಂದೂ ಶಬ್ದಕಲ್ಪ ದ್ರುಮವೆಂಬ ಗ್ರಂಥದಲ್ಲಿ ತಿಳಿಸಿದ್ದಾರೆ. ಆದ್ದರಿಂದ ಶಾರದಾದೇವಿ 'ಶಾರದ' ಪುಷ್ಪ ವನ್ನು ಕರಗಳಲ್ಲಿ ಧರಿಸಿದ್ದಾಳೆ ಅಂದರೆ ಭೌತಿಕವಾಗಿ ಶ್ವೇತ ಪದ್ಮವನ್ನು, ದೈವಿಕವಾಗಿ ಏಳು ವರ್ಗಗಳ ವಾಙ್ಮಯವನ್ನು ಧರಿಸಿ ದ್ದಾಳೆ ಎಂದರ್ಥ. ಈ ರೀತಿ ವಿವಿಧ ರೀತಿಯ ಪುಷ್ಪಗಳು ವಿವಿಧ ದೇವತಾಸ್ವರೂಪವೆಂದು ತಿಳಿದು ಬರುತ್ತಿದೆ. "ಚೈತನ್ಯ ಕುಸುಮ ಪ್ರಿಯಾ ಎಂದು ಲಲಿತಾದೇವಿಯ ಹೆಸರು. ಜೀವಿಗಳಲ್ಲಿ ಇದ್ದು ಮಹಾಫಲಗಳನ್ನು ಪ್ರಸಾದಿಸುವ ಚಿತ್ ಎಂದರೆ ಹೂವೇ ಒಂದು ಚೈತನ್ಯದಂತೇ ಈ ಕುಸುಮವು ದೇವಿಗೆ ಬಹಳ ಇಷ್ಟವಾದುದು. ಈ ಚೈತನ್ಯ ಪುಷ್ಪವು ಇತರ ಅಷ್ಟ ಪುಷ್ಪಗಳಿಗಿಂತಲೂ ವಿಭಿನ್ನ ವಾಗಿದೆ.

ವಿಷ್ಣುಸಹಸ್ರನಾಮದಲ್ಲಿ ಭಗವಂತನು "ಪುಷ್ಪಹಾಸಃ" ಎಂದು ಹೊಗಳಲ್ಪಡುತ್ತಿದ್ದಾನೆ. ಅಂದರೆ ನಾಲ್ಕು ವೇದಗಳು ನಾಲ್ಕು ಪುಷ್ಪಗಳೆಂದು ಛಾಂದೋಗ್ಯೋಪನಿಷತ್ತಿನಲ್ಲಿ ವಿವರಿಸಿ ದ್ದಾರೆ. ಸೂರ್ಯನು ದೇವತೆಗಳೆಲ್ಲರಲ್ಲೂ ಜೇನಿನಂತಹವನು. ಆ ಸೂರ್ಯನಿಗೆ ಸ್ವರ್ಗ ಒಂದು ಅಡ್ಡಗೋಲಾಗಿದೆ. ಆಕಾಶ ಆ ಅಡ್ಡುಗೋಲನ್ನು ಹಿಡಿದು ಓಲಾಡುವ ಜೇನಿನಗೂಡು. ಸೂರ್ಯ ಆ ಜೇನುಗೂಡಿನಲ್ಲಿರುವ ಜೇನು. ಸೂರ್ಯಕಿರಣಗಳು ಜೇನು ನೊಣಗಳಂತೆ. ಪೂರ್ವದಿಕ್ಕಿನತ್ತ ಪಸರಿಸುವ ಕಿರಣಗಳು ಜೇನುಗೂಡಿನಿಂದ ಜೇನನ್ನು ಸುರಿಸುವ ಪೂರ್ವನಾಡಿಗಳು ಋಙ್ಮಂತ್ರಗಳೇ ದುಂಬಿಗಳು. ಋಗ್ವೇದ ಮಂತ್ರಗಳು ಪೂರ್ವ ದಿಕ್ಕಿನಲ್ಲಿರುವ ಪುಷ್ಪದಂತೆ, ಆ ಋಗ್ವೇದ ಮಂತ್ರಗಳು ಅಮೃತ ದಂತೆ ದಕ್ಷಿಣ ದಿಕ್ಕಿನತ್ತ ಪಸರಿಸುವ ಕಿರಣಗಳು ಜೇನನ್ನು ಸೂಸುವ ದಕ್ಷಿಣ ನಾಡಿಗಳು. ಯಜುರ್ವೇದ ಮಂತ್ರಗಳು ದುಂಬಿಗಳು ಯಜುರ್ವೇದ ದಕ್ಷಿಣ ದಿಕ್ಕಿನಲ್ಲಿರುವ ಹೂವು. ಆ ವೇದಮಂತ್ರಗಳು ಅಮೃತಮಯ ಮತ್ತು ಸುಧಾಮಯವಾಗಿವೆ.

ಪಶ್ಚಿಮದಿಕ್ಕಿಗೆ ಪಸರಿಸುವ ಸಾಮವೇದಮಂತ್ರಗಳು. ಉತ್ತರ ದಿಕ್ಕಿಗೆ ಪಸರಿಸುವ ಅಥರ್ವವೇದಮಂತ್ರಗಳು ಅಮೃತ ದಂತೆ. ಈ ರೀತಿ ನಾಲ್ಕು ವೇದಗಳು ನಾಲ್ಕು ರೀತಿಯ ಪುಷ್ಪಗಳು. ಓಂಕಾರವೂ ಒಂದು ಪುಷ್ಪವೇ! ಈ ವೇದಮಂತ್ರಗಳು ದುಂಬಿ ಗಳು. ಇವು ಹೂವುಗಳಿಂದ ಜೇನನ್ನು ತಂದು ಜೇನುಗೂಡಿನಲ್ಲಿ ಸೇರಿಸುವಂತೆ ವೇದ ಮಂತ್ರಗಳೆಂಬ ಜೇನುಹುಳುಗಳು ವೇದ ರೂಪಗಳೆಂಬ ಹೂಗಳಿಂದ ಆಕಾಶವೆಂಬ ಜೇನುಗೂಡಿನಲ್ಲಿ ಸೂರ್ಯನೆಂಬ ಜೇನನ್ನು ಸೇರಿಸುತ್ತವೆ. ಆ ಜೇನುಗೂಡಿನಿಂದ ಜೇನನ್ನು ಕಿರಣಗಳೆಂಬ ನಾಡಿಗಳು ಭೂಮಿಯನ್ನು ತಾಕುತ್ತಾ ಸರ್ವಲೋಕಗಳಿಗೂ ಸೇರುತ್ತವೆ. ಈ ಜೇನು ಸೂರ್ಯ ತೇಜ ದಂತೆ. ಆ ರೀತಿ ನಾಲ್ಕುವೇದಗಳು ನಾಲ್ಕು ಪುಷ್ಪಗಳಾಗಿ ಸೂರ್ಯ ಕಾಂತಿ ರೂಪವಾದ ಜೇನನ್ನು ಲೋಕಕ್ಕೆ ನೀಡುತ್ತಿವೆ. ಈ ಜಗ ತ್ತುಷ್ಪಕ್ಕೆ ವಿಕಸನವನ್ನು ಪ್ರಸಾದಿಸುತ್ತಿವೆ. ಈ ರೀತಿ ನಾಲ್ಕುವೇದ ಗಳು ಲೋಕೋತ್ತರಗಳು, ಇವುಗಳನ್ನು ಪ್ರಸಾದಿಸುವುದು ಈ ದೇವತಾ ಪುಷ್ಪಗಳೇ!

ಪಂಚಭೂತಗಳಲ್ಲಿ ಭೂಮಿಗೆ ಗಂಧದ ಗುಣವಿದೆ. ಆದ್ದ ರಿಂದ ಭೂಮಿಯೂ ಒಂದು ಕುಸುಮದಂತೇ! ಪರಾದೇವತೆ ಯನ್ನು ತೋರಿಸುವುದರ ಮೂಲಕ 'ಗಂಧದ್ವಾರಾ' ಎಂದು ಶ್ರೀಸೂಕ್ತವು ಹೇಳುತ್ತದೆ. ಯಾವ ಗಂಧ? ಯಾವ ಹೂವಿನಿಂದ ಈ ಗಂಧವು ಬರುತ್ತದೆ? ವೇದರೂಪ ಪುಷ್ಪಗಳಿಂದ ಹೊರ ಬರುವ ಗಂಧವೇ ಆ ದೇವಿದರ್ಶನಕ್ಕೆ ದ್ವಾರವಾಗುತ್ತದೆ. ರಾಮಾ ಯಣದಲ್ಲಿ ಹನುಮಂತನನ್ನು "ಪುಷ್ಪಗಿರಿ" ಸ್ವರೂಪಾ ಎಂದು ವಾಲ್ಮೀಕಿ ಸ್ಮರಿಸಿದ್ದಾರೆ. "ಯಥಾ ಪುಷ್ಪಮಯೋಗಿರಿ" ಎಂದು ಹೇಳಿದ್ದಾನೆ. ಸಮುದ್ರೋಲ್ಲಂಘನ ಮಾಡುವಾಗ ಅಶೋಕ ವನದಲ್ಲಿ ಸೀತಾದೇವಿಯನ್ನು ಹುಡುಕುವಾಗ ಮರದಿಂದ ಅನೇಕ ಪುಷ್ಪಗಳು ಉದುರಿದುವಂತೆ. ಆ ಪುಷ್ಪಗಳಲ್ಲಿ ಮುಳುಗಿ ಹೋಗಿದ್ದ ಹನುಮಂತನು ಪುಷ್ಪಮಯ ಬೆಟ್ಟದಂತೆ "ಗಿರೀಶಃ" ಎಂದು ಹೊಗಳಿಸಿ ಕೊಳ್ಳುತ್ತಿದ್ದಾನೆ. 'ಗಿರಿ'ಅಂದರೆ ವೇದವಾಕ್ಯ ವೆಂದೂ, ಶಃ ಎಂದರೆ ಶಯನಿಸಿರುವವನೆಂದು ಅರ್ಥ! ಭಗ ವಂತನು ವೇದ ವಾಕ್ಯದಲ್ಲೇ ನಿವಸಿಸುತ್ತಾನಲ್ಲವೇ!







ಒಳ್ಳೆಯ ಪುಷ್ಪಗಳಿಂದ ಇರುವ ಮರದಿಂದ ಬಹಳ ದೂರದವರೆಗೂ ಸುವಾಸನೆ ಪರಿಮಳ ಹೊರಬರುತ್ತಿರುತ್ತವೆ. ಒಳ್ಳೆಯ ಪುಣ್ಯಕಾರ್ಯಗಳನ್ನು ಮಾಡುವ ಮಾನವನೂ  ಸಹ ಒಳ್ಳೆಯ ಸುವಾಸನೆ ಇರುವ ಪುಷ್ಪಗಳಿಂದ ಕೂಡಿರುವ ವೃಕ್ತ ರೂಪನೇ ಆಗಿದ್ದಾನೆ. ಆತ ವಿಕಸಿಸಿದ ವೃಕ್ಷಕ್ಕೆ ಸಮಾನನಾದವನು. ಅವನು ಮಾಡಿದ ಪುಣ್ಯಕರ್ಮಗಳೇ ಪುಷ್ಪಗಳು. ಪುಣ್ಯಕರ್ಮಗಳು ಮಾಡುವವರ ಮನಸ್ಸು ಎಂದು ಒಳ್ಳೆಯ ಪುಷ್ಪಗಳಂತೆ ಇರುತ್ತವೆ. ಅವರ ಸತ್ಕರ್ಮಗಳೆಂಬ ಪುಷ್ಪಗಳು ವಿಕಸಿಸಿ ಒಳ್ಳೆಯ ಫಲವನ್ನು ನೀಡುತ್ತವೆ. ಪಾಪಕರ್ಮಗಳು ಒಣಗಿ ಹೋದ ಹೂವುಗಳಂತೆ ಕೆಳಗೆ ಉದುರಿ ಹೋಗುತ್ತವೆ. ಸತ್ಪುರುಷನ ಮೂಲಕ ಒಳ್ಳೆಯ ಮಾತುಗಳೇ ಹೊರಬರುತ್ತವೆ. ಇವು ಹೂವುಗಳಂತೆಯೇ! ಈ ಹೂಗಳಿಗಾಗಿ ಲೋಕವು ಹುಡುಕುತ್ತಿರುತ್ತದೆ.

ಸಾಧಾರಣ ಪುಷ್ಪಗಳಿಂದ ಲೋಕವು ಇಷ್ಟು ಅಂದವನ್ನು ಹೊಂದಿದೆ ಎಂದರೆ ಲೋಕೋತ್ತರವಾದ .ದಿವ್ಯವಾದ ವೈದಿಕ ಪುಷ್ಪಗಳಿಂದ ವೇದಪುಷ್ಪಗಳಿಂದ ಇನ್ನೆಷ್ಟು ಆನಂದವನ್ನು ಪಡೆಯಬಹುದು?

ಇಷ್ಟೊಂದು ವಿಶೇಷತೆಯನ್ನು ಹೊಂದಿರುವ ಪುಷ್ಪಗಳು ಪೂಜಾದ್ರವ್ಯಗಳಲ್ಲಿ ಬಹಳ ಪ್ರಧಾನವಾದ ಸ್ಥಾನವನ್ನು ಹೊಂದಿವೆ. ಇದಕ್ಕಾಗಿ ಪ್ರತ್ಯೇಕವಾಗಿ ದೇವಾಲಯಗಳಿಗೆ ಸೇರಿದಂತೆ ಹೂವಿನ ತೋಟಗಳನ್ನು ಬೆಳೆಸುವುದು ಆಲಯದ ಸೇವೆಗಳಲ್ಲಿ ಪ್ರಮುಖ ಸ್ಥಾನವನ್ನು ವಹಿಸುತ್ತದೆ. ಈ ಪುಷ್ಪಗಳ ಸುವಾಸನೆಗಳು ಅತ್ತ ಭಗವಂತನಿಗೆ ಇತ್ತ ಭಕ್ತರಿಗೆ ಬಹಳ ಆನಂದವನ್ನು ಉಲ್ಲಾಸವನ್ನು ಉಂಟುಮಾಡುತ್ತವೆ.

ಚಂಪಕಾಽಶೋಕಪುನ್ನಾಗಮಲ್ಲಿಕಾ ಜಾತಿ ಪಂಕಜಮ್ ।
ಗ್ರಾಹ್ಯಂ ಸುಗಂಧಿಕುಸುಮಂ ನಿರ್ಗಂಧಂ ವರ್ಜಯೇದ್ಧರೇಃ ॥
ಚಂಪಕಂ ಕರವೀರಂ ಚ ಮಲ್ಲೀ ಚಾತ್ಯುತ್ಪಲಾದಿಕಮ್ ।
ದಮನೋಶೀರಲಾ ಮಜ್ಜಾ ತುಲಸ್ಯಾದೀನ್ ಸಮಾಹರೇತ್ ॥

ತುಲಸೀಪೂಜಾನಾದ್ವಿಷ್ಣೋರನ್ಯತ್ರಿ ್ರೀತಿಕರಂ ನ ಚ ।
ನಾಽ ಹರೇತ್ತುಲಸೀ ರಕ್ತಾಂ ಕೃಷ್ಣಾಂ ವಾಪಿ ಹರೇತ್ತಥಾ॥
ನಾಶಯೇತ್ತುಲಸೀ ಕೃಷ್ಣಾ ದತ್ತಾ ಕೇಶವಮೂರ್ಧನಿ ।
ಯದ್ಯುತ್ಪುಷ್ಪಾಣಿ ಚೋಕ್ತಾನಿ ತತ್ತತ್ತತ್ರೈಶ್ಚ ಪೂಜಯೇತ್॥
ಉತ್ಪಲಸ್ಯಾರವಿಂದಸ್ಯ ಕೇತಕ್ಯಾಃ ಪತ್ರಮನ್ಯಥಾ ॥

ಚಂಪಕ, ಪುನ್ನಾಗ, ಅಶೋಕ, ಸುಗಂಧಭರಿತವಾದ ಮಲ್ಲಿಗೆ, ಜಾಜಿ ತಾವರೆಯ ಹೂಗಳು, ಕಣಿಗಲೆ, ಸೂಜಿಮಲ್ಲಿಗೆ ನಿತ್ಯ, ಮಲ್ಲಿಗೆ, ನೈದಿಲೆ, ದವನ, ಲಾವಂಚ, ತುಳಸಿ, ಮೊದಲಾದವುಗಳನ್ನು ದೇವತೆಗಳ ಆರಾಧನೆಗೆ ಉಪಯೋಗಿಸುತ್ತಾರೆ.

ತುಳಸೀ ಪೂಜೆಯಿಂದ ವಿಷ್ಣು ಪ್ರಸನ್ನನಾಗುತ್ತಾನೆ.

ಮೇಲೆ ಹೆಸರಿಸಿದ ಹೂವುಗಳೆಲ್ಲಾ ಕೇವಲ ದೇವತೆಗಳ ಆರಾಧನೆಗೆ ಅಲ್ಲದೇ ಔಷಧಿಗಳಾಗಿಯೂ ಉಪಯೋಗವಾಗುತ್ತವೆ.

ಕಮಲದ ಹೂವು ರಕ್ತಪಿತ್ತವ್ಯಾಧಿಯನ್ನು ನಿವಾರಿಸುತ್ತದೆ (ರಕ್ತದೊತ್ತಡ ) ಕಣ್ಣಿಗೆ ಹಿತವನ್ನುಂಟು ಮಾಡುತ್ತದೆ. ಶರೀರ ತಾಪವನ್ನು ನಿವಾರಿಸುತ್ತದೆ. ಗರ್ಭಸ್ರಾವವಾಗದಂತೆ ತಡೆಯುತ್ತದೆ. ಮಲ್ಲಿಗೆ ಹೂವು ವಾತಪಿತ್ತಗಳನ್ನು ರಕ್ತದೋಷಗಳನ್ನು ನಿವಾರಿಸುತ್ತದೆ. ನೇತ್ರವ್ಯಾಧಿಗಳಿಗೆ ಗುಣಕಾರಿಯಾಗಿದೆ. ಜಾಜಿ ಹೂವು ಶರೀರಕ್ಕೆ ಹಗುರತೆಯನ್ನು ತಂದುಕೊಡುತ್ತದೆ. ಶರೀರವು ಕಾಂತಿವಂತವಾಗುವುದಕ್ಕೆ ಸಹಾಯವಾಗಿದೆ. ಕನ್ನೈದಿಲೆ ಹೂವು ಕಣ್ಣಿನ ದೋಷಗಳನ್ನು ನಿವಾರಿಸುವಲ್ಲಿ ಸಹಕಾರಿಯಾಗಿದೆ. ಹಲವು ಶಾರೀರಕ ಸಮಸ್ಯೆಗಳಿಗೆ ರಾಮ ಬಾಣದಂತೆ ಕೆಲಸ ಮಾಡುತ್ತವೆ. ಇದು ಆರೋಗ್ಯಕರವಾದುದು. ಸಿಡುಬು ರೋಗವನ್ನು ನಿವಾರಿಸುತ್ತದೆ. ಹೃದಯಕ್ಕೆ ಹಿತವನ್ನುಂಟು ಮಾಡುತ್ತದೆ. ಈ ರೀತಿ  ಅನೇಕ ರೀತಿಯ ಪತ್ರ. ಪುಷ್ಪಗಳನ್ನು ಶ್ರೀನಿವಾಸನ ಸೇವೆಯಲ್ಲಿ ಉಪಯೋಗಿಸುತ್ತಿದ್ದಾರೆ. ಇವುಗಳ ಸುವಾಸನೆ, ಸ್ಪರ್ಶದಿಂದಾಗಿ ಅನೇಕ ರೀತಿಯ ದೋಷಗಳು ನಿವಾರಣೆಯಾಗುತ್ತದೆ.

ಭಗವಂತನಿಗೆ ಅರ್ಚಿಸಿದ ಹೂವುಗಳು. ಹಾರಗಳನ್ನು ನಿರ್ಮಾಲ್ಯವೆನ್ನುತ್ತಾರೆ. ಈ ನಿರ್ಮಾಲ್ಯವನ್ನು ಎಲ್ಲೋ ಬಾವಿಗಳಲ್ಲಿ, ಕೆರೆಗಳಲ್ಲಿ ಹಾಕುತ್ತಿದ್ದರು. ಈಗ ಆ ಸಂಪ್ರದಾಯನ್ನು ದೀರ್ಘವಾಗಿ ಪರಿಶೀಲಿಸಿರುವ ಈಗಿನ ತಿ.ತಿ.ದೇ.ಪಾಲಕ ಮಂಡಲಿಯವರು ಅನೇಕ ವೈದ್ಯಗುಣಗಳನ್ನು ಹೊಂದಿರುವ ಪುಷ್ಪಗಳನ್ನು ವೃಥಾ ಮಾಡುವುದಕ್ಕಿಂತಲೂ ಅವನ್ನು ಇಂದಿನ ವೈಜ್ಞಾನಿಕ ಪದ್ಧತಿಗಳನ್ನು ಉಪಯೋಗಿಸಿಕೊಂಡು, ಅವುಗಳಲ್ಲಿರುವ ಔಷಧೀಯ ಗುಣಗಳನ್ನು ಧೂಪ ರೂಪಕ್ಕೆ ಬದಲಿಸಬೇಕೆಂದು ನಿರ್ಧರಿಸಿದ್ದಾರೆ. ಇದಕ್ಕಾಗಿ ಸರಿಯಾದ ಯೋಜನೆಯೊಂದನ್ನು ರೂಪುಗೊಳಿಸಿದ್ದಾರೆ. ವೈಎಸ್.ಆರ್ ಉದ್ಯಾನ ವಿಶ್ವವಿದ್ಯಾಲಯದೊಂದಿಗೆ ಈ ವಿಷಯವನ್ನು ಚರ್ಚಿಸಿ, ಬೆಂಗಳೂರಿಗೆ ಸೇರಿದ ದರ್ಶನ್ ಇಂಟರ್ನೇಷನಲ್ ಸಂಸ್ಥೆಯ ಸಹಕಾರದೊಂದಿಗೆ ಎಸ್ವೀಗೋಶಾಲೆಯಲ್ಲಿ ಅಗರ ಬತ್ತಿಗಳ ತಯಾರಿಕೆಯನ್ನು ಪ್ರಾರಂಭಿಸಿದ್ದಾರೆ.

ತಿರುಮಲೆ ತಿರುಪತಿ ದೇವಸ್ಥಾನದ ಅನು ಬಂಧದ ಆಲಯಗಳಿಂದ ಶೇಖರಿಸಿರುವ ಹೂವುಗಳನ್ನು ಶ್ರೀವೆಂಕಟೇಶ್ವರ ಗೋಸಂರಕ್ಷಣಾ ಶಾಲೆಯಲ್ಲಿನ ಅಗರಬತ್ತಿಗಳ ತಯಾರೀ ಕೇಂದ್ರಕ್ಕೆ ರವಾನಿಸುತ್ತಾರೆ. ಅಲ್ಲಿ ಪ್ರತ್ಯೇಕವಾಗಿ ಶಿಕ್ಷಣವನ್ನು ಪಡೆ

ದಿರುವ ಸಿಬ್ಬಂದಿಯವರು, ಇವನ್ನು ಗುಂಪು ಗುಂಪಾಗಿ ಬೇರ್ಪಡಿಸುತ್ತಾರೆ.

ನಂತರ ಡ್ರೈಯಿಂಗ್ ಯಂತ್ರದ ಸಹಾಯ ದಿಂದ ಅವುಗಳನ್ನು ಪೂರ್ತಿಯಾಗಿ ಒಣಗುವಂತೆ ಮಾಡಿ ಹಿಟ್ಟಿನ ರೂಪಕ್ಕೆ ಬದಲಾಯಿಸುತ್ತಾರೆ. ಅವನ್ನು ಕೆಲವು ಪದಾರ್ಥಗಳೊಂದಿಗೆ ಬೆರೆಸು ತ್ತಾರೆ. ಮಿಶ್ರಣವನ್ನು ಮತ್ತೊಂದು ಯಂತ್ರದಲ್ಲಿ ಹಾಕಿ ಅಗರಬತ್ತಿಗಳನ್ನು ತಯಾರು ಮಾಡುತ್ತಾರೆ. ಸಪ್ತಗಿರಿ ಗಳನ್ನು ಸೂಚಿಸುತ್ತಾ ಅಭಯಹಸ್ತ, ತಂದನಾನ, ದಿವ್ಯಪಾದ, ಕೃಷ್ಟಿ, ಸೃಷ್ಟಿ, ದೃಷ್ಟೀ, ತುಷ್ಟಿ, ಎಂಬ ಹೆಸರುಗಳಿಂದ ತಿ.ತಿ.ದೇ ಅಗರಬತ್ತಿಗಳನ್ನು ೧೩-೦೯-೨೦೨೧ ರಂದು ಬಿಡುಗಡೆ ಮಾಡಿದ್ದಾರೆ.

ಪ್ರತಿದಿನವೂ ಶ್ರೀಹರಿಗೆ ಅರ್ಚಿಸಿದ ಹೂವು ಗಳು ಧೂಪದ ರೂಪದಲ್ಲಿ ಪುನಃ ಸ್ವಾಮಿಗೆ ಸೇವೆ ಮಾಡುವ ಭಾಗ್ಯವನ್ನು ಭಕ್ತರಿಗೆ ಆನಂದವನ್ನುಂಟು ಮಾಡುವ ಭಾಗ್ಯವನ್ನು ನೀಡುತ್ತವೆ. ಪುಷ್ಪಗಳಿಗೆ ಈ ಗುಣವು ಭಗವಂತನು ನೀಡಿರುವ ವರವೆಂದೇ ಹೇಳಬೇಕು. ಈ ನಿಟ್ಟಿನಲ್ಲಿ ಹೆಜ್ಜೆ ಹಾಕುತ್ತಿರುವ ತಿ.ತಿ.ದೇ ಯಾಜಮಾನ್ಯದವರಿಗೆ ಇದು ಅಪೂರ್ವ ವಾದ ಅವಕಾಶವೆಂದೇ ಹೇಳಬಹುದು.

ಈ ಧೂಪಗಳು, ಅಗರಬತ್ತಿಗಳು ಆಲಯ ಗಳನ್ನು, ಪೂಜಾ ಮಂದಿರಗಳನ್ನು ದಿವ್ಯ ಸುಗಂಧ ಮಯವಾಗಿ ಮಾಡುತ್ತಾ ವಾತಾವರಣದ ಕಾಲುಷ್ಯ ವನ್ನು ನಿವಾರಿಸುತ್ತಾ, ಮಹಾಪ್ರಯೋಜನವನ್ನುಂಟು ಮಾಡುತ್ತಿವೆ. ಹಿಂದೆ ಧೂಪವೆಂದರೆ ಅಗ್ನಿಯಲ್ಲಿ ಸಾಂಬ್ರಾಣೀ ಹಾಕುತ್ತಿದ್ದರು. ಅದೇ ಅಲ್ಲದೇ ಹತ್ತು ರೀತಿಯ ವಸ್ತುಗಳು ಅದರಲ್ಲಿ ಸೇರಿರುತ್ತವೆ. ಅದಕ್ಕೇ ಅವನು ದಶಾಂಗ ಎಂದು ಕರೆಯುತ್ತಾರೆ.

1. ಲಾಮಂಚ 2. ಸುಗಂಧ 3. ಮಶೀಸಾಕ್ಷೀ 4. ಕರ್ಪೂರ 5. ಅಗರು 6. ಖರ್ಜೂರ 7. ತುಂಗಮಸ್ತು 8. ಸಾಂಬ್ರಾಣಿ 9. ಹಸುವಿನ ತುಪ್ಪ 10. ರಾಳ (ಸೀಮೆ ಸಾಂಬ್ರಾಣಿ) ಇವೆಲ್ಲವನ್ನೂ ಮಿಶ್ರಮ ಮಾಡಿ ಧೂಪ ದ್ರವ್ಯವನ್ನು ಸಿದ್ಧಗೊಳಿಸಿ ಇವನ್ನು ಅಗ್ನಿಯಲ್ಲಿ ಹಾಕಿ, ಆ ಹೊಗೆಯನ್ನು ಶ್ರೀ ಹರಿಗೆ ಸಮರ್ಪಿಸುತ್ತಿದ್ದರು. ಅದು ದಿವ್ಯ ಧೂಪ ವೆಂದು ಕರೆಯಲ್ಪಡುತ್ತದೆ.

ಈಗ ಅದಕ್ಕೆ ಪ್ರತ್ಯಾಮ್ನಾಯವಾಗಿ ಭಕ್ತರಿಗೆ ಸುಲಭಕರವಾಗಲಿ ಎಂಬ ದೃಷ್ಟಿಯಿಂದ ಶ್ರೀಹರಿಗೆ ಅರ್ಚಿಸಿದ ಹೂವುಗಳಿಂದ ಅಗರಬತ್ತಿಗಳನ್ನು ಮಾಡಿ ಭಕ್ತರಿಗೆ ನೀಡುವುದು ಪರಮಪವಿತ್ರವಾದ ನವೀನ ರೀತಿಯ ಪ್ರಯೋಗವಾಗಿದೆ.

ಧೂಪದ ಸೇವೆಯಿಂದ ಅನೇಕ ವಿಧವಾದ ವ್ಯಾಧಿಗಳಿಂದ ರಕ್ಷಣೆ ದೊರಕುತ್ತದೆ. ಭಗವಂತನ ಮೇಲೆ ಮನಸ್ಸನ್ನು ನಿಲ್ಲುವುದಕ್ಕೆ ವಾತಾವರಣ ಶುದ್ಧಿಗೆ ಒಳ್ಳೆಯ ಭಾವನೆಗಳು ಮೂಡುವುದಕ್ಕೆ ಈ ಧೂಪವಾಸನೆ ಬಹಳ ಸಹಕಾರಿಯಾಗಿದೆ. ಆದ್ದರಿಂದಲೇ ವಿಶ್ವಮಾನವ ಜಾತಿ ಸಮಸ್ತವೂ ಧೂಪ ವಾಸನೆಯನ್ನು ಅಘ್ರಾಣಿಸುತ್ತಲೇ ಇರುತ್ತದೆ. ಅದಕ್ಕೆ ನಮ್ಮ ಹಿರಿಯರು ಪಂಚೋಪಚಾರಗಳಲ್ಲಿ ಧೂಪಕ್ಕೆ ಪ್ರಥಮ ತಾಂಬೂಲವನ್ನು ನೀಡಿದ್ದಾರೆ. ಆದ್ದರಿಂದ ಈ ಸೇವೆ ಮಹಾಸೇವೆ ಎಂದು ಎನಿಸಿಕೊಳ್ಳುತ್ತಿದೆ.

ವಿಶ್ವವೆಲ್ಲಾ ಈ ಸುವಾಸನೆಗಳು ವಾಯುರೂಪದಲ್ಲಿ ಸೇರಿ ದಿವ್ಯಾನು ಭೂತಿಯನ್ನು ಉಂಟು ಮಾಡಬೇಕೆಂಬ ಉದ್ದೇಶ್ಯದಿಂದ ಸಪ್ತಗಿರೀಶನಿಗೆ ಸಪ್ತವಿಧಗಳ ಸುವಾಸನೆಗಳನ್ನು ಹೊಂದಿರುವ ಅಗರಬತ್ತಿಗಳನ್ನು ತಯಾರು ಮಾಡಿ. ಸಪ್ತಗಿರೀಶನ ನಾಮವನ್ನು ಸಾರ್ಥಕ ಮಾಡುತ್ತಿದೆ. ಈ ತಿ.ತಿ.ದೇ ಯಾಜಮಾನ್ಯ.

ವಾಸನ ಎಂಬ ಶಬ್ದಕ್ಕೆ ಭಾವನೆ ಎಂದೂ ಹೆಸರಿದೆ. ಆದ್ದರಿಂದ ಈ ಶ್ರೀಹರಿಗೆ ಅರ್ಚಿಸಿದ ಪುಷ್ಪಗಳಿಂದ ರೂಪುಗೊಳಿಸಿದ ಅಗರಬತ್ತಿಗಳ ವಾಸನೆ ಯನ್ನು ಅಘ್ರಾಣಿಸುವುದರಿಂದ ಅನೇಕ ಶಾರೀರಕ, ಮಾನಸಿಕ ಬಾಧೆಗಳನ್ನು ಪರಿಹರಿಸಿ ಸಧ್ಭಾವನೆಗಳಿಂದ ಮನಸ್ಸು ಪ್ರಶಾಂತವಾಗಿ ಜೀವನ ಭಕ್ತಿ ಭರಿತ ವಾಗಿ ಶ್ರೀವೇಂಕಟೇಶ್ವರನ ಸೇವೆಯಿಂದ ಮತ್ತಷ್ಟು ಧನ್ಯತೆಯನ್ನು ಪಡೆಯ ಬಹುದು.

ಆದ್ದರಿಂದ ಭಕ್ತರೆಲ್ಲರೂ ಈ ಧೂಪದ್ರವ್ಯಗಳನ್ನು ಭಕ್ತಿ ಶ್ರದ್ಧೆಗಳಿಂದ ಸ್ವೀಕರಿಸಿ, ಅವುಗಳನ್ನು ಭಗವಂತನ ಸೇವೆಗೇ ಸಮರ್ಪಿಸಿ ಅತ್ತ ಅಯಾ ಪುಷ್ಪಗಳು, ಪತ್ರಾದಿಗಳ ಜನ್ಮಗಳನ್ನೇ ಅಲ್ಲದೆ ಇತ್ತ ತಮ್ಮ ಜನ್ಮಗಳನ್ನು ಕೃತಾರ್ಥ ವಾಗಿಸಿಕೊಳ್ಳುತ್ತಾರೆಂದು ಆಶಿಸೋಣ.

**ಸ್ವಾಮಿಯ ಆಲಯದಲ್ಲಿ**
**ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್, ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯ ದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರ ಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**



ಧಾರಾವಾಹಿ

# ಹರಿಕಥಾಮೃತಸಾರ ಮಹಿಮೆ ಬಲು ಅಪಾರ


-ಶ್ರೀಮತಿ. ಪ್ರಿಯಾ ಪ್ರಾಣೇಶ ಹರಿದಾಸ ಕಾಖಂಡಕಿ

8059436752


**ಹಿಂದಿನ ಸಂಚಿಕೆಯಲ್ಲಿ...**

ಹರಿಕಥಾಮೃತಸಾರ ಭಗವಂತನ ಗುಣವರ್ಣನೆ ಇದೆ. ಗ್ರಂಥ ಕರ್ತೃ ಶ್ರೀಜಗನ್ನಾಥದಾಸರ ಜೀವನ ಚರಿತ್ರೆ ಓದಿದ್ದೀರಿ. ಹಾಗೇ ಅಹಂಕಾರ ಅಳಿದ ಮೇಲೆ ಗುರುಗಳ ಮತ್ತು ಭಗವಂತನ ಅನುಗ್ರಹದಿಂದ ಮೇರು ಗ್ರಂಥ ರಚನೆ ಮಾಡಿದ ಮಹಾ ಮಹಿಮರು.

**ಮುಂದುವರಿದ ಭಾಗ....**

ಶ್ರೀಜಗನ್ನಾಥದಾಸರು ಹರಿಕಥಾಮೃತಸಾರದ ಮೊದಲ ಮಂಗಳಾಚರಣೆ ಸಂಧಿಯಲ್ಲಿ ಗ್ರಂಥದ ಆರಂಭದಲ್ಲಿ ನಿರ್ವಿಘ್ನ ಸಮಾಪ್ತಿಯಾಗಿ ಹಾಗೂ ಮಂಗಳಾಚರಣೆ ಎನ್ನುವುದು ಶಾಸ್ತ್ರ ವಿಧಿ.

"ಹರಿಕಥಾಮೃತಸಾರ ಗುರುಗಳ /
ಕರುಣಾದಿಂದಾಪನಿತು ಪೇಳುವೆ/
ಪರಮ ಭಗವದ್ಭಕರಿದನಾದರದಿ
ಕೇಳುವುದು " ಎಂದಿದ್ದಾರೆ.

**ಅಪೌರುಷೇಯನಾದ ಭಗವಂತನ**

ಗುಣಗಳ ಬಗ್ಗೆ,ಗುರುಗಳು ಹೇಳಿದುದರಲ್ಲಿ ಯಥಾಮತಿಗೆ ತಿಳಿದಷ್ಟು ಹೇಳುವೆನು.ಶ್ರೇಷ್ಠವಿಷ್ಣು ಭಕ್ತರಾದ ತಾವೆಲ್ಲರೂ ಉಪೇಕ್ಷಿಸದೇ ಭಕ್ತಿ ಮತ್ತು ಆದರದಿಂದ ಕೇಳಿ ಎಂದಿದ್ದಾರೆ. ಇದನ್ನು ಪಠನೆ ಮಾಡುವವರು ಪ್ರತಿಸಂಧಿ ಹೇಳಿದ ನಂತರ ಈ ಪಲ್ಲವಿಯನ್ನು ಅನ್ನಲೇಬೇಕು.ಏಕೆಂದರೆ ನಾವು ಮಾಡುವ ಪ್ರತಿ ಕರ್ಮ855 ನನ್ನದಲ್ಲ ಎಂಬ ಭಾವ ಇಂತಹ ಗುರುಗಳ ವಾಣಿ ನಮಗೆ ನೆನಪಿಸಿಕೊಡುತ್ತದೆ.

**ಮಂಗಳಾಚರಣೆ ಸಂಧಿಯಲ್ಲಿ**

ಒಂದು ವಿಶೇಷವಿದೆ ಈ ಸಂಧಿಯಲ್ಲಿ 13 ನುಡಿಗಳು ಇವೆ.

ಅಜ್ಞಾನವೆಂಬ ಕತ್ತಲೆಯನ್ನು ತೊಲಗಿಸುವ ದೀಪ. ದೀಪ ಸಂಖ್ಯಾಶಾಸ್ತ್ರದಲ್ಲಿ, 13 ಸಂಖ್ಯೆಯನ್ನು ತಿಳಿಸುತ್ತದೆ. ದೀಪದಲ್ಲಿ ಭಗವಂತನ ರೂಪಗಳು.(ವ್ಯಂಜನಾಕ್ಷರದಲ್ಲಿ ದಿ--3 ಪ--1 ಸಂಖ್ಯೆಗಳನ್ನು ಬಲದಿಂದ ಎಡಕ್ಕೆ ಓದಬೇಕು ಎಂಬ ನಿಯಮದಂತೆ ದೀಪ 13 ಆಗುತ್ತದೆ) ಹೀಗಾಗಿ ಈ ಸಂಧಿಯಲ್ಲಿ 13 ನುಡಿಗಳಿವೆ.

ಹೀಗಾಗಿ ಹರಿಕಥಾಮೃತಸಾರದ ಚಿಂತನ ಮಂಥನ ಮಾಡಿದಾಗ ಮತಿಗೆ ನಿಲಕದಷ್ಟು ಸ್ಥಿಮಿತವಿಲ್ಲದ ನೂತನವಾಗಿ ವಿಷಯಗಳು ತಿಳಿಯುತ್ತದೆ.

ಸರ್ವೋತ್ತಮನಾದ ಶ್ರೀಹರಿಯ, ದಶಾವತಾರದ ಐದನೇ ಅವತಾರವಾದ ನರಸಿಂಹ ದೇವರ ಸ್ತುತಿ ಮತ್ತು ರಮಾದೇವಿ, ಬ್ರಹ್ಮ, ವಾಯು, ಸರಸ್ವತಿ ಹಾಗೂ ಭಾರತಿದೇವಿಯನ್ನು ಸ್ತುತಿಸಿ ಬಳಿಕ ಭಗವಂತನ ಇನ್ನೊಂದು ರೂಪವಾದ ವೇದ ವ್ಯಾಸರು ಮತ್ತು ಶ್ರೀಮದಾಚಾರ್ಯರು,ಸ್ಮರಿಸಿ (ಹರಿದಾಸ ಸಾಹಿತ್ಯದ ಬೀಜ ಬಿತ್ತಿದವರು), ಮನೋನಿಯಾಮಕ ರುದ್ರದೇವರು ಹಾಗೂ ಇಂದ್ರಾದಿಗಳ ಸ್ತುತಿಸಿ ಕೊನೆಗೆ 13ನೇ ನುಡಿಯಲ್ಲಿ ಎಲ್ಲ ದೇವತೆಗಳ ಸ್ಮರಣೆಯ ಕಾರಣ ತಿಳಿಸಿದ್ದಾರೆ.

ತಾರತಮ್ಯೋಕ್ತ ದೇವತೆಗಳು ಎಂದರೆ, ಅವರವರ ಯೋಗ್ತಾನುಸಾರ ಶ್ರೇಷ್ಟತೆಯನ್ನು ಹೊಂದಿರುತ್ತಾರೆ.ಹೀಗಾಗಿ ಎಲ್ಲ ದೇವತೆಗಳಲ್ಲಿಯೂ ಅವರ ಅಂತರ್ಗತನಾಗಿ ಶ್ರೀಹರಿ ಕಾರ್ಯ ಕಾರಣನಾಗುತ್ತಾರೆ. ಉದಾಹರಣೆಗೆ ಹೇಳಬೇಕಾ ದರೆ ಒಂದೇ ಕುಟುಂಬದಲ್ಲಿ ಒಂದೇ ತಾಯಿಯ ಗರ್ಭದಿಂದ ಹುಟ್ಟಿದ ಮಕ್ಕಳ ಸಾಮರ್ಥ್ಯ ಮತ್ತು ಬುದ್ಧಿಶಕ್ತಿ ಹೇಗೆ ಬೇರೆ ಬೇರೆ ಇರುತ್ತದೆಯೋ ಹಾಗೇ ಬ್ರಹ್ಮಾದಿ ದೇವತೆಗಳಲ್ಲಿಯೂ ಅವರವರ ಯೋಗ್ಯತೆ ಮತ್ತು ಶ್ರೇಷ್ಟತೆ ಬೇರೆ ಬೇರೆ ಇರುತ್ತದೆ. ಉದಾಹರಣೆಗೆ ಹೇಳಬೇಕಾದರೆ

ಭಗವಂತನ ಸೃಷ್ಟಿಯಲ್ಲಿ ಪ್ರತಿಯೊಬ್ಬ ದೇವತೆಯೂ ಮತ್ತು ಅಸುರ ದೇವತೆಯೂ, ಸೃಷ್ಟಿಯಾದಿಯಾಗಿ ನಮ್ಮ ಇಂದ್ರೀಯಗಳಿಗೆ ನಿಯಾಮಕರಾಗಿದ್ದಾರೆ.ಸುರದೇವತೆ ಆರೋಗ್ಯ ಮತ್ತು ಒಳ್ಳೆಯ ಸುಬುದ್ಧಿಗೆ ನಿಯಾಮಕರು ಆದರೆ ಅಸುರ ದೇವತೆಗಳು ಅನಾರೋಗ್ಯ ಮತ್ತು ಕುಬುದ್ಧಿಗೆ ನಿಯಾಮಕರಾಗಿರುತ್ತಾರೆ.

**ಮೊದಲ ನುಡಿಯಲ್ಲಿ,**

ಶ್ರೀರಮಣಿಕರಕಮಲಪೂಜಿತ

ಚಾರುಚರಣಸರೋಜ ಬ್ರಹ್ಮ ಸಮೀರವಾಣಿ

ಫಣೀಂದ್ರ ವೀಂದ್ರ ಭವೇಂದ್ರ ಮುಖವಿನುತ//

ನೀರಜಭವಾಂಡೋದಯಸ್ಥಿತಿ/

ಕಾರಣನೆ ಕೈವಲ್ಯದಾಯಕ/

ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವಾ//

ಭಗವಂತನು ಕೊನೆಗೆ ಲಯ ನೀಡಿ ಮೋಕ್ಷ ನೀಡುವ ನರ ಸಿಂಹ ದೇವರನ್ನು ಮೊದಲು ಸ್ಮರಿಸಿದ್ದಾರೆ.

ಶ್ರೀಹರಿಯು ಬ್ರಹ್ಮ, ವಾಯುದೇವರು, ಸರಸ್ವತಿ, ಭಾರತಿ ದೇವಿಯರು, ಶೇಷ, ಗರುಡ ರುದ್ರ, ಇಂದ್ರ ಮೊದಲಾದವರಿಂದ ಶೃತಿ ಸ್ಮೃತಿ ಪುರಾಣಗಳಲ್ಲಿ ಹೇಳಿದಂತೆ ಸ್ತುತಿಸಲ್ಪಡುತ್ತಾನೆ. ಶ್ರೀಹರಿಯನ್ನು ಲಕ್ಷ್ಮಿ ತನ್ನ ಕರಗಳಿಂದ ಪೂಜೆ ಮಾಡುತ್ತಿದ್ದರೆ ಬ್ರಹ್ಮಾದಿದೇವತೆಗಳು ಸ್ತೋತ್ರ ಮಾಡುತ್ತಿರುತ್ತಾರೆ. ಇದೊಂದು ವಿಶಿಷ್ಟತ್ವ ಹೊಂದಿದೆ.

ಜಗುದದರನತಿ ವಿಮಲಗುಣರೂಪ॥
ಗಳನಾಲೋಚನದಿ ಭಾರತ॥
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ॥
ಬಗೆಬಗೆಯ ನೂತನವ ಕಾಣುತ ॥
ಮಿಗೆ ಹರುಷದಿಂ ಪೊಗಳಿ ಹಿಗ್ಗುವ॥
ತ್ರಿಗುಣಮಾನಿ ಮಹಾಲಕುಮಿ ಸಂತೈಸಲನುದಿನವು॥

ಮೂಲ ಪ್ರಕೃತಿಗೆ ಅಭಿಮಾನ ದೇವತೆ ಲಕ್ಷ್ಮಿ, ಇವಳು ಪ್ರಕೃತಿಗೆ ಅಭಿಮಾನ ದೇವತೆ ಲಕ್ಷ್ಮಿ.ಇವಳು ಪ್ರಕೃತಿಯಲ್ಲಿ ಶ್ರೀ ಭೂ, ದುರ್ಗಾ ರೂಪದಿಂದ ಸತ್ವ, ರಜ, ತಮೋ ಗುಣಗಳಿಗೆ ನಿಯಾಮಕ ಆಗಿದ್ದಾಳೆ. ಭಗವಂತನು ಜಗತ್ತನ್ನು ತನ್ನ ಉದರದಲ್ಲಿ ಇಟ್ಟುಕೊಂಡವನು. ಪರಮಾತ್ಮನ ಅನಂತವಾದ ಗುಣ ಗಳನ್ನು ಕೊನೆಗಾಣದೆ ನಿತ್ಯ ವಿಶೇಷವಾಗಿ ಕಾಣುತ್ತಾ ಸ್ತುತಿಸುತ್ತಾಳೆ.

ಇನ್ನು ನಾಲ್ಕನೇ ನುಡಿಯಲ್ಲಿ ಬ್ರಹ್ಮದೇವರ ಸ್ತುತಿಸಿ, ವಾಯು ದೇವರ ಸ್ಮರಣೆ ಮಾಡುತ್ತಾರೆ. ಏಕೆಂದರೆ ನಾವುಗಳು ಏನಾದರೂ ಒಂದು ಸೇವೆ ಮಾಡಿದರೆ ಹೇಳಿಕೊಳ್ಳುತ್ತೇವೆ, ಅಥವಾ ಬೇಸರಿಸುತ್ತೇವೆ.ಆದರೆ ವಾಯುದೇವರು ಹೇಳಿಕೊಳ್ಳದೇ ಮತ್ತು ಬೇಸರಿಸದೇ ನಿತ್ಯ ಜೀವನದಲ್ಲಿ ವಾಯುದೇವರು ಪ್ರತಿಯೊಬ್ಬನಲ್ಲಿ 21600 ಶ್ವಾಸ ಜಪ ಮಾಡುತ್ತಾ, ಬಿಂಬರೂಪಿ ಭಗವಂತನ ಸೇವೆ ಅನವರತ ಮಾಡುತ್ತಾರೆ. ಭಗವಂತ ವಾಯು ದೇವರ ಮೂಲಕ ಸಾತ್ವಿಕರಿಗೆ ಸುಖ,ಮೋಕ್ಷವನ್ನು ಮತ್ತು ಮಿಶ್ರರಿಗೆ ಸುಖ ದುಃಖವನ್ನು ಅಧಮ ಜನರಿಗೆ ಅಪಾರವಾಗಿ ಕೊನೆಯಿಲ್ಲದ ದುಃಖವನ್ನು ಕೊಡುತ್ತಾನೆ.

ಹಾಗೇ ವೇದಗಳ ಸಮೂಹಕ್ಕೆ ಅಭಿಮಾನಿ ದೇವತೆಯಾದ ನಿರ್ಮಲ ಜ್ಞಾನವುಳ್ಳ ಸರಸ್ವತಿಯಲ್ಲಿ ನಮಗೆ ಸನ್ಮತಿ ಕರು ಣಿಸು ಎಂದಿದ್ದಾರೆ. ರುದ್ರದೇವರನ್ನು, ಇಂದ್ರನನ್ನು, ಋಷಿ ಗಳಿಗೆ ಪಿತೃಗಣ ನೆನೆದಿದ್ದಾರೆ. ಶ್ರೀಮದ ಆಚಾರ್ಯರ ಪಂಚಭೇದಾತ್ಮಕದಲ್ಲಿ ಅನಿರುದ್ಧಾದಿ ಪಂಚರೂಪಿ ಭಗವಂತ ರೂಪಗಳನ್ನು ತಿಳಿಸಿದ್ದಾರೆ.25 ತತ್ವಗಳಲ್ಲಿ 25 ರೂಪಗಳು ಹೇಳಿದ್ದಾರೆ. ನಂತರ ಸಕಲ ಯತಿಗಳ ಸಮೂಹ ಮತ್ತು ಹ ಕೊನೆ ನುಡಿಯಲ್ಲಿ..

ಪರಿಮಳವು ಸುಮನದೊಳಗನಲ
ನರಣಿಯೊಳಗಿಪ್ಪಂತೆ ದಾಮೋದರನು ಬ್ರಹ್ಮಾದಿಗಳ ಮನದಲಿ ತೋರಿ ತೋರದಲೆ॥
ಇರುತಿಹೆ ಜಗನ್ನಾಥವಿಠಲನ ಕರುಣ ಪಡೆವ ಮುಮುಕ್ಷು ಜೀವರು॥
ಪರಮಭಾಗವತರನು ಕೊಂಡಾಡುವುದು ಪ್ರತಿದಿನವು॥

ಅಂದರೆ ಹೂವಿನೊಳಗಿನ ಸುಗಂಧ ಆಗ್ರಾಣ ಮಾಡಿದಾಗಲೇ ಸುಗಂಧದ ಸತ್ಯ ಗೊತ್ತಾಗುವುದು, ಕಟ್ಟಿಗೆಯಲ್ಲಿ ಬೆಂಕಿಯಿದೆ ಆದರೆ ಘರ್ಷಣೆಯಿಂದ ಕಾಣುವುದು, ಹಾಗೇ ಪ್ರತಿಯೊಬ್ಬ ಜೀವಿಯಲ್ಲಿಯೂ ಜ್ಞಾನ ಇರುತ್ತದೆ.

ಸದ್ಗ್ರಂಥ ಪಠಣೆ, ಭಗವದ್ಭಕ್ತರ ಸಂಗ, ಪಾಠ ಪ್ರವಚನ ಇದ್ದರೆ ಮಾತ್ರ ಭಗವಂತನ ದಯೆಯಿಂದ ಜ್ಞಾನೋದ ಯವಾಗಿ ಸಜ್ಜೀವಿಯಾಗುತ್ತಾನೆ.

ಮುಂದಿನ ಭಾಗದಲ್ಲಿ ಕರುಣಾಸಂಧಿ (ಶ್ರೀ ಹರಿಯ ಕರುಣೆ ಬಗ್ಗೆ)

ಮುಂದುವರಿಯುವುದು....


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

ಹಿಂದೂ ಚಾಂದ್ರಮಾನ ಪದ್ಧತಿಯ ಪಂಚಾಂಗದ ಪ್ರಕಾರ ಚೈತ್ರ ಶುದ್ಧ ಪ್ರತಿಪದೆಯೆಂದು ಬರುವ (ಪಾಡ್ಯ) ಯುಗಾದಿ ಹಬ್ಬದಿಂದ ಹೊಸ ಸಂವತ್ಸರ ಅಥವಾ ವರ್ಷವು ಪ್ರಾರಂಭವಾಗುತ್ತದೆ. ಸಂವತ್ಸರದಲ್ಲಿ ಹನ್ನೆರಡು ಮಾಸಗಳಿರುತ್ತವೆ. ನಮ್ಮ ದೇಶದ ಹವಾಮಾನ, ಋತುಮಾನ ಪರಿಸ್ಥಿತಿಯಂತೆ ಎರಡೆರಡು ಮಾಸಗಳಿಗೆ ಒಂದೊಂದು ಋತು.ಚೈತ್ರ-ವೈಶಾಖ ವಸಂತ ಋತುವಾದರೆ, ಜ್ಯೇಷ್ಠ-ಆಷಾಢ ಮಾಸಗಳಲ್ಲಿ ಗ್ರೀಷ್ಮ ಋತು ಇರುತ್ತದೆ. ಚೈತ್ರಮಾಸದಲ್ಲಿ ಗಿಡಮರಗಳು ಚಿಗುರಿ ಹಚ್ಚಹಸಿರಿನಿಂದ ನಳನಳಸಿ ಹೊಸಜೀವ ಪಡೆಯುತ್ತವೆ, ಹೂವು, ಹಣ್ಣು, ಹಂಪಲುಗಳನ್ನು ಬಿಡುತ್ತವೆ. ಗ್ರೀಷ್ಮ ಋತುವಿನಲ್ಲಿ ಬರುವ ಆಷಾಢ ಮಾಸದಲ್ಲಿ ಬಲವಾದ ಗಾಳಿ ಬೀಸತೊಡಗುತ್ತದೆ. ಮೋಡಗಳು ಚಲಿಸಿ, ಮಳೆಯ ಆರಂಭವಾಗುತ್ತದೆ. ರೈತರು ವ್ಯವಸಾಯದಲ್ಲಿ ತೊಡುಗುತ್ತಾರೆ. ಸೌರಮಾನದ ಪ್ರಕಾರ ಆಷಾಢಮಾಸವನ್ನು ಆಡಿಮಾಸ ಅಥವಾ ಕಟಕಮಾಸ ಎನ್ನುತ್ತಾರೆ. 2022 ರ ಜೂನ್ ತಿಂಗಳ ಕೊನೆಯಲ್ಲಿ ಪ್ರಾರಂಭವಾಗಿ,ಜುಲೈ ತಿಂಗಳ 28 ನೇ ತಾರೀಖಿನವರೆಗೆ ಅಷಾಢಮಾಸವಿರುತ್ತದೆ. ಆಷಾಢ ಮಾಸವು ದೇವತಾರಾಧನೆಗೆ ವ್ರತ ಮತ್ತು ಪೂಜೆಗಳಿಗೆ ಮಹತ್ವವನ್ನು ಪಡೆದಿದೆ.

**ಆಷಾಢ ಶುದ್ಧ ಏಕಾದಶಿ ಅಥವಾ ಪ್ರಥಮ ಏಕಾದಶಿ**

ಆಷಾಢಮಾಸದ ಶುಕ್ಲಪಕ್ಷದ ಏಕಾದಶಿಯನ್ನು ಪ್ರಥಮ ಏಕಾದಶಿ ಎಂದು ಕರೆಯುತ್ತಾರೆ. ಪ್ರಥಮ ಏಕಾದಶಿಯಿಂದ ಹಬ್ಬಗಳ ಸಾಲು ಆರಂಭವಾಗುತ್ತವೆ. ಈ ದಿನ ವಿಷ್ಣು ಶಯನೋತ್ಸವವನ್ನು ಆಚರಿಸುತ್ತಾರೆ. ವಿಷ್ಣು ಅಥವಾ ನಾರಾಯಣನು ಯೋಗನಿದ್ರೆಯನ್ನು ಆರಂಭಿಸುವ ದ್ವಾದಶಿಯ ಹಿಂದಿನ ದಿವಸವಾದ ಪ್ರಥಮ ಏಕಾದಶಿಯಂದು ಶ್ರೀವೈಷ್ಣವ ಅಥವಾ ಮಾಧ್ವ ಪಂಥವರು ತಮ್ಮ ಮಠಾಧಿಪತಿಗಳಿಂದ ತಪ್ತ ಮುದ್ರಧಾರಣೆಯನ್ನು ಮಾಡಿಸಿಕೊಂಡು ಶರೀರವನ್ನು ಶುದ್ಧಿ ಮಾಡಿಕೊಳ್ಳುತ್ತಾರೆ. ಮುದ್ರಾಧಾರಣೆಯಿಂದ ಆರೋಗ್ಯವೂ ವೃದ್ಧಿಯಾಗುತ್ತದೆ. ಪ್ರಥಮ ಏಕಾದಶಿಯನ್ನು ಜನ ಸಾಮಾನ್ಯರು ಉಪವಾಸದ ಹಬ್ಬ ಎಂದು ಕರೆಯುತ್ತಾರೆ. ಈ ದಿನ ಎಲ್ಲ ಪಂಥದವರೂ ಕೂಡಾ ಸಂಕಲ್ಪ ಮಾಡಿ ಉಪವಾಸ ವ್ರತ ಆಚರಿಸುತ್ತಾರೆ.ವೈಷ್ಣವರು ಅಷ್ಟಾಕ್ಷರ "ಓಂ ನಮೋ ನಾರಾಯಣಾಯ" ಎಂಬ ಮಹಾಮಂತ್ರದಿಂದ ಸಂಕಲ್ಪ ಮಾಡಿ, ಉಪವಾಸ,ಜಾಗರಣೆ ಮಾಡಿ, ನವವಿಧ ಭಕ್ತಿಯಿಂದ ನಾರಾಯಣನ ಅರ್ಚನೆ ಮಾಡುತ್ತಾರೆ. ಶೈವರು ರುದ್ರ ಗಾಯತ್ರಿಯಿಂದ ಸಂಕಲ್ಪ ಮಾಡಿ,ರುದ್ರಾಭಿಷೇಕ ಮತ್ತು ಈಶ್ವರನ ಪೂಜೆಯನ್ನು ಮಾಡುತ್ತಾರೆ. ಮಾರನೆಯ ದಿನ ದ್ವಾದಶಿಯಂದು ದೇವಪೂಜೆ, ಬ್ರಾಹ್ಮಣ ಭೋಜನ ಮಾಡಿಸಿ ಪಾರಣೆ ಮಾಡುತ್ತಾರೆ.

**ಭೀಮನ ಅಮಾವಾಸ್ಯೆ - ಆಷಾಢ ಮಾಸದ ಅಮಾವಾಸ್ಯೆ**

ಆಷಾಢ ಮಾಸದ ಕೊನೆಯ ದಿನ ಅಥವಾ ಬಹುಳ ಅಮಾವಾಸ್ಯೆಯೆಂದು ಮದುವೆಯಾಗ ಬೇಕಾದ ಕನ್ಯಾಮಣಿಗಳು ಮತ್ತು ಮದುವೆಯಾದ ಗೃಹಿಣಿಯರು,ತಪ್ಪದೇ ಜ್ಯೋತಿರ್ಭೀಮೇಶ್ವರ ವ್ರತ ಅಥವಾ ಪತಿಸಂಜೀವಿನಿ ವ್ರತವನ್ನು ಬಹಳ ನೇಮನಿಷ್ಠೆಗಳಿಂದ ಆಚರಿಸುತ್ತಾರೆ. ಈ ವ್ರತದ ಆಚರಣೆಯ ವಿಧಾನ ಮತ್ತು ಮಹತ್ವವು ಭವಿಷ್ಯೋತ್ತರ ಪುರಾಣದಲ್ಲಿ ವಿವರಿಸಲ್ಪಟ್ಟಿದೆ. ಮುಖ್ಯವಾಗಿ ಜ್ಯೋತಿರ್ಭೀಮೇಶ್ವರ ಸ್ವರೂಪದ ಜ್ಯೋತಿಸ್ಥಂಭಕ್ಕೆ (ದೀಪದ ಕಂಬ) ಹಸಿದಾರದಿಂದ ಅರಿಶಿನ ಕೊನೆಯನ್ನು ಕಟ್ಟಿ,



# ಆಷಾಢ ಮಾಸದ ಮಹತ್ವ

- ಡಾ.ಎಸ್.ನಂಜುಂಡಸ್ವಾಮಿ

7899011310

ಅದನ್ನು ಮಣೆಯ ಮೇಲೆ ಹರಡಿದ ಧಾನ್ಯ ರಾಶಿಯ ಮೇಲೆ ಅಂದರೆ ಅಕ್ಕಿಯ ಮೇಲೆ ನಿಲ್ಲಿಸಿ, ಉಮಾಮಹೇಶ್ವರರ ಚಿತ್ರಪಟ ವನ್ನು ಇಟ್ಟು ಜ್ಯೋತಿಯನ್ನು ಬೆಳಗುತ್ತಾರೆ.ಒಂಬತ್ತು ಗಂಟು ಹಾಕಿದ ದಾರವನ್ನು ದೇವರ ಮುಂದಿಟ್ಟು ಸಂಪ್ರದಾಯದ ಪ್ರಕಾರ ಪೂಜಿಸುತ್ತಾರೆ.ಕೊನೆಯಲ್ಲಿ ಆರತಿ ಎತ್ತಿ. ಕನ್ಯೆಯರು ಉತ್ತಮ ವರನೊಡನೆ ಬೇಗ ಮದುವೆ ಆಗಬೇಕೆಂದೂ, ಮುತ್ತೈದೆಯರು ದೀರ್ಘ ಸೌಮಾಂಗಲ್ಯತ್ವವನ್ನು ಕರುಣಿಸಬೇಕೆಂದು ಪಾರ್ವತಿ ಪರಮೇಶ್ವರರಲ್ಲಿ ಪ್ರಾರ್ಥಿಸುತ್ತಾರೆ. ಒಂಬತ್ತು ಗಂಟಿನ ದಾರವನ್ನು ಕೈಗೆ ಕಟ್ಟಿಸಿಕೊಳ್ಳುತ್ತಾರೆ.ಅಣ್ಣ ತಮ್ಮಂದಿ ರಿಂದ ಹೊಸಿಲ ಮೇಲೆ ಭಂಡಾರ ಇಟ್ಟು ಒಡೆಸುತ್ತಾರೆ.ಅದರಲ್ಲಿರುವ ಧನಕನಕವನ್ನು ಅಣ್ಣ ತಮ್ಮಂದಿರು ತೆಗೆದುಕೊಂಡು ಅಕ್ಕ ತಂಗಿಯರಿಗೆ ಒಳಿತನ್ನು ಬಯಸುತ್ತಾರೆ. ಮದುವೆಯಾದ ಮೇಲೆ ಒಂಬತ್ತು ವರ್ಷಗಳವರೆಗೆ ಈ ವ್ರತವನ್ನು ಆಚರಿಸಬೇಕೆಂಬುದು ಈ ಒಂಬತ್ತು ಗಂಟಿನ ದಾರದ ಸಂಕೇತವಾಗಿದೆ.

ಜ್ಯೋತಿರ್‌ಭೀಮೇಶ್ವರ ವ್ರತದ ಕಥೆ ಹೀಗಿದೆ.ಸೌರಾಷ್ಟ್ರ ದೇಶದಲ್ಲಿ ವಜ್ರಬಾಹು ಎಂಬ ರಾಜನಿದ್ದ ಅವನಿಗೆ ವಿಜಯಶೇಖರನೆಂಬ ಒಬ್ಬ ಮಗ. ಈತನು ಯೌವ್ವನದಲ್ಲಿಯೇ ಮೃತನಾದನು. ಮದುವೆಯಾಗದ ಮಗನ ಮೃತ ಶರೀರವನ್ನು ಸಂಸ್ಕಾರ ಮಾಡುವಂತೆ ಇರಲಿಲ್ಲ.ಆಗ ರಾಜನು ನನ್ನ ಮಗನನ್ನು ಯಾರು ಮದುವೆಯಾಗುತ್ತಾರೋ ಅವರಿಗೆ ಲಕ್ಷ ಧನವನ್ನು ನೀಡುವುದಾಗಿ ಪ್ರಕಟಿಸಿದನು. ಅದೇ ಪಟ್ಟಣದಲ್ಲಿ ಮಾಧವನೆಂಬ ಅತೀ ದರಿದ್ರಾ ವಸ್ಥೆಯಲ್ಲಿದ್ದ ಒಬ್ಬ ಬ್ರಾಹ್ಮಣನಿದ್ದನು.ಆ ಬ್ರಾಹ್ಮಣ ದಂಪತಿಗಳು ಕಾಶೀ ಯಾತ್ರೆಯನ್ನು ಕೈಗೊಂಡು ಮಗಳನ್ನು ಮಗ ಸೊಸೆಯ ರಕ್ಷಣೆಯಲ್ಲಿ ಬಿಟ್ಟು ಹೋಗಿದ್ದರು.ಆ ಕನ್ಯೆಯನ್ನು ಅವಳ ಅಣ್ಣ ಅತ್ತಿಗೆಯರು,ಮರಣ ಹೊಂದಿದ್ದ ಮಹಾರಾಜನ ಮಗನ ಮೃತ ಶರೀರದ ಜೊತೆ ಮದುವೆ ಮಾಡಿಸಿ ಧನಕನಕ ಪಡೆದುಕೊಳ್ಳುತ್ತಾರೆ. ಮಹಾರಾಜನು ತನ್ನ ಮಗನ ಮೃತ ಶರೀರದ ಜೊತೆ ಆ ಕನ್ಯೆಯನ್ನು ಕೂರಿಸಿ ತೆಪ್ಪದ ಮೇಲಿಟ್ಟು ನದಿಯಲ್ಲಿ ತೇಲಿ ಬಿಡುತ್ತಾನೆ. ತೆಪ್ಪವು ನದಿಯ ಇನ್ನೊಂದು ದಡಕ್ಕೆ ಹೋಗುತ್ತದೆ. ಅಮಾವಾಸ್ಯೆಯ ದಿನವಾದ ಅಂದು ಅಲ್ಲಿ ಕೆಲವು ಹುಡುಗರು ತಾವು ತಮ್ಮ ಅಕ್ಕ ತಂಗಿಯರು ಮಾಡಿದ ಪೂಜೆಯಲ್ಲಿ ಭಾಗವಹಿಸಿ ಭಂಡಾರ ಒಡೆದ ವಿಷಯ ಮಾತನಾಡಿಕೊಳ್ಳುತ್ತಿರುತ್ತಾರೆ. ಅದೇನೆಂದು ವಿಚಾರಿಸಲು, ಅವರು ಪತಿ ಸಂಜೀವಿನಿ ವ್ರತದ ವಿಚಾರ ತಿಳಿಸುತ್ತಾರೆ.ಈ ಕನ್ಯೆಯೂ ಕೂಡಾ,ಬಹಳ ಭಕ್ತಿಭಾವನೆಯಿಂದ, ಪತಿಯನ್ನು ಬದುಕಿಸಿ ಸೌಭಾಗ್ಯವನ್ನು ಕರುಣಿಸಬೇಕೆಂದು, ಪಾರ್ವತಿ ಪರಮೇಶ್ವರರನ್ನು ಪ್ರಾರ್ಥಿಸಿ ಇದ್ದುದರಲ್ಲಿಯೇ ಅಗತ್ಯ ಸಾಮಗ್ರಿಗಳನ್ನು ಹೊಂದಿಸಿಕೊಂಡು ಪತಿ ಸಂಜೀವಿನಿ ವ್ರತವನ್ನು ಮಾಡುತ್ತಾಳೆ. ಭಂಡಾರ ಒಡೆಯುವವರು ಇಲ್ಲವೆಂದು ವ್ಯಥೆ ಪಡುತ್ತಿರಲು, ಅವಳ ಭಕ್ತಿಗೆ ಮೆಚ್ಚಿದ ಶಿವನು ವೇಷ ಮರೆಸಿ ತಾನೇ ಭಂಡಾರವನ್ನು ಒಡೆಯುವುದಾಗಿ ಹೇಳಿ ಅವಳ ಇಚ್ಛೆಯನ್ನು ಪೂರೈಸುತ್ತಾನೆ.ಅವಳ ಭಕ್ತಿಗೆ ಮೆಚ್ಚಿದ ಪಾರ್ವತಿ ಪರಮೇಶ್ವರರು ಪ್ರತ್ಯಕ್ಷರಾಗಿ ಆಕೆಯ ಗಂಡನನ್ನು ಬದುಕಿಸುತ್ತಾರೆ. ಪತಿಯೊಡನೆ ರಾಜ್ಯಕ್ಕೆ ಬಂದು,ರಾಣಿಯಾಗಿ,ತಂದೆ ತಾಯಿಯ,ಅಣ್ಣ ತಮ್ಮಂದಿರ



ಜೊತೆ ಸೇರುತ್ತಾಳೆ.ಈ ಕಥೆಯು ಅಲ್ಪ ಸ್ವಲ್ಪ ವ್ಯತ್ಯಾಸಗಳೊಡನೆ ಬೇರೆ ಬೇರೆ ರೀತಿಯಲ್ಲಿ ಹೇಳಲ್ಪಟ್ಟಿದ್ದರೂ ಅದರ ಫಲಶ್ರುತಿ ಒಂದೇ ಆಗಿದೆ. ಭೀಮನ ಅಮಾವಾಸ್ಯೆ ಸಂಪ್ರದಾಯದ ಹಾಡು ಪ್ರಚಲಿತದಲ್ಲಿದೆ.ಉತ್ತರ ಕರ್ನಾಟಕದಲ್ಲಿ ಇದನ್ನು ದಿವಸೀ ಅಮಾವಾಸ್ಯೆ ಎಂದು ಹೇಳುತ್ತಾರೆ. ಆದರೆ ಆಚರಣೆಯ ವಿಧಾನ ಒಂದೇ.ಈ ದಿನವನ್ನೂ ನಾಗರ ಅಮಾವಾಸ್ಯೆ ಎಂದೂ ಆಚರಿಸುತ್ತಾರೆ.

**ಚಾತುರ್ಮಾಸ**

ಆಷಾಢ ಶುದ್ಧ ದಶಮಿಯಂದು ಪ್ರಾರಂಭವಾಗಿ ಕಾರ್ತೀಕ ಶುದ್ಧ ದಶಮಿಯವರೆಗಿನ ನಾಲ್ಕು ತಿಂಗಳನ್ನು ಚಾತುರ್ಮಾಸ ಎನ್ನುತ್ತಾರೆ. ಇದನ್ನು ಶಾಖವ್ರತ, ದಧಿವ್ರತ, ಕ್ಷೀರ ವ್ರತ, ದ್ವಿದಲವ್ರತ ಎಂದು ವಿಂಗಡಿಸಲಾಗಿದೆ.ಆಷಾಢ ಮಾಸದಲ್ಲಿ ಗಾಳಿ,ಮಳೆಯು ಆರಂಭವಾಗಿರುತ್ತದೆ.ಹಾವುಹಲ್ಲಿ ಹುಳಹುಪ್ಪಟೆ ಮೊದಲಾದ ಜಂತುಗಳು ಭೂಮಿಯ ಮೇಲೆ ಸಂಚಾರ ಮಾಡುತ್ತಿರುತ್ತವೆ.ಜೊತೆಗೆ ಗುಡುಗು ಸಿಡಿಲುಗಳ ಕಾಟ, ಮರಗಳು ಮುರಿದು ಬೀಳುವ ಅಪಾಯ, ಮನುಷ್ಯರಿಂದ ಪ್ರಾಣಿಗಳವರೆಗೆ ಯಾರಿಗೂ ಪ್ರಾಣ ಹಾನಿಯಾಗಬಾರದು, ಅದರಿಂದ ನಮಗೆ ಪಾಪ ಬರಬಾರದು ಎಂದು ಈ ಸಂದರ್ಭದಲ್ಲಿ ಸನ್ಯಾಸಿ



ಗಳು, ಮಠಾಧಿಪತಿಗಳು ಒಂದೇ ಕಡೆ ನೆಲೆನಿಂತು, ನಾರಾಯಣ ಹಾಗೂ ತಮ್ಮ ಇಷ್ಟ ದೈವದ ಪೂಜೆ, ಜಪತಪಗಳನ್ನು ಮಾಡುತ್ತಾರೆ. ಭಕ್ತಜನರಿಗೆ ಧಾರ್ಮಿಕ ಉಪದೇಶವನ್ನು ಮಾಡುತ್ತಾರೆ. ಈ ವ್ರತವನ್ನು ಕೇವಲ ಸನ್ಯಾಸಿಗಳು ಮಠಾಧಿಪತಿಗಳು ಮಾತ್ರವಲ್ಲ. ಎಲ್ಲ ಗೃಹಸ್ಥಾಶ್ರಮಿಗಳು, ವಾನಪ್ರಸ್ಥಾಶ್ರಮಿಗಳೂ ಕೂಡಾ ಆಚರಿಸಬಹುದು. ವರ್ಷಾಗಾಲದಲ್ಲಿ ಇದನ್ನು ಆಚರಿಸುವುದರಿಂದ ವರ್ಷರ್ತುವ್ರತ ಎಂದು ಕರೆಯುತ್ತಾರೆ. ಆಷಾಢಮಾಸದ ಶುಕ್ಲಪಕ್ಷ ಏಕದಶಿ ಅಥವಾ ದ್ವಾದಶಿಯಿಂದ ಇದನ್ನು ಆರಂಭಿಸಬೇಕು. ಕಾರ್ತೀಕ ಶುದ್ಧ ದ್ವಾದಶಿ ಅಥವಾ ಉತ್ಥಾನದ್ವಾದಶಿಯಂದು ಪೂರ್ಣಗೊಳಿಸಬೇಕು.


ಚಾತುರ್ಮಾಸ ಆಚರಣೆಗೆ ಅ ನೇಕ ಕಟ್ಟುಪಾಡುಗಳಿವೆ. ವಿಧಿ ವಿಧಾನಗಳಿವೆ. ಈ ಕಾಲದಲ್ಲಿ ನಾರಾಯಣನು ಯೋಗ ನಿದ್ರಾಭಿರಾಮನಾಗಿರುತ್ತಾನೆ. ಆದ ಕಾರಣ ನಾರಾಯಣನ ಧ್ಯಾನ, ಸ್ತೋತ್ರ, ಪೂಜಾದಿಗಳನ್ನು ಮಾಡುತ್ತಿರಬೇಕು. ಬ್ರಹ್ಮಚರ್ಯದಲ್ಲಿರಬೇಕು. ರಾಗದ್ವೇಷಗಳನ್ನು ತೊರೆಯಬೇಕು. ಮೌನವ್ರತಾಚರಣೆ ಮಾಡಬೇಕು. ಹೀಗೆ ಅನೇಕ ವಿಧಿಗಳಿವೆ. ಕಾರ್ತೀಕ ಶುದ್ಧ ದ್ವಾದಶಿಯಂದು ನಾರಾಯಣನು ಯೋಗನಿದ್ರೆಯಿಂದ ಏಳುತ್ತಾನೆ. ಅಂದು ಅವನನ್ನು ಪೂಜಿಸಬೇಕು.

## ಗುರುಪೂರ್ಣಿಮೆ ಅಥವಾ ವ್ಯಾಸಪೂರ್ಣಿಮೆ

ಆಷಾಢ ಶುದ್ಧ ಪೂರ್ಣಿಮೆಯನ್ನು ಗುರುಪೂರ್ಣಿಮೆ ಅಥವಾ ವ್ಯಾಸಪೂರ್ಣಿಮೆ ಎಂದು ಆಚರಿಸಲಾಗುತ್ತದೆ. ಅಂದು ಅನೇಕ ಮಠ ಮಾನ್ಯಗಳಲ್ಲಿ ವ್ಯಾಸ ಪೂಜೆಯನ್ನು ನಡೆಸಲಾಗುತ್ತದೆ. ವೇದಗಳನ್ನು ವಿಭಾಗಿಸಿದವರು. ಅಷ್ಟಾದಶಪುರಾಣಗಳನ್ನು ರಚಿಸಿದವರು, ಮಹಾಭಾರತವನ್ನು ಬರೆದವರು ವ್ಯಾಸ ಮಹರ್ಷಿಗಳು ಅಥವಾ ವೇದವ್ಯಾಸರು. 27 ಜನ ವ್ಯಾಸರಿದ್ದರೆಂದು ದೇವೀ ಭಾಗವತ ಮತ್ತು ವಿಷ್ಣು ಪುರಾಣಗಳಲ್ಲಿ ಹೇಳಿದೆ. ಅವರಿಗೆಲ್ಲಾ ಬೇರೆ ಬೇರೆ ಹೆಸರುಗಳಿವೆ. 27ನೆಯವರೇ ವೇದವ್ಯಾಸ ಅಥವಾ ಕೃಷ್ಣದ್ವೈಪಾಯನ ಅಥವಾ ಬಾದರಾಯಣ. ವ್ಯಾಸ ಎಂಬುದು ಒಂದು ಅಧ್ಯಯನ ಪೀಠದ ಪರಂಪರೆ. ಆ ಪೀಠದ ಮುಖ್ಯಸ್ಥರೇ ವ್ಯಾಸರು ಎಂದು ವಿದ್ವಾಂಸರ ಅಭಿಪ್ರಾಯ. ಪುರಾಣ ಗ್ರಂಥಗಳನ್ನು ಇಡುವ ಪೀಠವನ್ನು ವ್ಯಾಸಪೀಠ ಎನ್ನುತ್ತಾರೆ. "ಕೇಶವಂ ಬಾದರಾಯಣಂ" ಎಂಬ ವಾಕ್ಯವಿದೆ. ಶ್ರೀಮನ್ ನಾರಾಯಣನೇ ಬಾದರಾಯಣನೆಂದು ಅರ್ಥ. ಅಂದು ವ್ಯಾಸ ಮಹರ್ಷಿಗಳಿಗೆ ವ್ಯಾಸ ಪೀಠಕ್ಕೆ ವಿಶೇಷವಾದ ಪೂಜೆ ಪುನಸ್ಕಾರಗಳು ಸಲ್ಲುತ್ತವೆ.

## ಇತರ ಹಬ್ಬ ಹರಿದಿನಗಳು

ಆಷಾಢಮಾಸದ ಶುಕ್ರವಾರಗಳಂದು ಮಾಡುವ ಲಕ್ಷ್ಮೀ ಪೂಜೆಯು ವಿಶೇಷ ಮಹತ್ವದಿಂದ ಕೂಡಿರುತ್ತದೆ. ಈ ಸಂವತ್ಸರದ ಆಷಾಢ ಮಾಸದಲ್ಲಿ ನಾಲ್ಕು ಶುಕ್ರವಾರಗಳು ಬರುತ್ತವೆ. 20-7-22 ಬುಧವಾರ ಕೃಷ್ಣ ಪಕ್ಷದ ಸಪ್ತಮಿ ದಿವಸ ಶ್ರೀ ಚಾಮುಂಡೇಶ್ವರಿ ಜನ್ಮ ದಿನೋತ್ಸವವು ಆಚರಿಸಲ್ಪಡುತ್ತವೆ. ಆಷಾಢಮಾಸದ ಶುಕ್ಲ ಪಕ್ಷದ ದ್ವಿತೀಯ ಅಥವಾ ಬಿದಿಗೆಯಂದು ಮಾರ್ಕಂಡೇಯೋತ್ಸವವು ನಡೆಯುತ್ತದೆ. ಆಡಿಮಾಸವು ಸ್ಕಂದ ಅಥವಾ ಸುಬ್ರಹ್ಮಣ್ಯೇಶ್ವರ ಆರಾಧನೆ ಹಾಗೂ ಪೂಜೆಗೂ ಪ್ರಸಿದ್ಧವಾಗಿದ್ದು. ಆಷಾಢ ಶುಕ್ಲಪಕ್ಷ ಷಷ್ಠಿಯಂದು ಸ್ಕಂದ ಷಷ್ಠಿಯು ಆಚರಿಸಲ್ಪಡುತ್ತದೆ. ಕೃಷ್ಣ ಪಕ್ಷದ ದಶಮಿ, ಕೃತ್ತಿಕಾ ನಕ್ಷತ್ರದ ದಿವಸ ಸುಬ್ರಹ್ಮಣ್ಯೇಶ್ವರ ದೇವಾಲಯಗಳಲ್ಲಿ ಆಡಿಕೃತ್ತಿಕೋತ್ಸವವು ನಡೆಯುತ್ತದೆ. ಆಷಾಢ ಬಹುಳ ಪಂಚಮಿಯಂದು ಮಧ್ವ ಪರಂಪರೆಯ ಶ್ರೇಷ್ಠ ಗುರುಗಳಲ್ಲಿ ಒಬ್ಬರಾದ ಟೀಕಾಚಾರ್ಯರ ಆರಾಧನೆಯಂದು ಶ್ರೀಮಲಖೇಡ ಕ್ಷೇತ್ರದ ಮೂಲ ಬೃಂದಾವನದ ಸನ್ನಿಧಿಯಲ್ಲಿ ವಿಶೇಷ ಕಾರ್ಯಕ್ರಮಗಳು, ಧಾರ್ಮಿಕ, ವಿಷೇಶ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತದೆ. ಆಷಾಢ ಬಹುಳ ತ್ರಯೋದಶಿಯಂದು ಪಾಂಡುರಂಗ ವಿಠಲನ ಪರಮಭಕ್ತರಾದ ಮರಾಠಿ ಸಂತ ಪರಂಪರೆಯ ಪ್ರಖ್ಯಾತ ಸಂತರಾದ ನಾಮ ದೇವರ ಪುಣ್ಯ ತಿಥಿ ಆಚರಿಸಲ್ಪಡುತ್ತದೆ. ಹೀಗೆ ಆಷಾಢ ಮಾಸವು ನಾನಾ ರೀತಿಯ ಹಬ್ಬ ಹರಿದಿನಗಳು, ಪುಣ್ಯ ದಿನಗಳನ್ನು ಒಳಗೊಂಡ ಪ್ರಖ್ಯಾತ ಮಾಸವಾಗಿದೆ.




| | |
|---|---|
| **ಕೃತಿ :** | **ವಿವಿಧ ವಿಷಯಗಳ ಮಹಾ ಪೂರ ಈ "ಓಂಕಾರ"** |
| **ಲೇಖಕರು:** | **ಹನುಮಂತ. ಮ.ದೇಶಕುಲಕರ್ಣಿ** |
| **ಪುಟಗಳು :** | **296** |
| **ಬೆಲೆ :** | **235/- ರೂ ಗಳು** |
| **ಪ್ರ.-** | **ಸಹನ ಪ್ರಕಾಶನ ಬೆಂಗಳೂರು. ವಿದ್ಯಾರ್ಥಿಗಳಿಗೆ ವಿಶೇಷ ರಿಯಾಯತಿ 200 ರೂ.** |

ವೃತ್ತಿಯಿಂದ ಪತ್ರಕರ್ತರಾದರೂ ಪ್ರವೃತ್ತಿಯಿಂದ ಸಾಹಿತಿ ಸಂಘಟಕ ಹಾಗೂ ಉತ್ತಮ ಬರಹಗಾರರು. "ಓಂಕಾರ" ಈ ಪುಸ್ತಕವು ನಿಜಕ್ಕೂ ಓದಿದ ನಂತರ ನನಗನಿಸಿದ್ದು ಇದು ವೈವಿಧ್ಯಮಯ ವಿಷಯಗಳ ಸಾಕಾರ.

# ವಿವಿಧ ವಿಷಯಗಳ ಮಹಾಪೂರ ಈ "ಓಂಕಾರ"

ಇಂದು ಬರೆದ ಕವಿತೆ ಇಂದೇ ಪ್ರಕಟಿಸುವ ಮನಸ್ಥಿತಿಗಳಿರುವ ಇಂದಿನ ಕಾಲದಲ್ಲಿ ತಾಳಿದವನು ಬಾಳಿಯಾನು ಎಂಬ ಮಾತಿ ನಂತೆ ಹನುಮಂತರವರು ಸುಮಾರು ಹತ್ತು ವರ್ಷಗಳ ಹಿಂದೆ ತಮ್ಮ ಮನಸ್ಸಿನ ಮೇಲೆ ಪ್ರಭಾವ ಬೀರಿದ ಘಟನೆಗಳನ್ನು ಗೀಚಿ ಟ್ಟಿದ್ದನ್ನು ತಿದ್ದುತ್ತ ತೀಡುತ್ತ ೨೦೨೧ ರಲ್ಲಿ ಒಂದು ಪುಸ್ತಕ ರೂಪ ವಾಗಿ ಬಿಡುಗಡೆ ಮಾಡಿದ್ದಾರೆ.

ಈ ಪುಸ್ತಕಗಳಲ್ಲಿ ಅನೇಕ ವಿಷಯಗಳಿವೆ. ಪುರಾಣ ಪುಣ್ಯಕಥೆ ಗಳಿವೆ. ವಿಜ್ಞಾನ ಹಾಗೂ ವಿಜ್ಞಾನಿಗಳ ಮಹತ್ವವಿದೆ. ಆಧ್ಯಾತ್ಮ ಚಿಂತ ನೆಗೆ ಜಾಗವಿದೆ. ಆರೋಗ್ಯದ ಮಾಹಿತಿಗಳಿವೆ. ಇತಿಹಾಸದ ಕೆಲವು ನಾಯಕರ ಪರಿಚಯವಿದೆ. ಎಲ್ಲ ವಿಷಯಗಳನ್ನು ಬಿಡಿ ಬಿಡಿಯಾಗಿ ಪುಸ್ತಕದಲ್ಲಿ ನಾವೆಲ್ಲ ನೋಡಿದ್ದೇವೆ. ಆದರೆ ಇಲ್ಲಿ ಹನುಮಂತರವರು ಎಲ್ಲವನ್ನೂ ಕ್ರೋಢಿಕರಿಸಿದ ಒಂದೇ ಕೃತಿ ಓಂಕಾರ ವಿವಿಧ ವಿಷ ಯಗಳ ಸಾಕಾರ.. ನಮ್ಮೆಲ್ಲರ ಕೈಗಿಟ್ಟಿದ್ದಾರೆ.

ಸುಮಾರು ೧೧೪ ವಿವಿಧ ವಿಷಯಗಳ ಲೇಖನವುಳ್ಳ ಈ ಕೃತಿಯು ಓಂಕಾರದಿಂದ ಆರಂಭವಾಗಿ ದೀಪ ಹಚ್ಚುವುದರ ಮೂಲಕ ಮುಕ್ತಾಯಗೊಳ್ಳುವುದು. ಲೇಖಕರು ಓಂಕಾರದ ಮಹತ್ವ ವನ್ನು ಸಾಮಾನ್ಯರಿಗೂ ಅರ್ಥವಾಗುವ ಹಾಗೆ ಸರಳವಾಗಿ ವಿವರಿಸಿ ದ್ದಾರೆ. ಕಪಿಧ್ವಜದ ಮಹತ್ವ, ಅದರ ಹಿನ್ನೆಲೆ, ನವಗ್ರಹಗಳಿಗೆ ೯ ವೃಕ್ಷಗಳ ಪರಿಕಲ್ಪನೆ ವಿಶೇಷವಾಗಿ ಮೂಡಿ ಬಂದಿದೆ. ಸಮಾಜದ ಓರೆ-ಕೋರೆಗಳನ್ನು ತಿದ್ದುವ ಪ್ರಯತ್ನವನ್ನು ಮಾಡುತ್ತಾ ಡೋನೆ ಷನ್‌ನಿಂದ ಬಡ ಮಕ್ಕಳಿಗೆ ವಿದ್ಯೆವಂಚನೆ ಆಗುವುದರ ವಿರುದ್ಧ ಸಿಡಿದೆದ್ದಿದ್ದಾರೆ. ಪ್ರಜಾ ಪ್ರಭುತ್ವದ ನೈಜ ಸ್ವರೂಪವೇನು? ದೇಶದಲ್ಲಿ ಸ್ಕೌಟ್ಸ್ - ಗೈಡ್ ಮಹತ್ವ ಅದರ ಉಗಮ ಯಾರಿಂದ ಆಯಿತು ಎಂಬೆಲ್ಲ ವಿಷಯಗಳನ್ನು ಓಂಕಾರ ಓದುಗನಿಗೆ ತಿಳಿಸುತ್ತದೆ. ತಾಯಿ ಯನ್ನು ಪೂಜಿಸದವ ಮಹಾಪಾಪಿ ಎನ್ನುವ ಲೇಖನ ಮಾತೃ ಪ್ರೇಮ ಬಿಂಬಿಸುತ್ತದೆ.

ಈ ಪುಸ್ತಕವು ಓದುಗರಿಗಷ್ಟೇ ಅಲ್ಲದೇ ಎಷ್ಟೋ ಯುವಕರಿಗೆ ಹಾಗೂ ಯುವ ಸಾಹಿತಿ, ಕವಿ-ಕವಯತ್ರಿಯರಿಗೆ, ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ, ಪ್ರಾಥಮಿಕ - ಮಾಧ್ಯಮಿಕ ಶಾಲಾ ಶಿಕ್ಷಕರಿಗೆ, ಲೇಖನ ಬರೆಯುವ ತುಡಿತ ಇರುವವರಿಗೆ ಕೈಪಿಡಿಯಿದ್ದಂತೆ. ಎಲ್ಲಾ ವಯಸ್ಸಿನವರೂ ಓದಲು ಸೂಕ್ತವಾದ ಒಂದು ಕೃತಿ ಎನ್ನುವುದರಲ್ಲಿ ಎರಡು ಮಾತಿಲ್ಲ.

- ಗುರುರಾಜ. ಮ. ದೇಶಕುಲಕರ್ಣಿ

# ಪ್ರೇಮ ಭಕ್ತಿಯ ಸ್ವರೂಪ ಮತ್ತು ಲಕ್ಷಣ

-ರಾ.ನ.ನ. ಮೂರ್ತಿ



ಜಗತ್ತಿನಲ್ಲಿ ಪ್ರೇಮಮಯಿ ಭಗವಂತನ ಜನ್ಮ ಮತ್ತು ಲೀಲೆಗಳ ಬಹಳಷ್ಟು ಮಂಗಳಕಾರಕ ಕಥೆಗಳ ಪ್ರಸಿದ್ಧ. ಅವುಗಳನ್ನು ಕೇಳುತ್ತಿರಬೇಕು.ಆ ಗುಣಗಳು ಮತ್ತು ಲೀಲೆಗಳನ್ನು ನೆನಪಿಗೆ ತರುವ ಭಗವಂತನ ಅನೇಕ ಹೆಸರುಗಳೂ ಸಹ ಪ್ರಸಿದ್ಧವಾದುವೇ. ನಾಚಿಕೆ-ಸಂಕೋಚ ಬಿಟ್ಟು ಅವುಗಳನ್ನು ಹಾಡುತ್ತಿರಬೇಕು.ಹೀಗೆ ಯಾವುದೇ ವ್ಯಕ್ತಿ, ವಸ್ತು ಇಲ್ಲವೇ ಸ್ಥಾನ ಸ್ಥಳಗಳ ಬಗ್ಗೆ ವ್ಯಾಮೋಹ ಬಿಟ್ಟು ಭಗವಂತನಲ್ಲಿ ಮುಳುಗಿರಬೇಕು. ಯಾರು ಹೀಗೆ ಪರಿಶುದ್ಧ ಹೃದಯ ವ್ರತಧಾರಿಗಳಾಗಿರುತ್ತಾರೋ ಅವರಲ್ಲಿ ಪರಮಪ್ರಿಯ ಪ್ರಭುವಿನ ನಾಮ ಸಂಕೀರ್ತನೆಯ ಅನುರಾಗದ ಪ್ರೀತಿ ಅಂಕುರಿಸಿ ಬೆಳೆಯುತ್ತಿರುತ್ತದೆ. ಅಂತವನ ಚಿತ್ತ ದ್ರವಿತಗೊಳ್ಳುತ್ತದೆ. ಅವನು ಸಾಮಾನ್ಯ ಜನರ ಸ್ಥಿತಿಗಿಂತಲೂ ಮೇಲಿರುತ್ತಾನೆ. ಜನರ ಅಭಿಪ್ರಾಯಗಳು ಭಾವನೆಗಳೊಂದಿಗೆ ಹೋಲಿಸಿದರೆ ಶ್ರೇಷ್ಠನಾಗಿರುತ್ತಾನೆ. ತೋರಿಕೆಯಿಂದಲ್ಲದೆ, ವಂಚನೆಯಿಲ್ಲದೆ, ಸ್ವಭಾವದಿಂದಲೇ ಅರಿತವನಂತೆ ಆಗಾಗ್ಗೆ ಕಿಲ-ಕಿಲನೆ ನಗುತ್ತಿರುತ್ತಾನೆ. ಹಾಗೆಯೇ ಬಿಕ್ಕಿ ಅಳುತ್ತಾನೆ. ಒಮ್ಮೊಮ್ಮೆ ಎತ್ತರದ ಧ್ವನಿಯಲ್ಲಿ ಭಗವಂತನನ್ನು ಕೂಗುತ್ತಾನೆ. ಇನ್ನೊಮ್ಮೆ ಮಧುರದನಿಯಲ್ಲಿ ಭಗವಂತನ ಗುಣಗಳನ್ನು ಹಾಡ ತೊಡಗುತ್ತಾನೆ. ಒಮ್ಮೊಮ್ಮೆ ತನ್ನ ಪ್ರಿಯತಮೆಯನ್ನು ಕಣ್ಮುಂದೆ ಅನುಭವಿಸುತ್ತಿರುತ್ತಾನೆ.

ತೃಪ್ತಿ ಪಡಿಸಲು ನರ್ತನವನ್ನು ಮಾಡುತ್ತಿರುತ್ತಾನೆ. ಈ ಆಕಾಶ, ವಾಯು,ಅಗ್ನಿ,ನೀರು,ಭೂಮಿ,ಗ್ರಹ-ನಕ್ಷತ್ರಗಳು ಪ್ರಾಣಿಗಳು ದಿಕ್ಕುಗಳು, ವೃಕ್ಷ, ವನಸ್ಪತಿ,ನದಿಗಳ ಮತ್ತು ಸಮುದ್ರ ಎಲ್ಲವೂ ಭಗವಂತನ ಶರೀರವೇ. ಎಲ್ಲ ರೂಪಗಳಲ್ಲಿ ಸ್ವತಃ ಭಗವಂತನೇ ಕಾಣುತ್ತಿರುತ್ತಾನೆ. ಹೀಗೆಂದು ತಿಳಿದು ಯಾರೆಲ್ಲ ಅವನ ಮುಂದೆ ಬರುತ್ತಾರೋ, ಪ್ರಾಣಿಯೋ, ಅಪ್ರಾಣಿಯೋ ಅದನ್ನು ಅನನ್ಯ ಭಾವದಿಂದ ಭಗವದ್ಭಾವದಿಂದ ನಮಸ್ಕರಿಸುತ್ತಾರೆ.

ಏವಂವ್ರತ: ಸ್ವಪ್ರಿಯನಾಮ ಕೀರ್ತ್ಯಾಜಾತಾನು ರಾಗೋದ್ರುತಚಿತ್ತ ಉಚ್ಚೈಃ
ಹಸತ್ಯಥೋ ರೋದಿತಿ ರೌತಿ ಗಾಯತ್ಯುನ್ಮಾದವನ್ನೃತ್ಯತಿ ಲೋಕ ಬಾಹ್ಯಃ
ಖಂ ವಾಯುಮಗ್ನೀ ಸಲಿಲಂ ಮಹೀಂ ಚ ಜ್ಯೋತಿಷಿ ಸತ್ವಾನಿ ದಿಶೋದ್ರುಮಾ ದೀನ್
ಸರಿತ್ಸಮುದ್ರಾಂಶ್ಚ ಹರೇಃ ಶರೀರಂಯತ್ ಕಿಂಚ ಭೂತಂ ಪ್ರಣಮೇದನನ್ಯಃ

ಇಂತಹ ಪ್ರೇಮಿ ಭಕ್ತನಾದವನು ಎಲ್ಲೆಡೆ ಮತ್ತು ಯಾವಾಗಲೂ ತನ್ನ ಪ್ರೇಮಾಸ್ಪದ ಪ್ರಭುವಿನ ದರ್ಶನ ಮಾಡಿಸುತ್ತಾನೆ. ಇಂತಹ ಭಕ್ತನಿಗೆ ಭಗವಾನ್ ಶ್ರೀಕೃಷ್ಣ ಹೇಳಿರುವುದು

ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂಚ ಮಯಿ ಪಶ್ಯತಿ
ತಸ್ಯಾಹಂನ ಪ್ರಣಶ್ಯಾಮಿ ಸ ಚ ಮೇನ ಪ್ರಣಶ್ಯತಿ ॥

ಅಂದರೆ ಯಾರು ಸಂಪೂರ್ಣ ಭೂತಗಳಲ್ಲಿ ವಾಸುದೇವನಾದ ನಾನು ವ್ಯಾಪಿಸಿರುವುದನ್ನು ಕಾಣುತ್ತಾರೋ, ಇಡೀ ಭೂತದಲ್ಲಿ ನಾನೇ ಅಂತರ್ಗತನಾಗಿರುವುದನ್ನು ನೋಡುತ್ತಾರೋ, ಅಂತವರಿಗೆ ನಾನು ಅದೃಶ್ಯನಾಗಿರುವುದಿಲ್ಲ. ಅಲ್ಲದೇ ನನಗಾಗಿ ಅವನು ಎಂದಿಗೂ ಅದೃಶ್ಯನಾಗಲಾರ.ನನ್ನ ಕೃಪಾ ದೃಷ್ಟಿಯಿಂದ ಆತ ಸರ್ವದಾ ಸುರಕ್ಷಿತಸನಾಗಿರುತ್ತಾನೆ.

ಸುಪ್ರಸಿದ್ಧ ಮಹಾತ್ಮಾ ದಾದೂದಯಾಲರ ಶಿಷ್ಯ ಭಕ್ತ ಕವಿ ಸುಂದರದಾಸರು ಪ್ರೇಮ ಭಕ್ತಿಯನ್ನು ಅತ್ಯಂತ ಸುಂದರ ಮತ್ತು ಜೀವಂತವಾಗಿ ವರ್ಣಿಸುತ್ತಾ ಹೀಗೆ ಹೇಳಿದ್ದಾರೆ.

ಪ್ರೇಮ ಲಗ್ಯೋ ಪರಮೇಸ್ವರ ಸೌಂತಬ ಭೂಲಿಗಯೋ ಸಬ್‌ಹೀ ಘರಬಾರಾ
ಜ್ಯೋಂ ಉನ್ಮತ್ತ, ಫಿರೈಜಿತ ಹೀತಿತ, ನೈಕು ರಹೀನ ಸರೀರಸರಬಾರಾ
ಸಾಸ ಉಸಾಸ ಉಠೈಂ ಸಬರೋಮ, ಚಲೈದೃಗ ನೀರ ಅಖಂಡಿತ ಧಾರಾ
ಸುಂದರ ಕೌನ್ ಕರೈ ನವಧಾಬಿಧಿ, ಛಾಕಿ ಪರ್ಯ್ಯೋರಸ ಪೀ ಮತವಾರಾ ॥

ಪ್ರೇಮಿ ಭಕ್ತನಿಗೆ ಭಗವಂತನೊಂದಿಗೆ ಎರಡೂ ಮಗ್ಗುಲಿನ ಸಂಬಂಧವಿದೆ ಎಂಬುದು ಒಂದು ಅತ್ಯಂತ ಮಹತ್ವಪೂರ್ಣ ವಿಲಕ್ಷಣ ವಿಷಯ ಭಕ್ತಿ ಹೇಗಾದರೂ ಮಾಡಲಿ, ಅದರಲ್ಲಿ ವಿಧಿ-ನಿಷೇಧ ಪಾಲಿಸುವುದೇನಿದೆ? ಇದರ ಬಗ್ಗೆ ಶಾಸ್ತ್ರಗಳಲ್ಲಿ ಅದೆಷ್ಟು ವಿಸ್ತಾರವಾಗಿ ಚರ್ಚಿಸಿದ್ದಾರೆ ಹಾಗೂ ಭಗವಂತನ ಕಡೆಯಿಂದ ಇದಕ್ಕೆ ಪ್ರತಿಕ್ರಿಯೆ ಏನು ಎಂಬುದರ ಬಗ್ಗೆ ಅಷ್ಟೇನೂ ವರ್ಣನೆ ಸಿಗುವುದಿಲ್ಲ.

**ಭಗವಾನ್ ಶ್ರೀಕೃಷ್ಣ ಉದ್ಧವನೊಂದಿಗೆ ಹೇಳಿದ್ದು :-**

ನಿರಪೇಕ್ಷಂ ಮುನಿಂ ಶಾಂತಂ ನಿರ್ವೈರಂ ಸಮದರ್ಶನಮ್
ಅನುವ್ರಜಾಮ್ಯಹಂ ನಿತ್ಯಂ ಪೂಯೇಯೇತ್ಯಂ ಘ್ರಿ ರೇಣುಭಿಃ

ಯಾರಿಗೆ ಯಾರ ಅಪೇಕ್ಷೆಯೂ ಇಲ್ಲವೋ, ಜಗತ್ತಿನ ಚಿಂತನೆಯಿಂದ ಸರ್ವಥಾ ಭಿನ್ನರಾಗಿ ನನ್ನ ಚಿಂತನ ಮನನದಲ್ಲಿಯೇ ತಲ್ಲೀನರಾಗಿರುತ್ತಾರೋ,ಯಾರು ರಾಗ, ದ್ವೇಷಗಳನ್ನು ಬಿಟ್ಟು ಎಲ್ಲರೊಂದಿಗೆ ಸಮಾನ ದೃಷ್ಟಿಯನ್ನು ಹೊಂದಿರುತ್ತಾರೋ ಅಂತಹ ಮಹಾತ್ಮರ ಹಿಂದೆಯೇ ನಾನು ಸದಾ ಸುತ್ತುತ್ತಿರುತ್ತೇನೆ. ಆಗ ನನ್ನ ಚಿಂತನೆಯೆಂದರೆ, ಅಂತವನ ಚರಣಗಳ ಕಣ ನನ್ನ ಶರೀರದ ಮೇಲೆ ಬಿದ್ದು ನಾನು ಪವಿತ್ರನಾಗಲೆಂಬುದೇ ಮಹತ್ತರ ಆಸೆ.

ಮೂರು ಲೋಕಗಳ ಪ್ರಭು ಪರಬ್ರಹ್ಮ ಪರಮಾತ್ಮನು ತನ್ನ ಭಕ್ತರನ್ನು ಅದೆಷ್ಟು ಗೌರವಿಸುತ್ತಾನೆ.ಅದೆಷ್ಟು ಪ್ರೀತಿಸುತ್ತಾನೆ ಮತ್ತು ಆದರಿಸುತ್ತಾನೆಂದು ಯೋಚಿಸಲೂ ಸಾಧ್ಯವಿಲ್ಲ. ಇಂತಹ ಪ್ರಭುವಿನ ಪ್ರೇಮ ಲೀಲೆ ಅಚಿಂತನೀಯವಾದುದು.

ಚೇಷ್ಟಾ ವಿಭೂಮ್ನಃ ಖಲು ದುರ್ವಿಭಾವ್ಯಾ

ನಾನೇ ಭಗವಂತನನ್ನು ಧ್ಯಾನಿಸುತ್ತೇನೆಂದು ಆಗಾಗ್ಗೆ ಭಕ್ತ ತಿಳಿದಿರುತ್ತಾನೆ.ಆದರೆ, ನಿಜವಾಗಿಯೂ ಭಗವಂತನೇ ಭಕ್ತನನ್ನು ಧ್ಯಾನ ಮಾಡುವುದು.ಒಮ್ಮೆ ಭಗವಾನ್ ಶ್ರೀಕೃಷ್ಣ ಧ್ಯಾನಕ್ಕೆ ಕುಳಿತಿರುವುದನ್ನು ರಾಜ ಯುಧಿಷ್ಠಿರ ನೋಡಿದ ಭಗವಂತನ ಧ್ಯಾನ ಮುಗಿದ ಮೇಲೆ ಯುಧಿಷ್ಠಿರ ಕೇಳಿದ - ಭಗವಾನ್ ಇಡೀ ಜಗತ್ತೇ ನಿಮ್ಮನ್ನು ಧ್ಯಾನಿಸುತ್ತಿದೆ.ಆದರೆ ತಾವು ಯಾರನ್ನು ಕುರಿತು ಧ್ಯಾನ ಮಾಡುತ್ತಿದ್ದೀರಿ? ಅದಕ್ಕೆ ಅವನ ಉತ್ತರ " ಯುಧಿಷ್ಠಿರ! ನಾನು ಶರಶಯ್ಯೆಯಲ್ಲಿ ಮಲಗಿರುವ ನನ್ನ ಭಕ್ತ ಭೀಷ್ಮ ಹೇಗಿದ್ದಾನೋ ಎಂದು ಧ್ಯಾನ ಮಾಡುತ್ತಿದ್ದೆ " ಎಂದ

ಹಾಗಾಗಿ ನಾವು ಎಂದಿಗೂ ಮರೆಯಬಾರದೆಂದರೆ, ಭಗವಂತನೊಂದಿಗಿನ ನಮ್ಮ ಸಂಬಂಧ ಇಬ್ಬಗೆಯದು, ನಾವು ಅವನನ್ನು ಹೇಗೆ ಮತ್ತು ಯಾವ ರೀತಿಯಲ್ಲಿ ಧ್ಯಾನ-ಭಜನೆ ಮಾಡುತ್ತೇವೋ ಅವನೂ ಸಹ ನಮ್ಮ ಧ್ಯಾನ - ಭಜನೆ ಮಾಡುತ್ತಾನೆ.

**ಶ್ರೀಮದ್ಭಗವದ್ಗೀತೆಯಲ್ಲಿ ಭಗವಂತ:**

ಯೆ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಮ್
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ

ಎಂದಿದ್ದಾನೆ.

ಭಕ್ತರಾದವರು ನನ್ನನ್ನು ಯಾವ ಪ್ರಕಾರ ಭಜಿಸುತ್ತಾರೋ, ನಾನೂ ಸಹ ಅವರನ್ನು ಅದೇ ಪ್ರಕಾರವಾಗಿ ಭಜಿಸುತ್ತೇನೆ (ಫಲ ನೀಡುತ್ತೇನೆ.) ಹೇ ಅರ್ಜುನ ! ಹೇಗಾದರೂ ಸರಿ, ಮನುಷ್ಯರು ಕೊನೆಗೆ ನನ್ನ ಮಾರ್ಗದಲ್ಲಿಯೇ ಬಂದು ಸೇರುತ್ತಾರೆ.

**ಶ್ರೀಮದ್ಭಾಗವತದ ಪ್ರಾರಂಭದಲ್ಲಿ :**

- ಸದ್ಯೋ ಹೃದ್ಯವರುಧ್ಯತೇತ್ರ ಕೃತಿಭಿ ಶುಶ್ರೂಷುಭಿಸ್ತತ್ ಕ್ಷಣಾತ್ ಎಂದಿದೆ.

ಪುಣ್ಯಾತ್ಮ ಪುರುಷರಾದವರು ಒಂದು ವೇಳೆ ಈ ಶ್ರೀಮದ್ಭಾಗವತ ಮಹಾಪುರಾಣದ ಕಥೆಯನ್ನು ಕೇಳಲು ಬಯಸುವುದಾದರೆ, ಅವರ ಈ ಇಚ್ಛೆಯಿಂದಲೇ ಭಗವಾನ್ ಶ್ರೀಕೃಷ್ಣ ಅಂತವರ ಹೃದಯದಲ್ಲಿ ಬಂಧಿಯಾಗಿ ಬಂದು ಕೂರುತ್ತಾನೆ.

ಮಹಾನ್‌ಪ್ರೇಮಿಭಕ್ತ, ಜ್ಞಾನಿ ಸಂತ ಕಬೀರದಾಸರು ತಮ್ಮ ಸ್ವತಃ ಅನುಭವವನ್ನು ಬಹಳ ದೃಢತೆಯಿಂದ ಹೇಳಿದ್ದಾರೆ.

'ಆಗ ಪೀಛೆ ಹರಿ ಫಿರೆ ಕಹತ ಕಬೀರ ಕಬೀರ,'

ತಂದೆಯಾದವನು ತನ್ನ ಅತ್ಯಂತ ಪ್ರೀತಿಯ ಮಗನ ಜತೆ ಹಿಂದೆ ಮುಂದೆ ತಿರುಗಿ ಮುದ್ದಿನಿಂದ ಕರೆಯುತ್ತಾನೋ ಅದರಂತೆ ಕಬೀರರು-"ನನ್ನ ತಂದೆ ನನ್ನೊಂದಿಗೆ ಹಿಂದೆ - ಮುಂದೆ ತಿರುಗುತ್ತಿರುತ್ತಾರೆ. ಅತ್ಯಂತ ಪ್ರೀತಿಯಿಂದ ಮಗು ಕಬೀರ! ಮಗು ಕಬೀರ!" ಎಂದು ಕರೆಯುತ್ತಿರುತ್ತಾರೆ ಎಂದಿದ್ದಾರೆ.

ವಸ್ತುಶಃ ಭಗವಂತ ಭಕ್ತನ ಪ್ರೇಮ ಪಾಶ (ವಶ) ದಲ್ಲಿರುತ್ತಾನೆ. ಪ್ರೀತಿಯಿಂದ ಅವನನ್ನು ಕರೆಯಬೇಕು. ಅವನನ್ನು ಪ್ರತಿನಿತ್ಯ ಸ್ಮರಿಸುತ್ತಾ ಇರಬೇಕು. ಅವನ ವಿಯೋಗದಲ್ಲಿ ವಿಕಲನಾಗುವ ಅವಶ್ಯಕತೆ ಇದೆ. ಅವನನ್ನು ಒಲಿಸಿಕೊಳ್ಳಲು ತಡವಾಗುವುದಿಲ್ಲ.ಯಾರಾದರೂ ಕೂಗಿ (ಕರೆದು) ನೋಡಬಹುದು. ಇದು ಅದೃಷ್ಟದ, ಸೌಭಾಗ್ಯದ ಕರೆ, ಕೂಗು.

# ದಕ್ಷಿಣಾಯಣ ಪುಣ್ಯ ಕಾಲದ ಮಹತ್ವ

- ಹನುಮಂತ ಮ.ದೇಶಕುಲಕರ್ಣಿ
94803 64915



ಹಿಂದೂ ಪಂಚಾಂಗದ ಪ್ರಕಾರ ಪ್ರತಿ ಸಂವತ್ಸರವನ್ನು ಸೂರ್ಯನ ಸಂಚಲನವನ್ನು ಅನುಸರಿಸಿ ಎರಡು ಅಯನಗಳಾಗಿ ವಿಂಗಡಿಸಲಾಗಿದೆ.ರವಿಯು ಸಂಚರಿಸುವ ಈ ಹನ್ನೆರಡು ತಿಂಗಳುಗಳಲ್ಲಿ ಆರು ತಿಂಗಳು ಉತ್ತರಾಯಣವೆಂದು ಮತ್ತೆ ಆರು ತಿಂಗಳು ದಕ್ಷಿಣಾಯಣವೆಂದು ಕರೆಯುತ್ತಾರೆ.

ಮಕರ ಮೊದಲಾಗಿ ಆರು ರಾಶಿಗಳಲ್ಲಿ ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಸಂಚರಿಸುವ ಕಾಲ.ಪ್ರಾಚೀನ ಸಂಪ್ರದಾಯದ ಪ್ರಕಾರ ಇದು ಸಾಮಾನ್ಯವಾಗಿ ಜನವರಿ 13 ಅಥವಾ 14 ನೆಯ ದಿವಸ ತೊಡಗಿ ಜುಲೈ 16 ಅಥವಾ 17 ದಿವಸ ಕೊನೆಗೊಳ್ಳುತ್ತಿತ್ತು.

### ದೇವತೆಗಳ ಒಂದು ಹಗಲು ಮತ್ತು ರಾತ್ರಿ

ಇದು ದೇವತೆಗಳ ಒಂದು ಹಗಲು ಮತ್ತು ರಾತ್ರಿ ಎಂದು ಜ್ಯೋತಿ ಶಾಸ್ತ್ರದಲ್ಲಿ ಪರಿಗಣಿಸಿದೆ. ರವಿ ಮಕರದಿಂದ - ಮಿಥುನರಾಶಿಯ ತನಕ ಸಂಚರಿಸುವ ಕಾಲಘಟ್ಟಕ್ಕೆ "ಉತ್ತರಾಯಣ"ಎನ್ನುತ್ತಾರೆ.ರವಿಯು ಕಟಕದಿಂದ - ಧನುರ್‌ರಾಶಿಯ ತನಕ ಸಂಚರಿಸುವ ಕಾಲಘಟ್ಟಕ್ಕೆ "ದಕ್ಷಿಣಾಯಣ" ಎನ್ನುತ್ತಾರೆ ಉತ್ತರಾಯಣ ಮತ್ತು ದಕ್ಷಿಣಾಯಣ ಮಾರ್ಗದ ಮಧ್ಯಬಿಂದುವನ್ನು 'ವಿಷು' ಎಂದು ಕರೆಯುತ್ತಾರೆ.

ಉತ್ತರಾಯಣ ಸ್ವರ್ಗದ ಬಾಗಿಲು ತೆರೆಯುವ ಕಾಲವಾದರೆ ದಕ್ಷಿಣಾಯನ ಆ ಬಾಗಿಲನ್ನು ಮುಚ್ಚುವ ಕಾಲ ಎನ್ನುತ್ತಾರೆ. ಅದು ಸರಿಯಲ್ಲ. ನಮ್ಮ ಶಾಸ್ತ್ರಗಳು ದಕ್ಷಿಣಾಯನ ಕಾಲವನ್ನು ನಮ್ಮ ಶಾಸ್ತ್ರಗಳು ಪರಮಪುಣ್ಯ ಸಂಚಯನ ಕಾಲ ಎಂದು ಅಭಿಪ್ರಾಯಿಸುತ್ತವೆ. ರವಿಯು ಭೂಮಧ್ಯ ರೇಖೆಗೆ ದಕ್ಷಿಣಾಭಿಮುಖವಾಗಿ ಸಂಚರಿಸುವ ಕಾಲ "ದಕ್ಷಿಣಾಯಣ". ಇದು ಸಾಮಾನ್ಯವಾಗಿ ಆಷಾಢದ ದ್ವಿತೀಯಾರ್ಧದಿಂದ ಪ್ರಾರಂಭವಾಗಿ ಪುಷ್ಯಮಾಸದ ಅರ್ಧಭಾಗದವರೆಗೆ ಇರುತ್ತದೆ.

### ಕ್ರಾಂತಿವೃತ್ತ - ವಿಷುವದ್ ವೃತ್ತ :

ಭೂಮಿಯ ಸಮಭಾಜಕ ವೃತ್ತವನ್ನು ಅಂತರಿಕ್ಷಕ್ಕೆ ವಿಸ್ತರಿಸಿ ಆ ಕಾಲ್ಪನಿಕ ಗೋಳಕ್ಕೆ ವಿಷುವದ್ ವೃತ್ತ ಎನ್ನಲಾಗುತ್ತದೆ.'ಕ್ರಾಂತಿ ವೃತ್ತ' ಹಾಗೂ 'ವಿಷುವದ್ ವೃತ್ತ' ಇವೆರಡು ಮಹಾವೃತ್ತಗಳು ಎರಡು ಬಿಂದುಗಳಲ್ಲಿ ಛೇದಿಸುತ್ತವೆ.ಆ ಎರಡು ಬಿಂದುಗಳು ಒಂದಕ್ಕೊಂದು 180 ಡಿಗ್ರಿಗಳ ಅಂತರದಲ್ಲಿದೆ.ಈ ಬಿಂದುಗಳಿಗೆ ಮಹಾವಿಷುವ ಮತ್ತು ಜಲ ವಿಷುವ ಎನ್ನಲಾಗುತ್ತದೆ. ಕ್ರಾಂತಿವೃತ್ತ ಮತ್ತು ವಿಷುವದ್ ವೃತ್ತಗಳ ಸಮತಲಗಳು ಒಂದಕ್ಕೊಂದು 231 / 2 ಡಿಗ್ರಿ ಓರೆಯಾಗಿವೆ.

ಸೂರ್ಯನು ಮಾರ್ಚ್ 21 ರ ಹೊತ್ತಿಗೆ ಮಹಾವಿಷುವಕ್ಕೆ(ಮಾರ್ಚ್ 21 ರಂದು ಸೂರ್ಯನ ಕಿರಣಗಳು ಭೂಮಿಯ ಸಮಭಾಜಕ ವೃತ್ತಕ್ಕೆ ಲಂಬವಾಗಿರುತ್ತದೆ. ನಂತರ ವಿಷುವದ್ ವೃತ್ತದ ಉತ್ತರಕ್ಕೆ ಚಲಿಸುವನು. ಮಾರ್ಚ್ 21 ರಿಂದ ಜೂನ್ 22 ರ ತನಕ ಸೂರ್ಯನು ಉತ್ತರದ ಕಡೆಗೆ ಚಲಿಸುತ್ತಾ, ಜೂನ್ 22 ರಂದು ಆತನ ಉತ್ತರಾಯಣದ ಪರಮೋಚ್ಛ ಬಿಂದುವನ್ನು ತಲುಪಿ, ಉತ್ತರಾರ್ಧಗೋಳದ 231/2 ಡಿಗ್ರಿಯನ್ನು ತಲುಪುತ್ತಾನೆ. ಇಲ್ಲಿಂದ ಮುಂದೆ ಸೂರ್ಯ ದಕ್ಷಿಣಕ್ಕೆ ಚಲಿಸುತ್ತಾನೆ ಇದೇ ದಕ್ಷಿಣಾಯಣ.

ನಂತರ ಸೆಪ್ಟೆಂಬರ್ 23 ರವರೆಗೆ ಸೂರ್ಯನು ದಕ್ಷಿಣಕ್ಕೆ ಚಲಿಸಿ, ಆ ದಿನದಂದು ಅದು ಮತ್ತೆ ಸಮಭಾಜಕ ವೃತ್ತಕ್ಕೆ ಲಂಬವಾಗಿ ಬರುತ್ತದೆ. ಅಂದು ಸೂರ್ಯನು ಜಲ ವಿಷುವದ್‌ದಲ್ಲಿ ಇರುತ್ತಾನೆ. ಸೆಪ್ಟೆಂಬರ್ 23 ರಿಂದ ಡಿಸೆಂಬರ್ 22 ರ ವರೆಗೆ ಸೂರ್ಯನು ವಿಷುವದ್ ವೃತ್ತದಿಂದ ದಕ್ಷಿಣಾಭಿಮುಖವಾಗಿ ಚಲಿಸುತ್ತಾನೆ. ಡಿಸೆಂಬರ್ 22 ರಂದು ಸೂರ್ಯನ ಕಿರಣಗಳು ದಕ್ಷಿಣಾರ್ಧಗೋಳದಲ್ಲಿ ಮಕರಸಂಕ್ರಾಂತಿ ವೃತ್ತಕ್ಕೆ ಲಂಬವಾಗಿರುತ್ತದೆ. ಇಲ್ಲಿಂದ ಮುಂದೆ ಸೂರ್ಯ ಉತ್ತರಕ್ಕೆ ಚಲಿಸುತ್ತಾನೆ ಇದೇ ಉತ್ತರಾಯಣ.

# ಜ್ಯೋತಿಭೀಮೇಶ್ವರ ಅಮಾವಾಸ್ಯೆ




-ಶ್ರೀಮತಿ. ಗಿರಿಜಾ. ಎಸ್. ದೇಶಪಾಂಡೆ.

ಆಷಾಡ ಮಾಸದ ಕೊನೆಯ ದಿನ ಎಂದರೆ ಅಮಾವಾಸ್ಯೆಯಂದು ಜ್ಯೋತಿಭೀಮೇಶ್ವರ ವ್ರತವನ್ನು ಆಚರಿಸುತ್ತಾರೆ. ಮಡದಿಯು ತನ್ನ ಪತಿಯ ಆಯಸ್ಸು ವೃದ್ಧಿ ಸಲೆಂದು ಈ ವ್ರತ ಆಚರಿಸಿದರೆ ಅವಿವಾಹಿತ ಮಹಿಳೆಯರು ತಮಗೆ ಒಳ್ಳೆಯ ಪತಿ ದೊರೆಯಲೆಂದು ಕೈಗೆ ಕಂಕಣ ತೊಟ್ಟು ಈ ವ್ರತ ಆಚರಿಸುತ್ತಾರೆ. ಇದೊಂದು ಮಹಿಳೆಯರ ಪಾಲಿಗೆ ಪವಿತ್ರ ಹಬ್ಬ.

**ಪೌರಾಣಿಕ ಹಿನ್ನಲೆ**

ಪುರಾಣಗಳ ಪ್ರಕಾರ ಮರಣ ಹೊಂದಿದ ಪತಿಯ ಪ್ರಾಣ ಉಳಿಸಿ ಕೊಳ್ಳಲು ಸತಿಯೊಬ್ಬಳು ಪಾರ್ವತಿ ಪರ ಶಿವರನ್ನು ಪ್ರಾರ್ಥಿಸುತ್ತಾಳೆ. ಆಕೆಯ ಭಕ್ತಿಗೆ ಮೆಚ್ಚಿ ಶಿವನು ಆಕೆಯ ಪತಿ ಯನ್ನು ಬದುಕಿಸಿ ಸತಿಪತಿಯರಿಗೆ ದೀರ್ಘಾಯುಷ್ಯವನ್ನು ನೀಡಿ ಆಶೀ ರ್ವಾದ ನೀಡುತ್ತಾನೆ. ಅವಳು ಮಾಡಿದ ಪೂಜೆ ಆಷಾಢ ಬಹುಳ (ಕೃಷ್ಣ ಪಕ್ಷ) ಅಮಾವಾಸ್ಯೆಯೆಂದು, ಕಠಿಣ ವ್ರತ ಆಚರಿಸಿದ್ದಕ್ಕಾಗಿ ಹಿಂದೂ ಸ್ತ್ರೀಯರ ಪಾಲಿಗೆ ಪತಿಯ ಆಯುಷ್ಯ ವೃದ್ಧಿ ವ್ರತ ದಿನಾಚರಣೆಯೂ ಆಗಿದೆ.

ಶಿವ ಪಾರ್ವತಿಯವರು ವಿವಾಹವಾದದ್ದೂ ಇಂದೇ ಎನ್ನುವ ಪ್ರತೀತಿ ಇದೆ. ಸಂತಾನ ಮತ್ತು ಶಕ್ತಿಯ ಪ್ರತೀಕ ವಾಗಿ ಪಾರ್ವತಿಯನ್ನು ಪೂಜಿಸಿ ಹೆಂಗಳೆಯರು ತಮಗೂ ಶಕ್ತಿ ನೀಡೆಂದು ಬೇಡುತ್ತಾರೆ.




"ಸಂಜೀವಿನಿವ್ರತ " - ಪತಿಗೆ ದೀರ್ಘಾಯುಷ್ಯ ನೀಡಿದ ಕಾರಣ ಈ ವ್ರತಕ್ಕೆ ಸಂಜೀವಿನಿ ವ್ರತವೆಂದೂ ಕರೆಯುತ್ತಾರೆ. ಒಮ್ಮೆ ವ್ರತ ಆಚರಿಸಿದರೆ ೫ ವರ್ಷ,೯ ವರ್ಷ ಅಥವಾ ೧೬ ವರ್ಷ ವ್ರತಾಚರಣೆ ಮಾಡಿ ವ್ರತ ಮುಗಿದ ನಂತರ ಜನರಿಗೆ ಅನ್ನದಾನ ಮಾಡುವ ಕ್ರಮ ನಮ್ಮಲ್ಲಿದೆ.

ಮರಳಿ ಗಂಡನ ಮನೆಗೆ - ಆಷಾಢದಲ್ಲಿ ತವರು ಮನೆಗೆ ಹೋದ ಹೊಸದಾಗಿ ಮದುವೆಯಾದ ಪತ್ನಿ ಪತಿಯ ಪೂಜೆಗಾಗಿ ತನ್ನ ಅತ್ತೆಯ ಮನೆಗೆ ಹಿಂದಿರುಗಿ ಬರುವಳು. ಮುಂದೆ ಶ್ರಾವಣದ ಹಬ್ಬಗಳು ಪ್ರಾರಂಭ ವಾಗುವವು. "ಭೀಮೇಶ್ವರನ ಪೂಜೆ" ಮೊದಲು ಗಣಪತಿಯ ಪೂಜೆ ಮಾಡಿ ಭೀಮೇಶ್ವರ ಅಂದರೆ ಶಿವನ ಪೂಜೆ ಮಾಡಿ ದೀಪಗಳಿಗೆ ಪೂಜಿಸಬೇಕು. ಗಣೇಶ ಅಷ್ಟೋತ್ತರ, ಶಿವನ ಅಷ್ಟೋತ್ತರ ಪಠಿಸಬೇಕು. ಗೋದಿಹಿಟ್ಟಿನಿಂದ ಮಾಡಿದ ಭಕ್ಷ್ಯ ಮಾಡಿ ನೈವೇದ್ಯ ಮಾಡಬೇಕು. ಅಂದಿನ ದಿನ ಹೊಸಿಲನ್ನು ಪೂಜಿಸಿ ಕಡಬಿನಲ್ಲಿ ಕಾಸನ್ನು ಇಟ್ಟು ಮನೆಯ ಮಗನ ಹತ್ತಿರ ಅದನ್ನು ಒಡೆಸಿ ಮನೆಯ ಹೆಣ್ಣುಮಗಳಿಗೆ ನೀಡಬೇಕು. ನಂತರ ಅಣ್ಣನ ಆಶೀರ್ವಾದ ಬೇಡುವ ಸೋದರಿ ಅಣ್ಣನಿಗೆ ಫಲ ತಾಂಬೂಲ ನೀಡುತ್ತಾಳೆ. ಈ ವ್ರತವನ್ನು ಆಚರಿಸಿ ಶ್ರಾವಣದ ಆಗ ಮನ ಮಾಡಿಕೊಳ್ಳೋಣ.



20

# ಕಡಬದ ಶ್ರೀ ರಾಮಲಕ್ಷ್ಮೀ ಜನಾರ್ದನ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕಡಬವು ಸಿರಾ - ಮೈಸೂರು ರಸ್ತೆಯಲ್ಲಿ ನಿಟ್ಟೂರಿನಿಂದ ಕೇವಲ 8 ಕಿ.ಮೀ. ದೂರದಲ್ಲಿದೆ. ಕಡಬ ಗ್ರಾಮವು ಒಂದು ಪುರಾಣ ಪ್ರಸಿದ್ಧ ಸ್ಥಳವಾಗಿದ್ದು, ಇದು ಹೆಬ್ಬಾರ್ ಶ್ರೀವೈಷ್ಣವರ ಪಂಚಗ್ರಾಮಗಳಲ್ಲೊಂದಾಗಿದ್ದು ಉಳಿದವು ಶಾಂತಿಗ್ರಾಮ, ನುಗ್ಗೇಹಳ್ಳಿ, ಬಿಂಡಿಗನವಿಲೆ, ಮಾಯಾಸಂದ್ರಗಳಾಗಿವೆ. ಶಿಂಶಾ ನದಿಯ ಬಲದಂಡೆಯ ಮೇಲಿರುವ ಊರಿನಲ್ಲಿ ಕದಂಬ ಋಷಿಯ ಆಶ್ರಮವಿದ್ದು ಅಲ್ಲಿಯೇ ತಪಸ್ಸು ನಡೆಸಿರುವುದರಿಂದ ಕದಂಬ ಎಂಬ ಊರು ಅನಂತರ ಕಡಬವಾಯಿತು ಎನ್ನಲಾಗಿದೆ. ಶ್ರೀರಾಮನು ರಾವಣನನ್ನು ಸಂಹರಿಸಿ ಲಂಕೆಯಿಂದ ಹಿಂತಿರುಗುವಾಗ ಋಷಿಗಳು ಅವನನ್ನು ಸತ್ಕರಿಸಿದರೆಂಬ ಐತಿಹ್ಯವಿದೆ. ಇಲ್ಲಿ ರಾಷ್ಟ್ರಕೂಟ ದೊರೆ ಮೂರನೆಯ ಗೋವಿಂದನ ಕ್ರಿ.ಶ. 813 ರ ತಾಮ್ರ ಶಾಸನವು ದೊರೆತಿದ್ದು ಮಾನ್ಯಪುರ (ಈಗಿನ ಮಣ್ಣೆಯ) ಸಮೀಪವಿದ್ದ ಶಿಲಾಗ್ರಾಮ ಎಂಬ ಗ್ರಾಮದಲ್ಲಿರುವ ಬಸದಿಗೆ ದಾನ ನೀಡಿರುವ ಉಲ್ಲೇಖ ದೊರೆಯುತ್ತದೆ.

ರಾಷ್ಟ್ರಕೂಟ ದೊರೆ ಒಂದನೆಯ ಕೃಷ್ಣನು ಎಲ್ಲೋರದ ಕೈಲಾಸ ದೇವಾಲಯವನ್ನು ನಿರ್ಮಿಸಿರುವ ಸಂಗತಿ ಕಡಬದ ತಾಮ್ರ ಶಾಸನದಲ್ಲಿ ದೊರೆಯುತ್ತದೆ. ಕಡಬದಲ್ಲಿ ಶ್ರೀರಾಮಲಕ್ಷ್ಮೀಜನಾರ್ದನ ದೇವಾಲಯ ಮತ್ತು ಕೈಲಾಸೇಶ್ವರ ದೇವಾಲಯ ಹಾಗೂ ಕೆರೆಕೋಡಿಯ ಹನಮ ದೇವಾಲಯಗಳಿವೆ.

ಕಡಬದ ಊರ ಮಧ್ಯದಲ್ಲಿರುವ ಶ್ರೀರಾಮ ದೇವಾಲಯವು ಮೂಲತಃ 12-13 ನೆಯ ಶತಮಾನಕ್ಕೆ ಸೇರುವ ಕಣಶಿಲೆಯಿಂದ ನಿರ್ಮಿತವಾದ ದೇವಾಲಯವಾಗಿದ್ದು ಅನಂತರ ಕಾಲದಲ್ಲಿ ವಿಸ್ತರಣೆಗೊಂಡಿದೆ. ಪ್ರಸ್ತುತ ಶ್ರೀರಾಮ ದೇವಾಲಯದಿಂದಲೇ ಕಡಬ ಗ್ರಾಮಕ್ಕೆ "ದಶರಥರಾಮ ಚತುರ್ವೇದಿಮಂಗಲ" ಎಂಬ ಹೆಸರಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ.

ಶ್ರೀರಾಮ ದೇವಾಲಯವು ಎತ್ತರವಾದ ಪ್ರದೇಶದಲ್ಲಿದ್ದು ಪ್ರವೇಶಿಸಲು ಮೆಟ್ಟಿಲುಗಳಿವೆ. ದೇವಾಲಯದ ಮುಂದೆ 25 ಅಡಿ ಎತ್ತರದ ಗರುಡ ಸ್ತಂಭವಿದೆ.ಶ್ರೀರಾಮ ದೇವಾಲಯವು ಆರು ಗರ್ಭಗೃಹಗಳನ್ನು ಹೊಂದಿದ್ದು, ಪಶ್ಚಿಮ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಐದು ಗುಡಿಗಳು ಹಾಗೂ ಉತ್ತರ ದಿಕ್ಕಿನಲ್ಲಿ ದಕ್ಷಿಣಾಭಿಮುಖವಾಗಿ ಒಂದು ಗರ್ಭಗುಡಿಯನ್ನು ಹೊಂದಿದೆ. ಆರು ಗುಡಿಗಳಿಗೆ ಒಂದು ನವರಂಗವಿದ್ದು ಅದು ಎಂಟು ಕಂಬಗಳನ್ನು ಹೊಂದಿದ್ದು ಬಹಳ ವಿಶಾಲವಾಗಿದೆ.

ಗರ್ಭಗುಡಿಯಲ್ಲಿ ಪೂರ್ವಾಭಿಮುಖವಾಗಿ ವೇಣುಗೋಪಾಲ, ಸತ್ಯನಾರಾಯಣ, ಜನಾರ್ದನ, ಶ್ರೀಲಕ್ಷ್ಮೀ ಮತ್ತು ಯೋಗನರಸಿಂಹರ ಮೂರ್ತಿಗಳಿದ್ದರೆ. ಉತ್ತರ ಗರ್ಭಗುಡಿಯಲ್ಲಿ ಶ್ರೀಸೀತಾಲಕ್ಷ್ಮಣಾಂಜನೇಯ ಸಹಿತ ಶ್ರೀರಾಮನ ಸುಂದರ ಮೂರ್ತಿಗಳಿವೆ. ವಾಸ್ತವವಾಗಿ ಶ್ರೀರಾಮನ ಮೂರ್ತಿಯ ಹೆಸರಿನಿಂದಲೇ ಈ ದೇವಾಲಯವು

**ಕರ್ನಾಟಕದ ವೈಷ್ಣವ ದೇವಾಲಯಗಳು**



ಕರೆಯಲಾಗಿದ್ದು ಮೂಲ ಮೂರ್ತಿ ಕಾಣೆಯಾಗಿತ್ತು. ಕ್ರಿ.ಶ. 1974 ರಲ್ಲಿ ನೂತನವಾಗಿ ಶ್ರೀರಾಮ ಪರಿವಾರದ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ಇಲ್ಲಿರುವ ವೇಣುಗೋಪಾಲ, ಜನಾರ್ದನ ಮತ್ತು ಯೋಗಾನರಸಿಂಹನ ಮೂರ್ತಿಗಳು ಹೊಯ್ಸಳರ ಕಾಲದ್ದಾಗಿದೆ.

ಶ್ರೀ ಲಕ್ಷ್ಮೀದೇವಿಯನ್ನು ಕ್ರಿ.ಶ. 1998 ರಲ್ಲಿ ಮತ್ತು ಸತ್ಯನಾರಾಯಣ ಸ್ವಾಮಿಯನ್ನು ಕ್ರಿ.ಶ. 2004 ರಲ್ಲಿ ಸ್ಥಾಪಿಸಲಾಗಿದೆ. ಶ್ರೀರಾಮ ದೇವಾಲಯದ ಬದಿಯ ಗುಡಿಯಲ್ಲಿ ಶ್ರೀರಾಮಾನುಜಾಚಾರ್ಯರು, ಆಳ್ವಾರರುಗಳು ಹಾಗೂ ಅಸೀನ ಉಪೇಂದ್ರ (ಗದಾ-ಚಕ್ರ- ಪದ್ಮ-ಶಂಖ) ಮುಂತಾದ ದೇವತಾ ಮೂರ್ತಿಗಳಿವೆ.ದೇವಾಲಯದ ನೂತನ ಮೂರ್ತಿಗಳೂ ಸಹ ಪ್ರಾಚೀನ ವಿಗ್ರಹದಂತೆ ಸೊಗಸಾಗಿರುವುದು ವಿಶೇಷ. ವೇಣುಗೋಪಾಲನು ಹಸನ್ಮುಖಿನಾಗಿ ಕತ್ತರಿ ಕಾಲನ್ನು ಹಾಕಿಕೊಂಡು ತಮಾಲ ವೃಕ್ಷದ ಅಡಿಯಲ್ಲಿ ಕೊಳಲು ನುಡಿಸುತ್ತಿರುವನು. ಪ್ರಧಾನ ಗರ್ಭಗುಡಿಯಲ್ಲಿರುವ ಜನಾರ್ದನ ಚಕ್ರ, ಶಂಖ, ಗದಾ, ಪದ್ಮಧಾರಿಯಾಗಿರುವನು. ನಾಲ್ಕನೆಯ ಗರ್ಭಗುಡಿಯಲ್ಲಿರುವ ಯೋಗಾನರಸಿಂಹನು ಯೋಗ ಪಟ್ಟಿಯನ್ನು ಹಾಕಿ ಕುಳಿತಿದ್ದು ಪ್ರಭಾವಳಿಯಲ್ಲಿ ದಶಾವತಾರದ ಚಿಕಣಿ ಶಿಲ್ಪಗಳಿವೆ. ನವರಂಗದಲ್ಲಿ ಸುಮಾರು 5-6 ನೆಯ ಶತಮಾನಕ್ಕೆ ಸೇರುವ ಅತ್ಯಂತ ಪ್ರಾಚೀನ ವಿನಾಯಕನ ಮೂರ್ತಿಯಿದೆ. ಅಗಲ ಕಿವಿ, ಕಿರೀಟ ರಹಿತ ಶಿರ, ದ್ವಿಬಾಹುಗಳನ್ನು ಹೊಂದಿರುವ ಗಣಪತಿಯ ಲಕ್ಷಣಗಳು, ಗೋಕರ್ಣ, ಇಡಗುಂಜಿ, ಹಟ್ಟಿಯಂಗಡಿಯ ವಿನಾಯಕನ ರೀತಿಯಲ್ಲಿಯೇ ಕಂಡು ಬರುತ್ತದೆ. ದೇವಾಲಯಕ್ಕೆ ಸಣ್ಣ ಮುಖಮಂಟಪವಿದ್ದು ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ವಿಷ್ಣುವಿನ ದ್ವಾರಪಾಲಕ ಮೂರ್ತಿಗಳಿವೆ. ಶ್ರೀರಾಮ ದೇವಾಲಯದ ಪ್ರವೇಶದ್ವಾರದ ಇಕ್ಕೆಲಗಳ ನಗಾರಿ ಕೋಣೆಯಲ್ಲಿ ಒಂದು ಕಡೆ ಮಾರುತಿಯ ಹಾಗೂ ಮತ್ತೊಂದು ಕಡೆ ಗರುಡದೇವನ ಮರದ ಮೂರ್ತಿಗಳಿವೆ.ಉತ್ಸವ ಕಾಲದಲ್ಲಿ ದೇವನ ವಾಹನವಾಗಿ ಇದನ್ನು ಬಳಸುವರು.ದೇವಾಲಯಕ್ಕೆ ಇತ್ತೀಚೆಗೆ ನಿರ್ಮಿಸಿರುವ ಅಂದವಾದ ರಾಜಗೋಪುರವಿದೆ.

ಕಡಬದ ಶ್ರೀರಾಮ ದೇವಾಲಯದ ಒಳಗೋಡೆಯ ಮೇಲಿರುವ ಕ್ರಿ.ಶ. 1226 ರ ದಾನ ಶಾಸನಗಳು ಹೊಯ್ಸಳರ ಕಾಲದ ಹದಿಮೂರನೆಯ ಶತಮಾನಕ್ಕೆ ಸೇರಿದ್ದಾಗಿವೆ. ಶಾಸನಗಳಲ್ಲಿ ಕಡಬವನ್ನು 'ಕ್ಕಡಮ್ಬ' ಎಂದು ಕರೆದಿದ್ದು, ನಿರ್ಗುಂದಿನಾಡಿಗೆ ಸೇರುವ ಸ್ಥಳವೆಂದಿದೆ. ಕಡಬದ ಮಹಾಜನಗಳು ದೇವರ ಸನ್ನಿಧಾನದಲ್ಲಿ ತಪ್ಪಿರಿವಿಂಬಿಯ ಅನುಸಂಧಾನದಲ್ಲಿ ಹಣವನ್ನು ಠೇವಣಿಯಾಗಿ ಇಟ್ಟು ಬರುವ ಬಡ್ಡಿಯಿಂದ ದೀಪಕ್ಕೆ ಎಣ್ಣೆ ತರುವಂತೆ ತಿರುವಿಡಿಯೊಟ್ಟಂ (ವೈಷ್ಣವ ಸರ್ವಮಾನ್ಯ) ಆಗಿ ಭೂದಾನವನ್ನು ಬಿಟ್ಟಿರುವ ಸಂಗತಿ ತಿಳಿದು ಬರುತ್ತದೆ. ಕಡಬದ ಶ್ರೀ ರಾಮ ಲಕ್ಷ್ಮೀ ಜನಾರ್ದನ ಸ್ವಾಮಿಯ ಬ್ರಹ್ಮರಥೋತ್ಸವವು ಪ್ರತಿವರ್ಷ ಚೈತ್ರ ಶುದ್ಧ ಚತುರ್ದಶಿಯಂದು ಬಹಳ ವೈಭವದಿಂದ ಜರುಗುತ್ತದೆ. ಚೈತ್ರ ಶುದ್ಧ ಅಷ್ಟಮಿಯಿಂದ ಆರಂಭವಾಗುವ ರಥೋತ್ಸವ ಸೇವಾಕೈಂಕರ್ಯಗಳು ಬಹು ವೈಭವದಿಂದ 10 ದಿನಗಳ ಕಾಲ ನೆರವೇರುವುದು. ಉತ್ಸವದ ಅಂಗವಾಗಿ ಸುದರ್ಶನ ಹೋಮ, ಶೇಷವಾಹನೋತ್ಸವ, ಪಕ್ಷಿವಾಹನೋತ್ಸವ, ಗರುಡೋತ್ಸವ, ಪ್ರಹ್ಲಾದ ಪರಿಪಾಲನೋತ್ಸವ, ಸೀತಾ ಕಲ್ಯಾ



ಣೋತ್ಸವ, ಡೋಲೋತ್ಸವ, ಶಯನೋತ್ಸವ, ಅಶ್ವವಾಹನೋತ್ಸವ, ಧ್ವಜಾವರೋಹಣದೊಂದಿಗೆ ಉತ್ಸವಕ್ಕೆ ತೆರೆ ಬೀಳುತ್ತದೆ.ನಂತರ ಮರುದಿನ ಸ್ವಾಮಿಗೆ ಮಹಾಭಿಷೇಕ, ದೊಡ್ಡ ಗರುಡೋತ್ಸವ ಮತ್ತು ದೊಡ್ಡ ಹನುಮಂತೋತ್ಸವ ತಡಿಯಾರಾಧನೆ ಮೂಲಕ ವೈಭವದ ಅದ್ದೂರಿಯ ರಥೋತ್ಸವವು ಮುಕ್ತಾಯಗೊಳ್ಳುತ್ತದೆ. ರಥೋತ್ಸವಕ್ಕೆ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸುತ್ತಾರೆ. ಕಡಬದ ಶ್ರೀರಾಮ ದೇವಾಲಯದಲ್ಲಿ ವರ್ಷಪೂರ್ತಿ ಸ್ವಾಮಿಯ ಸೇವೆಗಳು ಪಾಂಗಿತವಾಗಿ ನೆರವೇರುತ್ತವೆ. ಆಳ್ವಾರ್ ತಿರುನಕ್ಷತ್ರ, ಸೌರನರಸಿಂಹ ಜಯಂತಿ, ವಿಜಯದಶಮಿಯ ದಿನ ಶ್ರೀರಾಮ ಪಟ್ಟಾಭಿಷೇಕ, ಕಾರ್ತಿಕ ಮಾಸದಲ್ಲಿ ಕೃತಿಕೋತ್ಸವ, ವೈಕುಂಠ ಏಕಾದಶಿ ಉತ್ಸವಗಳು, ಮಕರಸಂಕ್ರಾಂತಿ ಹಾಗೂ ರಥಸಪ್ತಮಿಗಳಲ್ಲಿ ಪೂಜಾ ಕೈಂಕರ್ಯಗಳು ಬಹು ಪಾಂಗಿತಕವಾಗಿ ನೆರವೇರುತ್ತವೆ,..

ಕಡಬದ ಮತ್ತೊಂದು ಪ್ರಾಚೀನ ದೇವಾಲಯ, ಕೈಲಾಸೇಶ್ವರ ದೇವಾಲಯ ಊರಿನಲ್ಲಿ ಎಲ್ಲ ಪ್ರಾಚೀನ ಅಗ್ರಹಾರಗಳಲ್ಲಿರುವ ಊರ ಮಧ್ಯೆ ವಿಷ್ಣು ದೇವಾಲಯ ಹಾಗೂ ಊರ ಹೊರಗೆ ಕೆರೆಯಂಚಿನಲ್ಲಿ ಈಶಾನ್ಯ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಶಿವ ದೇವಾಲಯವಿದೆ. ಶಾಸನಗಳಲ್ಲಿಯೇ ಕೈಲಾಸೇಶ್ವರ ಎಂದು ಕರೆದಿರುವ ಶಿವಾಲಯವು ಮೂಲತಃ ಹತ್ತನೆಯ ಶತಮಾನದ ಚೋಳರ ಕಾಲಕ್ಕೆ ಸೇರಿದೆ.

ಹೀಗೆ ಬನ್ನಿ : ತುಮಕೂರು ಜಿಲ್ಲೆ, ಗುಬ್ಬಿ ತಾಲ್ಲೂಕಿನ ಕಡಬ ನಿಟ್ಟೂರು - ಮೈಸೂರು ರಸ್ತೆಯಲ್ಲಿ ನಿಟ್ಟೂರಿನಿಂದ 8 ಕಿ.ಮೀ. ದೂರದಲ್ಲಿದೆ. ಕುಣಿಗಲ್ -ಯಡಿಯೂರು - ತುರುವೇಕೆರೆ ತಿರುವು - ಮಾಯಸಂದ್ರ - ಕಲ್ಲೂರು ತಿರುವಿನ ಮುಖಾಂತರವೂ ಕಡಬವನ್ನು ಸೇರಬಹುದು.



ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ


- ಇಂಗ್ಲೀಷ್ ಮೂಲ : ಡಾ॥ ಎನ್.ರಮೇಶನ್

- ಕನ್ನಡಾನುವಾದ : ದಿ॥ ಜಿ.ಎನ್. ಶ್ರೀನಿವಾಸನ್


## *ಕರ್ನಾಟಕದ ನವಾಬರು-*

ಪೂರ್ವ ಕರ್ನಾಟಕದಲ್ಲಿ ಈ ಆಡಳಿತ ಪರಿವರ್ತನೆಯಿಂದಾಗಿ ಇನ್ನಷ್ಟು ಗೊಂದಲ ಕರ ಪರಿಸ್ಥಿತಿಯುಂಟಾಯಿತು. ಅನೇಕ ಮಂದಿ ರಕ್ಷಣೆಗಾಗಿ ಆಂಗ್ಲರ ಸೀಮೆಗಳತ್ತ ವಲಸೆ ಹೋದರು.ದಕ್ಷಿಣದ ಸುಬೇದಾರರು ಈ ಸೀಮೆ ಯಲ್ಲಿ ಅಧಿಕಾರ ಚಲಾಯಿಸಿದರು. ಈಸೀಮೆ ಹಲವು ಮೊಗಲ್ ಮರಾಠರ ಆಕ್ರಮಣಗಳನ್ನು ನೋಡಿತು. ಮೊಗಲರ ದೊರೆ ಒಂದನೇ ಷಹ ಆಲಂ ಕರ್ನಾಟಕ ಪ್ರಾಂತ್ಯವನ್ನು ಒಂದು ಪ್ರತ್ಯೇಕ ನವಾಬಿಯನ್ನಾಗಿ ಪರಿವರ್ತಿಸಿ ಕ್ರಿ.ಶ. 1710ರಲ್ಲಿ ಸಾದತುಲ್ಲಾಖಾನನನ್ನು ಕರ್ನಾಟ ಕದ ನವಾಬನಾಗಿ ನೇಮಿಸಿದ. ನವಾಬನ ಸಲ ಹೆಗಾರ ತೋಡರಮಲ್ಲನು ತಿರುಮಲೆಯ ಆಲ ಯವನ್ನು ಸಂದರ್ಶಿಸಿ ತನ್ನ ತಾಯಿ,ಪತ್ನಿ ಹಾಗೂ ತನ್ನ ವಿಗ್ರಹಗಳನ್ನು ಸ್ಥಾಪಿಸಿದ. ಮೊಗ ಲರ ದಕ್ಷಿಣದ ಸುಬೇ ದಾರ ಅಸಫ್-ಜಾ-ನಿಜಾ ಮುಲ್‌ಮುಲ್ಕನು ಕ್ರಿ.ಶ.1724ರಲ್ಲಿ ತಾನು ಸ್ವತಂತ್ರನೆಂದು ಘೋಷಿಸಿಕೊಂಡು ಕರ್ನಾಟ ಕದ ನವಾಬ ತನ್ನ ಅಧೀನ ಎಂದು ಸಾರಿದ. ಈ ಕಾಲದಲ್ಲಿ ಮರಾಠರು ಪೇಶ್ವೆಗಳ ನಾಯಕ ತ್ವದಲ್ಲಿ ಪ್ರಬಲ ರಾಗುತ್ತಿದ್ದು,ಕರ್ನಾಟಕವು ಪೇಶ್ವೆ ಹಾಗೂ ನಿಜಾಮರ ಜಗಳಗಳಲ್ಲಿ ಭಾಗ ಪಡೆಯು ವಂತಾಯಿತು.ಅಸಫ್‌ಜಾನು ಕ್ರಿ.ಶ. 1733ರಲ್ಲಿ ದೋಸ್ತ್ ಅಲಿಯನ್ನು ಕರ್ನಾಟಕದ ನವಾಬನ ನ್ನಾಗಿಸಿದ.ಏಳು ವರ್ಷಗಳ ನಂತರ ರಘೋ ಜಿಯ ಕಾಲದಲ್ಲಿ ಮರಾಠರ ಸೈನ್ಯವು ಈ ಸೀಮೆಯನ್ನು ಆಕ್ರಮಿಸಿ ತಿರುಮಲೆಯ ಬಳಿಯ ದಾಮಲಚೆರುವು ಯುದ್ಧದಲ್ಲಿ ನವಾಬನನ್ನು ಘೋರ ಸಮರದಲ್ಲಿ ಕೊಂದು,ಸೀಮೆಯನ್ನು ಲೂಟಿಮಾಡಿತು.ಈ ಕಾಲದಲ್ಲಿ ಪೇಶ್ವೆ ಬಾಜೀ ರಾಯನ ತಾಯಿ ಪತ್ನಿಯರು ತಿರುಮಲೆಯನ್ನು ಸಂದರ್ಶಿಸಿದರು.ಸಫ್ದರ್‌ಅಲಿಯು ನಂತರ ನವಾಬನಾದ. ಅವನು ತನ್ನ ಅಧೀನದಲ್ಲಿದ್ದ ತಿರುಮಲೆಯ ಆಲಯದ ಕೋಶಾಗಾರದ ಐವತ್ತು ಸಾವಿರ ರೂಪಾಯಿಗಳನ್ನು ಮರಾಠರಿಗೆ ನೀಡಿ ಶಾಂತಿಯನ್ನು ಪಡೆದ. ಕ್ರಿ.ಶ.1744 ರಲ್ಲಿ ಅನ್ವರುದ್ದೀನನು ನವಾಬನಾದ.ಆದರೆ ಹೈದರಾ ಬಾದಿನ ನಿಜಾಮನೂ,ಅವನ ಕರ್ನಾಟಕದ ನವಾಬನೂ ತೀರಿಕೊಂಡು ಉತ್ತರಾಧಿಕಾರದ ತುಮುಲ ಎರಡೂ ಕಡೆ ಭುಗಿಲೆದ್ದಿತು.ಇದೇ ಕಾಲದಲ್ಲಿ,ತಮ್ಮ ತವ ರೂರಿನಲ್ಲಿ ಯುದ್ಧ ಘೋಷ ಣೆಯಾದದ್ದರಿಂದ ಭಾರತದಲ್ಲಿದ್ದ ಫ್ರೆಂಚರೂ,

ಆಂಗ್ಲರೂ ಪರಸ್ಪರ ಯುದ್ಧದಲ್ಲಿ ತೊಡಗಿದರು. ಆರ್ಕಾಟಿಗೆ ಮುತ್ತಿಗೆ ಹಾಕಿದ್ದ ಆಂಗ್ಲ ಸೇನಾನಿ ಕ್ಲೈವನಿಗೆ,ಆಂಗ್ಲರು ನವಾಬ ಪಟ್ಟಕ್ಕೆ ಏರಿಸಿದ ಮಹಮದಾಲಿ (ಅನ್ವರುದ್ದೀನನ ಮಗ)ಯು ತಿರುಮಲೆ ಆಲಯದ ಕೋಶಾಗಾರದಿಂದ ಎರಡು ಲಕ್ಷ ರೂಪಾಯಿಗಳನ್ನು ನೀಡಿದ.

ಕ್ರಿ.ಶ.1750ರಲ್ಲಿ ಮಹಮದಾಲಿಯು ತನ್ನ ನೆರವಿಗರಾಗಿದ್ದ ಇಂಗ್ಲೀಷರ ಈಸ್ಟ್ ಇಂಡಿಯಾ ಕಂಪ ನಿಗೆ ತಿರುಪತಿ-ತಿರುಮಲೆ ದೇವಾಲಯಗಳ ಆದಾಯವನ್ನು ಬರೆದು ಕೊಟ್ಟ. ಮುಂದಿನ ಇಪ್ಪತ್ತು ವರ್ಷಗಳು ತಿರುಪತಿ ಸೀಮೆಯಲ್ಲಿ ಅತಿ ಗೊಂದಲಕರ ಪರಿಸ್ಥಿತಿಯಿತ್ತು. ಮಹಮದ್‌ಕಮಾಲ್ ಎಂಬ ಸಾಹಸಿ, ಈ ಪ್ರದೇಶವನ್ನು ಕೊಳ್ಳೆ ಹೊಡೆದ.ಅವನನ್ನು ಆಂಗ್ಲ ಕಂಪನಿಯ ಸೈನ್ಯ ಹೊಡೆದೋಡಿಸಿತು.ವೆಂಕಟಗಿರಿ,ಕಾರ್ವೇಟಿನಗರ, ಕಾಳಹಸ್ತಿಗಳ ಜಮಿಂದಾರರು ಉಪಟಳ ನೀಡಿದರು. ನವಾಬನ ಸಹೋದರ ನಜೀಬುಲ್ಲಾ ತಿರುಪತಿ ಸೀಮೆಯ ಮೇಲೆ ಧಾಳಿ ನಡೆಸಿ ಹೆದರಿಸಿದ. ಅವನ ಇನ್ನೊಬ್ಬ ಸಹೋದರ ಅಬ್ದುಲ್ಲಾವಹಾಬನೂ ಇದೇ ಹಾದಿಯನ್ನು ಹಿಡಿದ.ಇಬ್ಬರು ಮರಾಠ ಸರದಾರರು-ಗೋಪಾಲರಾವ್ ಹಾಗೂ ನಾರಾಯಣರಾವ್-ತಿರುಮಲೆಯ ಆಲಯವನ್ನು ಆಕ್ರಮಿಸಿದರು.ಆದರೆ ಓಡಿಸಲ್ಪಟ್ಟರು. ನಂತರ ಮೈಸೂರು ಸಿಂಹಾಸನವನ್ನು ವಶಪಡಿಸಿಕೊಂಡ ಹೈದರಾಲಿ ಇಲ್ಲಿ ಉಪಟಳವನ್ನುಂಟುಮಾಡಿದ. ನಿಜಾಮನೂ,ಕಂಪನಿಯವರೂ, ಹೈದರಾಲಿ ಮತ್ತು ಅವನ ಮಗ ಟಿಪ್ಪುಸುಲ್ತಾನನೊಡನೆ ಘನವಾದ ಯುದ್ಧ ಮಾಡಬೇಕಾಯಿತು. ಮೈಸೂರು ಯುದ್ಧಗಳ ಕಾಲದಲ್ಲಿ ಕಂಪನಿಯು ಕರ್ನಾಟಕದ ಆಳ್ವಿಕೆ ನೇರವಾಗಿ, ಕೈಗೆತ್ತಿ ಕೊಂಡಿತು.

### ಈ ಕಾಲದಲ್ಲಿ ತಿರುಮಲೆಯ ಆಲಯ

ಈ ಕಾಲದಲ್ಲಿ ತಿರುಮಲೆಯ ಆಲಯಕ್ಕೆ ಕಾಣಿ ಕೆಯ ರೂಪದಲ್ಲಿ ಬರುವ ಸಂಪತ್ತಿನ ಒಡೆತನಕ್ಕಾಗಿ ಹಲವಾರು ಘರ್ಷಣೆಗಳಾದವು, ಬಹಳ ವರ್ಷಗಳಿಂದಲೂ ಆಲಯದ ಆದಾಯವನ್ನು ಈ ಸೀಮೆಯ ಆಡಳಿತಗಾರರಿಗೆ ನೀಡುವುದು ನಡೆದು ಬಂದಿದ್ದಿತು.ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳ ಆದಾಯ ಪಡೆಯುತ್ತಿದ್ದ ಕರ್ನಾಟಕದ ನವಾಬ ಮಹಮದಾಲಿಯು ತನಗೆ ನೆರವು ನೀಡಿದ ಆಂಗ್ಲರಿಗೆ ಈ ಅಮೂಲ್ಯ ಸಂಪತ್ತಿನ ಆಸರೆಯನ್ನು ನೀಡಿದ. ಕ್ರಿ.ಶ.1753ರಲ್ಲಿ ಮಹಮದ್ ಕಮಾಲ ಸರದಾರ ತಿರುಮಲೆಗೆ ನಡೆದ ಮುತ್ತಿಗೆ ಹಾಕಿದ. ಇದರಿಂದಾಗಿ ಆದಾಯದ ಸೆಲೆ ತಪ್ಪಿ ಹೋಗಬಹುದೆಂಬ ಭಯ ಮದರಾಸಿನಲ್ಲಿದ್ದ ಕಂಪನಿಯವರಲ್ಲಿ ಉಂಟಾಯಿತು. ಒಂದು ಸಣ್ಣ ತುಕಡಿಯನ್ನು ಕಳುಹಿಸಿದರೂ ಮಹಮದ್ ಕಮಾಲನ ಸೈನ್ಯ ಈ ತುಕಡಿಯನ್ನು ತಿರುಪತಿಯ ಮೈದಾನದಲ್ಲಿಯೇ ಎದುರಿಸಿ ಸೋಲಿಸಿ ಓಡಿಸಿತು. ಮಾರನೆಯ ದಿನ ಮತ್ತೊಂದು ಸೈನ್ಯವನ್ನು ಕಳುಹಿಸಿ ತೀವ್ರ ಸೆಣಸಾಟ ನಡೆಸಲಾಯಿತು. ಸಮರದಲ್ಲಿ ಮಹಮದ್ ಕಮಾಲನು ಏರಿದ್ದ ಆನೆಯನ್ನು ಕೊಂದು ಅವನನ್ನು ಸೆರೆಹಿಡಿದು ಅಲ್ಲಿಯೇ ಕೊಲ್ಲಲಾಯಿತು.

ಕ್ರಿ.ಶ.1754 ರಲ್ಲಿ ಮಹಮದಾಲಿಯ ತನ್ನ ಅಧೀನರಿಂದ ಹೆಚ್ಚಿನ ಕಪ್ಪಗಾಣಿಕೆ ವಸೂಲಿ ಮಾಡ ಬೇಕೆಂದು ಆಂಗ್ಲರ ನೆರವು ಕೋರಿದನು. ಈ ಸೀಮೆಯಲ್ಲಿದ್ದ ಕಾರ್ವೇಟಿನಗರ ಶ್ರೀಕಾಳಹಸ್ತಿಯ ಪಾಳೆಯಗಾರರ ಹೆಚ್ಚಿನ ರಾಜಕಾಣಿಕೆಯನ್ನು ಕೊಡಲು ನಿರಾಕರಿಸಬಹುದೆಂದು ಆಂಗ್ಲರ ನೆರವು ಬೇಡಲಾಯಿತು. ಎಲ್ಲರೂ ವಿರೋಧವಿಲ್ಲದೆ ವಿಧೇಯರಾದರು. ಮಹಮದಾಲಿಯ ಸೋದರ ನಜೀಬುಲ್ಲಾ ದಂಗೆಯೆದ್ದು ಉತ್ತರಕ್ಕೆ ತಿರುಗಿ ಶ್ರೀಕಾಳಹಸ್ತಿ, ಕಾರ್ವೇಟಿನಗರ ಪಾಳೆಯಗಾರರ ಪ್ರದೇಶಗಳಲ್ಲಿ ಧಾಳಿ ನಡೆಸಿ ನವಾಬನ ಕೋಟೆಯನ್ನು ಹಿಡಿದ. ಕ್ರಿ.ಶ.ಕಳುಹಿಸಿ ತಿರುಮಲೆಯ ಕೆಳಗಿನ ನಗರವನ್ನು ಪಾಳಯವನ್ನಾಗಿ ಮಾಡಲಾಯಿತು. ಇದರಿಂದಾಗಿ ನಿರಾಶ ನಾದ ನಜೀಬುಲ್ಲನು ಧಾಳಿಯನ್ನು ಹಿಂದೆಗೆದುಕೊಂಡು ಆದಷ್ಟು ತಿರುಮಲೆಯ ಯಾತ್ರೀ ಕರನ್ನು ತಿರುಮಲೆ ಸೇರದಂತೆ ಓಡಿಸಿದ. ಇದರಿಂದಾಗಿ ಆ ವರ್ಷ ತಿರುಮಲೆಯ ಆದಾಯ ಸಾಕಷ್ಟು ಕಡಿಮೆಯಾಯಿತು. ಇದೇ ವರ್ಷದಲ್ಲಿ ಮರಾಠರ ಬಲವಂತರಾಯನ ಸೈನ್ಯದ ಧಾಳಿಯನ್ನೂ ಕರ್ನಾಟಕ ಎದುರಿಸಬೇಕಾಯಿತು. ಬಲವಂತರಾಯನು ಕಡಪವನ್ನು ಆಕ್ರಮಿಸಿ ನವಾಬ ಅಬ್ದುಲ್‌ಮಜೀದ್ ಖಾನನನ್ನು (ಕ್ರಿ.ಶ.1753-1757) ಕೊಂದು ಹಾಕಿದ. ಮಜೀದ್ ಖಾನನ ಉತ್ತರಾಧಿಕಾರಿಯಾಗಿ ಮೂಚಾಮಿಯಾ ಅಥವಾ ಮುಹಸೀನ್‌ಖಾನನು ಬಂದ. ಇವನು ಗುರ್ರಂಕೊಂಡವನ್ನು ಮರಾಠರಿಗೆ ಒಪ್ಪಿಸಿ ಶಾಂತಿಯನ್ನು ಪಡೆದ.ಬಲವಂತರಾಯನು ಆನಂತರ ಪಲಮನೇರಿನ ತಲಫುಲ ಗುಟ್ಟದ ಬಳಿಯ ಕಡಪನತ್ತಂ ಕೋಟೆಯನ್ನು ಹಿಡಿದ. ನಂತರ ಪುಂಗನೂರು ಪಾಳೆಯಗಾರರನ್ನು ಕೊಂದು ಅದನ್ನೂ ವಶಪಡಿಸಿಕೊಂಡ.

ಕ್ರಿ.ಶ.1758ರಲ್ಲಿ ಆರ್ಕಾಟ್ ನವಾಬನ ಮತ್ತೊಬ್ಬ ಸೋದರ ಅಬ್ದುಲ್ ವಹಾಬನು ತಿರುಪತಿ ಸೀಮೆಯಲ್ಲಿ ಧಾಳಿಯಿಟ್ಟು ಬೆದರಿ

ಸಿದ. ತನ್ನ ಸೋದರನೊಡನೆ ಜಗಳವಾಡಿದ ಅಬ್ದುಲ್‌ವಹಾಬನು ತನ್ನ ತಾಯಿ ಮತ್ತು ಮಗನೊಡನೆ ಚಿತ್ತೂರು ಸೀಮೆಗೆ ಓಡಿಬಂದ. ಚಿತ್ತೂರಿನ ಸ್ಥಳೀಯ ಪಾಳೆಯಗಾರರಿಂದ ಅವನು ಪೇಶ್‌ಕಶ್ ರಕಮನ್ನು ಪಡೆದು ತನ್ನ ಹಾಗೂ ಕಿರಿದಾದ ತನ್ನ ಪರಿವಾರವನ್ನು ನೋಡಿಕೊಂಡಿದ್ದ.

ನಂತರ ತಿರುಪತಿಯನ್ನು ಆಕ್ರಮಿಸಿ ತನ್ನ ಅದೃಷ್ಟವನ್ನು ಪರಿಕ್ಷೆಮಾಡಿ ನೋಡಬೇಕೆಂದು ಕೊಂಡ. ಸಾಕಷ್ಟು ಸೈನ್ಯವನ್ನು ಕೂಡಿಸಿಕೊಂಡು ಬೆಟ್ಟದ ತಪ್ಪ ಲಿನ ನಗರವನ್ನು ಭೀತಿಗೊಳಿಸಿದರೂ,ಆಂಗ್ಲ ಸೈನ್ಯ ಬರುತ್ತಿದೆ ಎಂಬ ವಾರ್ತೆಯಿಂದ ಮೇಲಿನ ಆಲಯವನ್ನು ಸೂರೆ ಮಾಡ ಲಿಲ್ಲ.ಹಿಂದಿರುಗಿ ಚಂದ್ರಗಿರಿ ಕೋಟೆಯನ್ನು ಆಕ್ರಮಿಸಿ ಸೂಕ್ತ ಸಮಯಕ್ಕಾಗಿ ಕಾದು ಕುಳಿತ.

ಹೈದರಾಬಾದಿನಿಂದ ಹಿಂದಿರು ಗುತ್ತಿದ್ದ ಫ್ರೆಂಚ್ ದಳಪತಿ ಬುಸ್ಸಿಯು ತಿರುಪತಿ ಪಟ್ಟಣಕ್ಕೆ ಮುತ್ತಿಗೆ ಹಾಕಿ,ಅಲ್ಲಿದ್ದ ಆಂಗ್ಲರ ಅಧಿಕಾರಿಯನ್ನು ಆಲಯದ ಆದಾಯವನ್ನು ತನ್ನ ಪರಮಾಡಲು ಒತ್ತಾಯಿಸಿದ.

ಅಬ್ದುಲ್‌ವಹಾಬನು ಬುಸ್ಸಿಯೊಡನೆ ಸೇರಿ ದಕ್ಷಿಣಕ್ಕೆ ಬಂದು ಆಲಯದ ಆದಾಯ ತನ್ನ ಪರವಾಗ ಬಹು ದೆಂದು ನಿರೀಕ್ಷಿಸಿದ.ಆದರೆ ಬುಸ್ಸಿಯಿಂದ ಪ್ರಯೋಜನವಾಗದೆ ಚಂದ್ರಗಿರಿಗೆ ಹಿಂದಿರುಗ ಬೇಕಾಯಿತು. ಮತ್ತೆ 1758 ರ ಡಿಸೆಂಬರಿನಲ್ಲಿ ಮರಾಠರ ದೊಡ್ಡ ಸೈನ್ಯವು ಗೋಪಾಲರಾಯನ ನೇತೃತ್ವದಲ್ಲಿ ತಿರುಪತಿಯನ್ನು ಸೇರಿ ಬೆಟ್ಟವನ್ನೇರಿ 1759 ರ ಏಪ್ರಿಲ್ ತಿಂಗಳಿನ ಆದಾಯವನ್ನು ಸೂರೆ ಮಾಡಲು ಆಲಯವನ್ನು ವಶಪಡಿಸಿಕೊಂಡಿತು.

ಆದರೆ ಸೈನ್ಯದ ಮುಖ್ಯಭಾಗವನ್ನು ಹಿಂದಕ್ಕೆ ಕಳುಹಿಸಿದ್ದರಿಂದ ಒಂದು ಸಣ್ಣ ಪಡೆಯು ನಾರಾಯಣ ಶಾಸ್ತ್ರಿಯ ನೇತೃತ್ವದಲ್ಲಿ ಆಲಯದ ಆಡಳಿತ ನಡೆಸುತ್ತಿತ್ತು.

ಅಬ್ದುಲ್‌ವಹಾಬನು ತನ್ನ ಸೈನ್ಯದೊಡನೆ ಬಂದು ಈ ಸಣ್ಣ ಸೇನೆಯನ್ನು ಓಡಿಸಿ ವಿಷಯವನ್ನು ಮದರಾಸು ಸರ್ಕಾರಕ್ಕೆ ನಿವೇದಿಸುತ್ತ ಆಲಯದ ಆದಾಯವನ್ನು ತನ್ನ ಪರಾಗಿಸಲು ಬೇಡಿದ. ಅವನ ಬೇಡಿಕೆಯನ್ನು ತಿರಸ್ಕರಿಸಿ ಹಿಂದಿನ ಅಧಿಕಾರಿಯನ್ನೇ ಪುನಃ ನಿಯಮನ ಮಾಡಲಾಯಿತು.

ನಾರಾಯಣಶಾಸ್ತ್ರಿಯು ತಿರುಪತಿಯ ಬಳಿಯ ಕರಕಂಬಾಡಿ ಪಾಳಯಕ್ಕೆ ಓಡಿಬಂದಿದ್ದ. 1759 ರ ಜುಲೈ ತಿಂಗಳಿನಲ್ಲಿ ಕರಕಂಬಾಡಿ ಪಾಳೆಯಗಾರನ ನೆರವಿನಿಂದ ಅವನು ಪುನಃ ಬೆಟ್ಟವನ್ನೇರಿ ಆಲಯವನ್ನು ಕೈವಶಮಾಡಿಕೊಂಡ. ಅವನನ್ನು ಪದಚ್ಯುತಗೊಳಿಸಲು ಒಂದು ಸೈನ್ಯ ಬಂದಿತಾದರೂ ಅದು ಸೋತು ಹಿಂದಿರುಗಿತು.

ಸೈನ್ಯ ಸಹಾಯಕ್ಕಾಗಿ ಮದರಾಸಿಗೆ ಅರ್ಜಿಯನ್ನು ಬರೆದುಕೊಳ್ಳಲಾಯಿತು.ಸೈನ್ಯದೊಡನೆ ಬಂದ ಆಂಗ್ಲ ಸೇನಾನಿ ಮೇಜರ್ ಕಲ್ಲಾಡನು ಶತ್ರುಗಳ ಗಮನವನ್ನು ಸೆಳೆಯಲು ದಾರಿ ತಪ್ಪಿಸುವಂತೆ ಕರಕಂಬಾಡಿಯ ಪಾಳೆಯ ವನ್ನು ಆಕ್ರಮಿಸಿದ. ಅದರ ಪಾಳೆಯಗಾರನನ್ನು ಕೊಂದನಂತರ ಕರಕಂಬಾಡಿ ಗ್ರಾಮವನ್ನು ಅಗ್ನಿಗಾಹುತಿ ಮಾಡಲಾಯಿತು.ಇದರಿಂದಾಗಿ ಮರಾಠರು ಮತ್ತವರ ಬೆಂಬಲಿಗರ ಧೈರ್ಯವಡುಗಿತು. ಮಾರ ನೆಯ ದಿನದ ಆಲಯದ ಬ್ರಿಟಿಷರ ಆಕ್ರಮಣ ಸಫಲವಾಯಿತು. ನಾರಾಯಣಶಾಸ್ತ್ರಿಯು ಹಿಂದೆಗೆದ. ಹಳೆಯ ಆದಾಯ ವಸೂಲಿ ಅಧಿಕಾರಿಯನ್ನು ಪುನಃ ಎತ್ತಿ ಹಿಡಿಯಲಾಯಿತು. ಅವನ ರಕ್ಷಣೆಗಾಗಿ ಒಂದು ಸಣ್ಣ ಸೈನ್ಯವನ್ನು ಬಿಟ್ಟು ಆಂಗ್ಲರು ಹಿಂದಿರುಗಿದರು. ಮತ್ತೆ ತಿರುಪತಿಯು ನಿಜಾಂ ಆಲಿಯ ಹಾಗೂ ಆಂಗ್ಲರ ಸಮರ ಭೂಮಿಯಾಯಿತು. ನಿಜಾಮಾಲಿಯ ಸೈನ್ಯ ಸೋತು ಶ್ರೀಕಾಳಹಸ್ತಿಯ ಮೂಲಕ ನೆಲ್ಲೂರಿನತ್ತ ಓಡಿಹೋಯಿತು.

### ಕಂಪನಿಯ ಪಾತ್ರ

ಮೈಸೂರಿನ ಯುದ್ಧಗಳಾದ ಮೇಲೆ ಕಂಪನಿಯು ಕರ್ನಾಟಿಕ ಸೀಮೆಯಲ್ಲಿ ವ್ಯವಸ್ಥೆಯನ್ನುಂಟಾಗಿಸಲು ಪ್ರಯತ್ನಿಸಿತು. ಮಹಮದಾಲಿಯ ಉತ್ತರಾಧಿಕಾರಿಗಳು ಇದನ್ನು ವಿರೋಧಿಸಿದರು. ಕಂಪನಿಯ ನವಾಬನಿಗೆ ಬಲತ್ಕಾರದಿಂದ ಪಿಂಛಣಿಯನ್ನು ನೀಡಿ ಕ್ರಿ.ಶ. 1801ರಲ್ಲಿ ಈ ಪ್ರದೇಶದ ಆಡಳಿತವನ್ನು ವಹಿಸಿಕೊಂಡಿತು. ಹಿಂದೂ ಆಲಯಗಳ ಆಡಳಿತವನ್ನು ನಡೆಸಲು ಇಷ್ಟಪಡದ ಕಂಪನಿಯು ತಿರುಮಲೆ-ತಿರುಪತಿ ಆಲಯಗಳನ್ನು ಕ್ರಿ.ಶ.1843 ರಲ್ಲಿ ಮಹಂತರಿಗೆ ಒಪ್ಪಿಸಿತು.

ಕ್ರಿ.ಶ.1933ರಲ್ಲಿ ಮದರಾಸು ಸರ್ಕಾರವು ಆಲಯಗಳನ್ನು ಆಧೀನಪಡಿಸಿಕೊಂಡು,ಒಂದು ಧರ್ಮಕರ್ತರ ಮಂಡಳಿಯ ಕೈಗೆ ಆಡಳಿತವನ್ನೊಪ್ಪಿಸಿತು. ಆಂಧ್ರಪ್ರದೇಶದ ಅವತರಣವಾದ ಮೇಲೆ ಈ ಆಲಯಗಳು ಆಂಧ್ರಪ್ರದೇಶದ ಸರ್ಕಾರದ ವಶಕ್ಕೆ ಬಂದವು.



## ಶ್ರೀ ವೇಂಕಟೇಶ್ವರನ ಘಂಟಾವತಾರವಾದ ವೇದಾಂತದೇಶಿಕರ ರಚನೆ

# ಸುದರ್ಶನಾಷ್ಟಕಂ



ಪ್ರತಿಭಟಶ್ರೇಣಿಭೀಷ ವರಗುಣಸ್ತೋಮ ಭೂಷಣ
ಜನಿಭಯಸ್ಥಾನತಾರಣ ಜಗದವಸ್ಥಾನ ಕಾರಣ
ನಿಖಿಲದುಷ್ಕರ್ಮಕರ್ಶನ ನಿಗಮ ಸದ್ಧರ್ಮದರ್ಶನ
ಜಯ ಜಯ ಶ್ರೀಸುದರ್ಶನ ಜಯ ಜಯ ಶ್ರೀಸುದರ್ಶನ ॥ 1 ॥

ಓ ಸುದರ್ಶನ ಚಕ್ರವೇ! ನೀನು ಪ್ರತಿಕೂಲವರ್ಗದವರಿಗೆ ಭಯಂಕರನಾಗಿರುವೆ. ಶ್ರೇಷ್ಠವಾದ ಗುಣಗಳೇ ನಿನಗೆ ಆಭರಣಗಳು,ಜನನ,ಜರಾ,ಮರಣಗಳಿಂದ ಕೂಡಿರುವ ಸಂಸಾರ ಭಯವನ್ನು ತೊಲಗಿಸುವೆ. ಲೋಕ ಸ್ಥಿತಿಗೆ ಕಾರಣನಾದವನು.ಸಕಲ ಪಾಪಗಳನ್ನು ನಿರ್ಮೂಲ ಮಾಡುವಂತವನು ವೇದ ಧರ್ಮಗಳನ್ನು ದರ್ಶನ ಮಾಡಿಸುವವನು ನೀನೆ. ಇಂತಹ ನೀನು ಸರ್ವೋತ್ಕರ್ಷಗಳಿಂದ ವಿರಾಜಿಸುವವನಾಗು.

ಶುಭಜಗದ್ರೂಪ ಮಂಡನ ಸುರಜನತ್ರಾಸಖಂಡನ
ಶತಮಖಬ್ರಹ್ಮವಂದಿತ ಶತಪಥಬ್ರಹ್ಮನಂದಿತ
ಪ್ರಥಿತವಿದ್ವತ್ಸ ಪಕ್ಷಿತಭಜದಹಿರ್ಬುಧ್ನ್ಯಲಕ್ಷಿತ
ಜಯ ಜಯ ಶ್ರೀಸುದರ್ಶನ ಜಯ ಜಯ ಶ್ರೀಸುದರ್ಶನ ॥2॥

ಜಗನ್ಮಂಗಳ ವಿಗ್ರಹನಾದ ಶ್ರೀಮನ್ನಾರಾಯಣನಿಗೆ ಅಲಂಕಾರ ಭೂಷಿತನು,ದೇವತೆಗಳ ಭಯವನ್ನು ನಿವಾರಿಸುವವನು ಇಂದ್ರನಿಂದ, ಬ್ರಹ್ಮನಿಂದ ನಮಸ್ಕರಿಸಲ್ಪಡುವವನು,ಅಥರ್ವೇದೀಯವಾದ ಶತಪಥ ಬ್ರಾಹ್ಮಣನಿಂದ ಕೊಂಡಾಡಲ್ಪಡುವವನು,ಅಹಿರ್ಬುಧ್ನ್ಯ ಸಂಹಿತೆಯಲ್ಲಿ ಪ್ರತಿಪಾದಿಸಲಾದ ವೈಭವವುಳ್ಳವನು ಆದ ಶ್ರೀಸುದರ್ಶನಾ! ನಿನಗೆ ಜಯವಾಗಲಿ! ನಿನಗೆ ಜಯವಾಗಲಿ.

ನಿಜಪದ ಪ್ರೀತಸದ್ಗುಣನಿರುಪಧಿಸ್ಫೀತಷಡ್ಗುಣ
ನಿಗಮ ನಿರ್ವ್ಯೂಢವೈಭವ ನಿಜಪರವ್ಯೂಹ ವೈಭವ
ಹರಿಹಯ ದ್ವೇಷಿದಾರಣ ಹರಪುರ ಪ್ಲೋಷಕಾರಣ
ಜಯ ಜಯ ಶ್ರೀಸುದರ್ಶನ ಜಯ ಜಯ ಶ್ರೀಸುದರ್ಶನ ॥3॥

ನಿನ್ನ ಚರಣಾರವಿಂದಗಳಲ್ಲಿ ಪ್ರೀತಿವಂತರಾದ ಸಾಧು ಸಮೂಹವನ್ನು ಹೊಂದಿರುವನಾದ! ಸ್ವಾಭಾವಿಕವೂ, ಪರಿಪೂರ್ಣವೂ ಆದ ಜ್ಞಾನ,ಬಲ, ಐಶ್ವರ್ಯ, ವೀರ್ಯ, ಶಕ್ತಿ, ತೇಜಸ್ಸುಗಳೆಂಬ ಆರು ಗುಣಗಳುಳ್ಳವನೇ! ವೇದಗಳಲ್ಲಿ ಸುತ್ತಿಸಲ್ಪಟ್ಟ ಮಹಿಮೆಯುಳ್ಳವನೇ! ಆತ್ಮೀಯವಾದ ಪರ, ವ್ಯೂಹ,ವಿಭವ,ಅಂತರ್ಯಾಮಿ,ಅರ್ಚನೆಗಳೆಂಬ ಐದು ರೂಪಗಳನ್ನು ಹೊಂದಿರುವವನೇ! ಇಂದ್ರನ ವಿರೋಧಿಗಳಾದ ರಾಕ್ಷಸರನ್ನು ಸೀಳಿ ಚೆಂಡಾಡುವವನೇ ಕಾಶಿ ಪಟ್ಟಣ ಸುಡುವುದಕ್ಕೆ ಕಾರಣನಾದವನೇ ಸುದರ್ಶನಾ! ನಿನಗೆ ಜಯವಾಗಲಿ.

ಸ್ಫುಟತಟಿಜ್ಜಾಲಪಿಂಜರ ಪೃಥುತರಜ್ವಾಲಪಂಜರ
ಪರಿಗತ ಪ್ರತ್ನ ವಿಗ್ರಹ ಪರಿಮಿತ ಪ್ರಜ್ಞದುರ್ಗ್ರಹ
ಪ್ರಹರಣಗ್ರಾಮಮಂಡಿತ ಪರಿಜನತ್ರಾಣ ಪಂಡಿತ
ಜಯಜಯ ಶ್ರೀಸುದರ್ಶನ ಜಯಜಯ ಶ್ರೀಸುದರ್ಶನ ॥4॥

ಮಿರ ಮಿರನೆ ಹೊಳೆಯುವ ಬಂಗಾರದ ಬಣ್ಣದವನೇ? ಮಿಗಿಲಾದ ದೊಡ್ಡ ಅಗ್ನಿಜ್ವಾಲೆಗಳ ನಡುವೆ ಬೆಳಗುವವನೇ! ಸನಾತನವಾದ ರೂಪವುಳ್ಳವನೇ ಮೇಧಾವಿಗಳು, ಬುದ್ಧಿವಂತರು ಸಹ ಗ್ರಹಿಸಲಾಗದವನೇ ಆಯುಧ ಸಮೂಹಗಳಿಂದ ಅಲಂಕೃತಗೊಂಡವನೇ! ಆಶ್ರಿತ ಜನರನ್ನು ರಕ್ಷಿಸುವ ಸಾಮರ್ಥ್ಯವುಳ್ಳವನೇ! ಶ್ರೀಸುದರ್ಶನಾ ನಿನಗೆ ಜಯವಾಗಲಿ,ನಿನಗೆ ಜಯವಾಗಲಿ.





ಭುವನ ನೇತಸ್ತ್ರ ಯೀಮಯ ಸವನತೇಜಸ್ತ್ರಯೀಮಯ
ನಿರವಧಿ ಸ್ವಾದುಚಿನ್ಮಯ ನಿಖಿಲಶಕ್ತೇ ಜಗನ್ಮಯ
ಅಮಿತ ವಿಶ್ವಕ್ರಿಯಾಮಯ ಶಮಿತ ವಿಶ್ವಗ್ಭಯಾಮಯ
ಜಯ ಜಯ ಶ್ರೀ ಸುದರ್ಶನ ಜಯ ಜಯ ಶ್ರೀಸುದರ್ಶನ ॥5॥

ಮೂರು ಲೋಕಗಳಿಗೂ ನೇತ್ರದಂತಿರುವವನೇ! ಋಗ್,ಸಾಮ,ಯಜುರ್ವೇದ ಸ್ವರೂಪನೇ!ಯಜ್ಞಗಳಲ್ಲಿ ಆರಾಧಿಸಲ್ಪಡುವ ಗಾರ್ಗ ಪತ್ಸ, ಆಹವನೀಯ ದಕ್ಷಿಗಾಗ್ನಿಗಳೆಂಬ ಕೋಪಾಗ್ನಿ ರೂಪದವನೇ! ಅಪರಿಮಿತ ಭೋಗ್ಯವಾದ ಜ್ಞಾನವುಳ್ಳವನೇ!ಸರ್ವವಿಧ ಸಾಮರ್ಥವುಳ್ಳವನೇ! ಜಗದ್ರೂಪವನ್ನು ಹೊಂದಿರುವವನೇ! ಸಂಸಾರ ಭಯವೆಂಬ ರೋಗವನ್ನು ನಿವಾರಿಸುವವನೇ! ನಿನಗೆ ಜಯವಾಗಲಿ ವಿಜಯವಾಗಲಿ.





ಮಹಿತ ಸಂಪತ್ಸದಕ್ಷರ ವಿಹಿತ ಸಂಪತ್ಷಡಕ್ಷರ
ಷಡರ ಚಕ್ರಪ್ರತಿಷ್ಠಿತ ಸಕಲತತ್ತ್ವಪ್ರತಿಷ್ಠಿತ
ವಿವಿಧ ಸಂಕಲ್ಪಕಲ್ಪಕ ವಿಬುಧ ಸಂಕಲ್ಪಕಲ್ಪಕ
ಜಯಜಯ ಶ್ರೀ ಸುದರ್ಶನ ಜಯ ಜಯ ಶ್ರೀಸುದರ್ಶನ ॥6॥

ಪ್ರಶಸ್ತಜ್ಞಾನ ಸಂಪತ್ತಿನಿಂದ ಕೂಡಿದ ಆಶ್ರಿತರಿಗೆ ಮೋಕ್ಷ ರೂಪದವನೇ! ಐಶ್ವರ್ಯವನ್ನು ಕಲ್ಪಿಸುವ ಆರು ಅಕ್ಷರಗಳಿಂದ ಕೂಡಿದ ಮಂತ್ರದಿಂದ ಉಪಾಸಿಸಲ್ಪಡುವವನೇ! ಆರು ಕೋನಗಳುಳ್ಳ ಚಕ್ರದಲ್ಲಿರುವವನೇ!ಸಮಸ್ತ ಭಾವಗಳಲ್ಲಿ ಅಂತರ್ಯಾಮಿಯಾಗಿ ನೆಲಸಿರುವವನೇ! ನಾನಾ ವಿಧವಾದ ಕೋರಿಕೆಗಳಿಗೆ ಕಲ್ಪವೃಕ್ಷದಂತಿರುವವನೇ! ದೇವತೆಗಳ ಆಸೆ-ಆಕಾಂಕ್ಷೆಗಳನ್ನು ಈಡೇರಿಸುವವನೇ! ಶ್ರೀಸುದರ್ಶನಾ ನಿನಗೆ ಜಯವಾಗಲಿ



ಪ್ರತಿ ಮುಖಾಲೀಢಬಂಧುರ ಪೃಥುಮಹಾಹೇತಿದಂತುರ
ವಿಕಟಮಾಲಾ ಪರಿಷ್ಕೃತ ವಿವಿಧ ಮಾಯಾಬಹಿಷ್ಕೃತ
ಸ್ಥಿರಮಹಾಯಂತ್ರ ಯಂತ್ರಿಕ ದೃಢದಯಾತಂತ್ರ ಯಾಂತ್ರಿತ
ಜಯ ಜಯ ಶ್ರೀಸುದರ್ಶನ ಜಯ ಜಯ ಶ್ರೀಸುದರ್ಶನ ॥7॥

ಬಲಗಾಲನ್ನು ಮುಂದಕ್ಕೆ ಚಾಚಿ,ಎಡಗಾಲನ್ನು ಹಿಂದಕ್ಕೆ ಮಡಚಿದರೆ,ಪ್ರತ್ಯಾಲೀಢವೆಂಬ ಬಂಧವೆನಿಸುತ್ತದೆ. ಇಂತಹ ಪ್ರತ್ಯಾಲೀಢ ಬಂಧನದಿಂದ ಮನೋಹರನಾಗಿರುವವನೇ! ಶ್ರೇಷ್ಠವಾದ ಆಯುಧಗಳನ್ನು ಹೊಂದಿರುವವನೇ! ವಿಚಿತ್ರವಾದ ಮಾಯೆಗೆ ಅತೀತನಾದವನೇ! ಹಲವಾರು ಮಾಲೆಗಳಿಂದ ಅಲಂಕೃತನಾದವನೇ! ಅಚಂಚಲವಾದ ದೊಡ್ಡ ಯಂತ್ರದಲ್ಲಿ ಪ್ರತಿಷ್ಠಾಪಿತನಾದವನೇ! ದೃಢವಾದ ಕೃಪೆಯೆಂಬ ತಂತ್ರದಿಂದ ವಶೀಕೃತನಾದವನೇ! ನಿನಗೆ ಜಯವಾಗಲಿ.

ದನುಜವಿಸ್ತಾರಕರ್ತನ ದನುಜವಿದ್ಯಾವಿಕರ್ತನ
ಜನಿತಮಿಸ್ರಾವಿ ಕರ್ತನ ಭಜದ ವಿದ್ಯಾನಿಕರ್ತನ
ಅಮರ ದೃಷ್ಟಸ್ವ ವಿಕ್ರಮುಸಮರಜುಷ್ಟಭ್ರ ಮಿಕ್ರಮ
ಜಯ ಜಯ ಶ್ರೀಸುದರ್ಶನ ಜಯಜಯ ಶ್ರೀಸುದರ್ಶನ ॥8॥

ರಾಕ್ಷಸರ ಪ್ರಾಬಲ್ಯವನ್ನು ಛೇದಿಸಿದವನೇ! ಅಸುರರ ಮಾಯೆಯನ್ನು ನಿರ್ಮೂಲ ಮಾಡಿದವನೇ ಸಂಸಾರವೆಂಬ ಕತ್ತಲೆಯ ರಾತ್ರಿಗೆ ಸೂರ್ಯನಂತಿರುವವನೇ ಭಕ್ತರ ಅಜ್ಞಾನವನ್ನು ಪೂರ್ಣವಾಗಿ ತೊಲಗಿಸುವವನೇ ದೇವತೆಗಳಿಂದ ಪ್ರದರ್ಶಿಸಲ್ಪಡುವ ಸ್ವಕೀಯ ಪರಾಕ್ರಮವುಳ್ಳವನೇ! ರಣರಂಗದಲ್ಲಿ ಚಿತ್ರ ವಿಚಿತ್ರವೆನಿಸುವ ಭ್ರಮೆಗಳುಳ್ಳವನೇ! ಶ್ರೀಸುದರ್ಶನಾ ನಿನಗೆ ಜಯವಾಗಲಿ.

ದ್ವಿಚತುಷ್ಕಮಿದಂ ಪ್ರಭೂತಸಾರಂ
ಪಠತಾಂ ವೇಂಕಟನಾಯಕ ಪ್ರಣೀತಮ್
ವಿಷಮೇಽಪಿ ಮನೋರಥಃ ಪ್ರಧಾವನ್
ನ ವಿಹನ್ಯೇತ ರಥಾಂಗಧುರ್ಯ ಗುಪ್ತಃ

ಶ್ರೀವೇದಾಂತ ದೇಶಿಕರಿಂದ ಉಪದೇಶಿಸಲ್ಪಟ್ಟ ಮಹತ್ತರವೆನಿಸಿದ ಈ ಸುದರ್ಶನಾಷ್ಟಕವನ್ನು ಆಶ್ರಯಿಸುವ ಭಕ್ತರ ಮನಸ್ಸು ಒಮ್ಮೊಮ್ಮೆ ಅನಗತ್ಯ ವಿಷಯಗಳತ್ತ ಹೊರಳಿದರೂ ಸಹ ಶ್ರೀಸುದರ್ಶನನಿಂದ ರಕ್ಷಿಸಲ್ಪಟ್ಟು ನಮ್ಮನ್ನು ಉದ್ಧರಿಸುತ್ತದೆ.

## ಇತಿ ಶ್ರೀ ವೇದಾನ್ತಾಚಾರ್ಯಸ್ಯ ಕೃತಿಷು ಸುದರ್ಶನಾಷ್ಟಕಮ್॥

**ಶ್ರೀಸುದರ್ಶನನ ಅನುಗ್ರಹದಿಂದ ಸುದರ್ಶನಾಷ್ಟಕ ಪಠಿಸುವವರು ಸಕಲಾಭಿಷ್ಟ ಸಿದ್ಧಿಯನ್ನು ಪಡೆಯುತ್ತಾರೆ.**

# ವಿಭೂತಿ ಪುರುಷರಾದ ಶ್ರೀವೃಂದಾವನಾಚಾರ್ಯರು

- ಶ್ರೀಧರ ರಾಯಸಂ

98453 27129



ಭಾವಿ ಸಮೀರ ಶ್ರೀವಾದಿರಾಜರು ಫಾಲ್ಗುಣ ಕೃಷ್ಣ ತೃತೀಯಾ ಬುಧವಾರ ಸ್ವಾತಿ ನಕ್ಷತ್ರದಲ್ಲಿ ಶಾಲಿವಾಹನ ಶಕ. 1522 (ಕ್ರಿ.ಶ. 1601) ಸಶರೀರ ಬೃಂದಾವನ ಪ್ರವೇಶ ಮಾಡಿದಾಗ, ಅನೇಕ ಭಕ್ತ ಜನರು ದಿಕ್ಕು ಕಾಣದೇ ಪ್ರಾರ್ಥಿಸಲು, ಶ್ರೀವಾದಿರಾಜರು ತಮ್ಮ ಕಾವಿ ಶಾಟಿ, ಸ್ವರ್ಣ ಪಾದುಕೆಗಳನ್ನು ಭಕ್ತರಿಗೆ ಕೆಳಗೆ ಹಾಕಿ,ಭೂತರಾಜರಿಂದ ಸೇವಿತರಾಗಿ, ಒಂದಂಶದಿಂದ ವೃಂದಾವನದಲ್ಲಿ ನೆಲೆಸಿರುವರು. ಭಕ್ತರ ಮನೋಭೀಷ್ಟಗಳನ್ನು ಕೊಡುವೆನು ಎಂದು ವಿಮಾನದಲ್ಲಿ ಕುಳಿತು ಮೇಲಕ್ಕೆ ಹೊರಟರು.

ಶ್ರೀವಾದಿರಾಜರ ಶಿಷ್ಯರಾದ ವೇದವೇದ್ಯತೀರ್ಥರು ತಮ್ಮ ಶಿಷ್ಯ ವೇದನಿಧಿ ತೀರ್ಥರಿಗೆ ಆಶ್ರಮ ನೀಡಿದಾಗ ಅವರು ನಿರಂತರ ಶ್ರೀವಾದಿರಾಜರ ಸೇವೆ ಮಾಡಲು, ಮಠದಲ್ಲಿದ್ದ ಎಡಮೂಕ ಬ್ರಾಹ್ಮಣ ಲಕ್ಷ್ಮೀಪತಿಗೆ ಶ್ರೀವಾದಿರಾಜರು ತಮ್ಮ ಅಪಾರ ಮಹಿಮೆ ಸ್ವಪ್ನದಲ್ಲಿ ಬೋಧಿಸಿದರು. ಆ ಬ್ರಾಹ್ಮಣ ಉಪದೇಶಿಸಿದ ಬೋಧನೆಯನ್ನು ವೇದನಿಧಿಗಳ ಸನ್ನಿಧಿಯಲ್ಲಿ ಹೇಳಿ,ಪುನಃ ಮೂಕನಾಗುತ್ತಿದ್ದ.ಅವನು ಹೇಳಿದ ಶ್ಲೋಕಗಳೇ,"ಶ್ರೀಸ್ವಾಪ್ನ ವೃಂದಾವನಾಖ್ಯಾನ"ಎಂದು ಪ್ರಸಿದ್ಧಿಯಾಗಿದೆ. ಪ್ರತಿದಿನ ಎಡಮೂಕನಿಂದ ಕೇಳುತ್ತಿದ್ದ ಶ್ಲೋಕಗಳನ್ನು ವೇದನಿಧಿತೀರ್ಥರು ತಮ್ಮ ಶಿಷ್ಯರಾದ ರಾಮಚಂದ್ರಾಚಾರ್ಯರಿಂದ ಬರೆಸಿದರು. 22 ಅಧ್ಯಾಯಗಳ ಸಾರರೂಪವಾಗಿ ವೇದನಿಧಿತೀರ್ಥರು ವೃಂದಾವನಾಖ್ಯಾನದ ಕೆಲವು ಶ್ಲೋಕಗಳನ್ನು ಸಂಗ್ರಹಿಸಿ "ಅಣು ವೃಂದಾವನಾಖ್ಯಾನ" ಎಂಬುದನ್ನು ಶಿಲೆಯಲ್ಲಿ ಕೆತ್ತಿಸಿ, ಸೋದೆಯಲ್ಲಿ ಶ್ರೀವಾದಿರಾಜರ ವೃಂದಾವನದ ಹತ್ತಿರ ವೇದವೇದ್ಯರ ಪಕ್ಕದಲ್ಲಿ ಸ್ಥಾಪಿಸಿದ್ದಾರೆ.

ಸ್ವಾಪ್ನ ವೃಂದಾವನಾಖ್ಯಾನವನ್ನು ಶ್ರೀವಾದಿರಾಜರಿಂದ ಕೇಳಿ ವೇದನಿಧಿತೀರ್ಥರಿಗೆ ಹೇಳಿದ ಎಡಮೂಕ ಬ್ರಾಹ್ಮಣ ಲಕ್ಷ್ಮೀಪತಿ 200 ವರ್ಷಗಳ ನಂತರ ವಿಶ್ವಪ್ರಿಯ ತೀರ್ಥರೇ "ವೃಂದಾವನಾಚಾರ್ಯ"ರೆಂದು ಪ್ರಖ್ಯಾತರಾದ ವಿಭೂತಿ ಪುರುಷರು. ಇವರ ಕಾಲ ಕ್ರಿ.ಶ. 1776 ರಿಂದ 1865 ಎಂದು ತಿಳಿದು ಬಂದಿದೆ.

ಶ್ರೀವಾದಿವೃಂದಾವನಚಾರ್ಯರು ಆಸೇತು ಹಿಮಾಚಲದ ತೀರ್ಥ ಕ್ಷೇತ್ರಗಳನ್ನು ಸೇವಿಸಿ,ಅನೇಕ ಭಕ್ತರನ್ನು ಉದ್ಧರಿಸಿ ಮಹಿಮೆಗಳನ್ನು ಪ್ರದರ್ಶಿಸಿದ, ಭಾವಿ ಇಂದ್ರರೆಂದೇ ಪ್ರಸಿದ್ಧಿಯಾದವರು. ಸೋದೆಯಲ್ಲಿ ಆಚಾರ್ಯಮಧ್ವರ ಸರ್ವ ಮೂಲ ಮತ್ತು ವಾದಿರಾಜರ ಗ್ರಂಥಗಳನ್ನು ಅಧ್ಯಯನ ಮಾಡಿ, ಮಹಾಪಂಡಿತರಾದರು.ವಾದಿರಾಜರ ಮೂಲ ವೃಂದಾವನದಿಂದ ಹೊರಹೊಮ್ಮುವ ವಾಣಿಯಿಂದಲೇ ಅಪಾರ ಜ್ಞಾನ, ಸಂಪತ್ತು ಪಡೆದ ಮಹಿಮಾನ್ವಿತರು. ಕೃಷ್ಣಾಪುರ ಮಠದ ಯತಿಗಳಾದ ವಿದ್ಯಾಧೀಶತೀರ್ಥರಲ್ಲಿ ವ್ಯಾಸಂಗ ಮಾಡಿ ವಿಶ್ವಪ್ರಿಯ ತೀರ್ಥರು (ವೃಂದಾವನಾ ಚಾರ್ಯರು) ಜಗದ್ವಿಖ್ಯಾತ ಪಂಡಿತರೆನಿಸಿದರು.

ಶ್ರೀವಿಶ್ವಪ್ರಿಯತೀರ್ಥರು ತೀರ್ಥಾಟನೆಯ ಸಮಯದಲ್ಲಿ ಮೇನೆ, ಪಲ್ಲಕ್ಕಿಯಲ್ಲಿ ಕುಳಿತುಕೊಳ್ಳದೇ ಕಾಲ್ನಡಿಗೆಯಲ್ಲಿ ಸಂಚಾರ ಮಾಡುತ್ತಿದ್ದುದು ವಿಶೇಷ !! ದೇವರ ಪೆಟ್ಟಿಗೆ ತಮ್ಮ ತಲೆಯ ಮೇಲೆ ಹೊತ್ತುಕೊಂಡು ಮಿತ ಶಿಷ್ಯ ಪರಿವಾರದೊಂದಿಗೆ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿ ಅಲ್ಲಿನ ಭಕ್ತ ಜನರಿಗೆ ಮಧ್ವಶಾಸ್ತ್ರ ಉಪದೇಶಿಸಿ, ಅನುಗ್ರಹಿಸುತ್ತಿದ್ದರು. ಶ್ರೀಭೂತರಾಜರು ತಮ್ಮ ಅದೃಶ್ಯ ರೂಪದಿಂದ ವಿಶ್ವಪ್ರಿಯರನ್ನು ರಕ್ಷಣೆ ಮಾಡುತ್ತಿದ್ದರೆಂದು ಪ್ರತೀತಿಯಿದೆ.

ಒಮ್ಮೆ ಕುದುರೆಯೊಂದಿಗೆ ಧನಿಕನು ಸೋದೆಗೆ ಬಂದು ತನ್ನ ಕುದುರೆಯನ್ನು ಶ್ರೀವಾದಿರಾಜರ ಬೃಂದಾವನ ಹತ್ತಿರ ಕಟ್ಟಲು ಉದ್ಯುಕ್ತನಾದನು. ಅಲ್ಲಿನ ಜನರು ಕಟ್ಟಬೇಡವೆಂದು ಹೇಳಿದರೂ, ಅವರ ಮಾತಿಗೆ ಗಮನ ಕೊಡಲಿಲ್ಲ. ಮರುದಿನ ಆತನು ತನ್ನ ಕುದುರೆ ನೋಡಲು ಬಂದಾಗ,ಕುದರೆ ಕಾಣಿ ಸಲಿಲ್ಲ!!! ಸುತ್ತಲೂ ಹುಡುಕಾಡಿದಾಗ, ಬಹುದೂರದ ಸಂಪಿಗೆ ಮರಕ್ಕೆ ಕುದುರೆಯನ್ನು ಕಟ್ಟಿದ್ದು ನೋಡಿ, ವಿಸ್ಮಿತನಾದ. ಶ್ರೀವಿಶ್ವ ಪ್ರಿಯರಲ್ಲಿ ಒಂದು ವಿಚಾರಿಸಿದಾಗ, ಗುರುಗಳಾದ ಶ್ರೀವಿಶ್ವಪ್ರಿಯ ತೀರ್ಥರು ಮಂದ ಹಾಸದಿಂದ ಸೇವಕನನ್ನು ಕಳುಹಿಸಿ, ಆ ಕುದುರೆಯನ್ನು ತರಿಸಿಕೊಟ್ಟರು. ಸಂತಸದಿಂದ ಆ ಧನಿಕನು ಒಂದು ಭಾರ ತೂಕದ ಚಿನ್ನವನ್ನು ಗುರುರಾಜರಿಗೆ ಅರ್ಪಿಸಿ, ಕೃತಾರ್ಥ ನಾದನು. ಅನೇಕ ಮಹಿಮೆಗಳನ್ನು ಪ್ರದರ್ಶಿಸಿ ಭಕ್ತರನ್ನು ಉದ್ಧರಿಸಿದ ವೃಂದಾವನಾಚಾರ್ಯರು ಮಹಿಮಾ ಪುರುಷರು.

ಶ್ರೀವೇದನಿಧಿತೀರ್ಥರು ಸ್ವಾಪ್ನವೃಂದಾವನಾಖ್ಯಾನಕ್ಕೆ ಲೇಖನ ಬರೆಯಿಸುವುದರ ಮೂಲಕ, ಅದರ ಶ್ರೀಕಾರರಾದರೆ, ವೃಂದಾ ವನಾಚಾರ್ಯರು ಅದರ ಪ್ರಸಿದ್ಧಿಯ ಹರಿಕಾರರಾದರು. ಶಿಷ್ಯ ರಿಂದ ಅಖ್ಯಾನಕ್ಕೆ ವಾಖ್ಯಾನ ಪ್ರಮಾಣ ಸಮರ್ಥಕ ಕೃತಿಗಳನ್ನು ಬರೆಯಿಸಿ, ಅನೇಕರಿಗೆ ಅನುಗ್ರಹಿಸಿದರು. ವಿಶ್ವಪ್ರಿಯ ತೀರ್ಥರು ಸತತ ನೀರನ್ನತ್ವ ವ್ರತ ಮಾಡಿ ಮತ್ತು ಮಧ್ಯತಾಲ ಮಠದಿಂದ ಶ್ರೀವ್ಯಾಸಮುಷ್ಠಿ ತಂದು ಶ್ರೀಕೃಷ್ಣನ ಸನ್ನಿಧಿಯಲ್ಲಿ ಪೂಜಿಸಿದ್ದು ಮತ್ತು ಸ್ವಾಪ್ನ ವೃಂದಾವನಾಖ್ಯಾನಕ್ಕೆ ಪ್ರಕರಣ ಮುಂತಾದ ವುಗಳನ್ನು ರಚಿಸಿ ಪ್ರಸಿದ್ಧಿಯಾದರು.

ವೃಂದಾವನಾಚಾರ್ಯರು ಕೊಚ್ಚಿ ರಾಜರಿಂದ, ಮೈಸೂರು ಮಹಾರಾಜರಿಂದ ಸನ್ಮಾನಿತರಾಗಿದ್ದು ವಿಶೇಷ. ಉಡುಪಿ ಶ್ರೀ ಕೃಷ್ಣ ನಿಗೆ ಇವರ ಸಮಯದಲ್ಲಿ ಅನೇಕ ಅಲಂಕಾರಗಳು, ದಾನಗಳು ಸಮರ್ಪಣೆಯಾಗಿವೆ. ಉಡುಪಿಯಲ್ಲಿ ಶ್ರೀಕೃಷ್ಣನ ಪೂಜೆಯನ್ನು ನಾಲ್ಕು ಪರ್ಯಾಯ ಮೂಲಕ ಬಹು ವೈಭವದಿಂದ ನೆರವೇರಿಸಿ, ಧನ್ಯರಾದರು. (ಕ್ರಿ.ಶ. 1804 -1805 , 1820 -1821, 1836-1837,1852-1853) ಶ್ರೀಗಳವರ ವೈರಾಗ್ಯ ಅಸಾಧಾ ರಣವಾಗಿತ್ತು! ಪರ್ಯಾಯ ಸಭೆಯಲ್ಲೂ ಕೇವಲ ಕೌಪೀನಧಾ ರಿಗಳಾಗಿದ್ದರು. ಇವರ ಬಗ್ಗೆ ಕೊಚ್ಚಿ ರಂಗಪ್ಪಾಚಾರ್ಯರಿಂದ ಶ್ರೀ ವಿಶ್ವಪ್ರಿಯ ವಿಲಾಸ ಪ್ರಬಂಧ, ಸೇತು ಮಾಧವ ಸೂರಿಗಳಿಂದ ಶ್ರೀ ವಿಶ್ವಪ್ರಿಯ ಮಹಾತ್ಮ ಸಹ ಕನ್ನಡ ಕೃತಿ ಉಪಲಬ್ಧವಿದೆ. ಇತರ ಸ್ತೋತ್ರ ಪದಗಳು ವೃಂದಾವನಾಚಾರ್ಯರನ್ನು ಹಾಡಿ ಕೊಂಡಾ ಡಿದ್ದು ಉಪಲಬ್ಧ ಸ್ತೋತ್ರಗಳಾಗಿವೆ.

ಆಷಾಢ ಬಹುಳ ಅಮಾವಾಸ್ಯೆ. 1865 ರಲ್ಲಿ ಉಡುಪಿಯಲ್ಲಿ ಶ್ರೀವಾಗೀಶತೀರ್ಥರ ಬೃಂದಾವನದ ಹತ್ತಿರ ವಿಶ್ವಪ್ರಿಯ ತೀರ್ಥರು ಬೃಂದಾವನಸ್ಥರಾದರು. ಉಡುಪಿಯಲ್ಲಿ ಮತ್ತು ಸೋದೆಯಲ್ಲಿ ಇವರ ಆರಾಧನೆ ಭಕ್ತರಿಂದ ನೆರವೇರಿಸಲ್ಪಡುತ್ತದೆ.



## ಅನ್ನ ದಾನಾತ್ ಪರಂ ನಾಸ್ತಿ

ವಾರಿದಃ ತೃಪ್ತಿ ಸಮಾಪ್ನೋತಿ । ಸುಖಮಕ್ಷಯ್ಯಯನ್ನದಃ ॥

ಮಧ್ಯ ಕಾಲೀನ ಜಗತ್ತಿನ ಶ್ರೇಷ್ಠ ನಿಬಂಧಕಾರ ಹೇಮಾದ್ರಿ ಪಂಡಿತ ತನ್ನ "ಚತುರ್ವರ್ಗ ಚಿಂತಾಮಣಿ"ಯ ದಾನಕಾಂಡದ ನಾಲ್ಕ ನೆಯ ಅಧ್ಯಾಯದಲ್ಲಿ ದಾನದ ಫಲಗಳನ್ನು ಶ್ರುತಿಸ್ಮೃತಿಗಳ ಆಧಾರಗಳಲ್ಲಿ ವಿವರಿಸುತ್ತ ಹೇಳುವ ಮಾತು - ನೀರನ್ನು ದಾನ ಮಾಡಿದರೆ ತೃಪ್ತಿ ದೊರೆಯುತ್ತದೆ. ಅನ್ನದಾನ ಮಾಡಿದರೆ ಅಕ್ಷಯವಾದ ಸುಖ ದೊರೆಯುವುದು. ಗೀತೆಯಲ್ಲಿ ಶ್ರೀಕೃಷ್ಣ ಇವೆರಡರ ನಡುವಣ ಸಂಬಂಧವನ್ನೂ ಜೀವರೊಡನೆ ಇವೆರಡಕ್ಕೂ ಇರುವ ಸಂಬಂಧ ವನ್ನೂ ಇನ್ನೂ ಸ್ಪಷ್ಟವಾಗಿ ತಿಳಿಯಪಡಿಸಿದ್ದಾನೆ -

ಅನ್ನಾದ್ಭವಂತಿ ಭೂತಾನಿ । ಪರ್ಜನ್ಯಾ ದನ್ನ ಸಂಭವಃ ॥

ಜೀವಿಗಳೆಲ್ಲವೂ ಅನ್ನದಿಂದ ಆಗುತ್ತವೆ. ಅನ್ನವು ನೀರಿನಿಂದ ಉತ್ಪನ್ನವಾಗುತ್ತದೆ. ಕಾಲಗತಿಯಲ್ಲಿ ಬಹಳ ಮುಂದೆ ಬಂದಿದ್ದೇವೆ. ಪರ್ಜನ್ಯದಿಂದ ಸಹಜವಾಗಿ ಉಂಟಾಗತಕ್ಕ ಆಹಾರವನ್ನು ವರ್ಜಿಸಿ, ನೀರನ್ನು ಬಳಸಿ ಮನುಷ್ಯ ಪ್ರಯತ್ನವನ್ನೂ ಹಾಕಿ ಅನ್ನವನ್ನು ಉತ್ಪಾದಿಸುತ್ತಿದ್ದೇವೆ. ಇಂತಲ್ಲಿಯೇ ದಾನದ ಪ್ರಾಧಾನ್ಯ ಉಂಟಾಗುತ್ತದೆ. ಅನ್ನ ನೀರಿನಷ್ಟು ಉಚಿತ - ಫ್ರೀ - ಅಲ್ಲ. ಆದ್ದರಿಂದಲೇ ಅದನ್ನು ಇತ ರರಿಗೆ ನೀಡಿ ತಾವು ಉಣ್ಣಬೇಕು. ಅಲ್ಲಿಯೂ ಮೂಲ ಸೂತ್ರ ಭಗವ ದ್ಗೀತೆಯದೇ -

ಭುಂಜತೇ ತ್ವೇ ತ್ವಘಂ ಪಾಪಾಯೇ ಪಚಂತ್ಯಾತ್ಮ ಕಾರಣಾತ್

ಯಾವ ಪಾಪಿಗಳು ತಮಗಾಗಿ ಮಾತ್ರವೇ (ತಮ್ಮ ಶರೀರ ಪೋಷಣೆಗೆ ಮಾತ್ರವೇ) ಅಡಿಗೆ ಮಾಡಿಕೊಳ್ಳುವರೋ ಅವರು ಪಾಪ ವನ್ನೇ ಉಣ್ಣುತ್ತಾರೆ (ದೋಷ ಭಾಗಿಗಳಾಗುತ್ತಾರೆ)

ಈಶಾವಾಸ್ಯದ ಮೊದಲ ಮಂತ್ರವೂ ಇಂತಹ ಉದಾತ್ತ ಅಭಿ ಪ್ರಾಯವನ್ನೇ ವಿವರಿಸುವಂತಹದ್ದು. ಪೂರ್ತಿ ಮಂತ್ರ ಇಲ್ಲಿ ಉದ್ದಿಷ್ಟವೇ.

ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾಃ ಮಾಗೃಧಃ ಕಸ್ಯ ಸ್ವಿದ್ಧನಂ

- ಈ ಜಗವೆಲ್ಲ ಈಶನಿಂದ ಆವರಿಸಲ್ಪಟ್ಟಿದೆ. ಚಲಿಸುವ ಪ್ರತಿ ಅಣುವಿನಲ್ಲಿಯೂ ಆತ ಅಂತರ್ಯಾಮಿ. ಆತ ಕೊಟ್ಟದ್ದನ್ನು (ನಿನಗೆ ಬಿಟ್ಟದ್ದನ್ನು) ಸ್ವೀಕರಿಸು. ದುರಾಸೆಯನ್ನು ಬಿಡು. ಧನವು ಯಾರದೂ ಅಲ್ಲ.)

ಸ್ವಾಮಿ ದರ್ಶನಕ್ಕೆಂದು ತಿರುಮಲೆಗೆ ಬರುವ ಯಾತ್ರಿಕರಿಗೆ ಕ್ಷುದ್ಬಾಧೆಯನ್ನು ತಪ್ಪಿಸಲು ದಾನಿಗಳ ಮುಕ್ತ ಹಸ್ತದ ನೆರವಿನಿಂದ ಅನ್ನದಾನ ಯೋಜನೆಯಲ್ಲಿ ಮತ್ತೊಂದು ಮಹತ್ವದ ಮೆಟ್ಟಿಲನ್ನು ಪರಿಕಲ್ಪಿಸಿದೆ. ತಿರುಮಲೆಯಲ್ಲಿ ಒಂದೇ ಬಾರಿಗೆ ಸಾವಿರ ಮಂದಿ ಊಟ ಮಾಡಲು ಅವಕಾಶವಾಗುವ ನಾಲ್ಕು ಕೋಣೆಗಳ ನೂತನ ಭೋಜನಾಲಯವನ್ನು ನಿರ್ಮಿಸಿ ಉದ್ಘಾಟಿಸಲಾಗಿದೆ. ಇಲ್ಲಿನ ಪಾಕ ಶಾಲೆ ಏಷ್ಯಾಖಂಡದಲ್ಲಿಯೇ ಅತಿ ದೊಡ್ಡ ಪಾಕಶಾಲೆಯೆಂಬ ಘನತೆ ಯನ್ನು ಪಡೆದಿದೆ. "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆವ ಧನ್ಯಭಾವ"- ತಿ.ತಿ.ದೇವಸ್ಥಾನಗಳಿಗೆ - ದಾನಿಗಳ ದಾನಕ್ಕೆ ಭಕ್ತರ ಸತ್‌ಪಾತ್ರವನ್ನು ಕಲ್ಪಿಸಿ - ಸರ್ವತ್ರ ಸಮತಾ ಭಾವವನ್ನು ಹರಡು ವಂತಾಗಿದೆ.

# ಶ್ರೀ ಜಯತೀರ್ಥರ ಹಿರಿಮೆ - ಸಂದೇಶ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

ಭಾರತೀಯ ದಾರ್ಶನಿಕ ಜಗತ್ತಿನ ಆಗಸದಲ್ಲಿ ಮಿನುಗುವ ತಾರೆಗಳು ಹಲವಾರು, ಕಪಿಲ,ಗೌತಮ, ಕಣಾದ, ಶಂಕರ, ರಾಮಾನುಜ, ಕುಮಾರಿಲಭಟ್ಟ, ಪ್ರಭಾಕರ, ಉದಯನಾಚಾರ್ಯ-ಮೊದಲಾದವರು ವಿಭಿನ್ನ ದಾರ್ಶನಿಕ ಸಂಪ್ರದಾಯಗಳ ಪ್ರವರ್ತಕಾಚಾರ್ಯರೆನಿಸಿದರೆ, ಪ್ರಶಸ್ತ ಪಾದ, ವಾತ್ಸಾಯನ, ವಾಚಸ್ಪತಿಮಿತ್ರ,ಚಿತ್ಸುಖಾಚಾರ್ಯ, ಸುದರ್ಶನಸೂರಿ - ಮೊದಲಾದವರು ವಿಭಿನ್ನ ದರ್ಶನ ಪದ್ಧತಿಗಳ ವ್ಯಾಖ್ಯಾಕಾರರೆನಿಸಿ ಆಯಾಯ ದರ್ಶನಗಳ ಅಪೂರ್ವತೆಯನ್ನು ನೆಲೆಯೂರುವಂತೆ ಮಾಡಿದವರು.

ಇಂತಹ ದಾರ್ಶನಿಕ ಸಂಪ್ರದಾಯ ಪ್ರವರ್ತಕಾಚಾರ್ಯರಲ್ಲಿ ಶ್ರೀಮಧ್ವರು ಪ್ರಮುಖರಾಗಿ ಬೆಳಗುವ ಸೂರ್ಯನಂತಿದ್ದಾರೆ. ಅಂತೆಯೇ ದಾರ್ಶನಿಕ ವ್ಯಾಖ್ಯಾಕಾರರ ಮಧ್ಯೆ ಪ್ರಜ್ವಲಿಸುವ ತಾರೆ ಶ್ರೀಜಯತೀರ್ಥರು. ಶ್ರೀಮಧ್ವದರ್ಶನದ ಸೂಕ್ಷ್ಮಾತಿ ಸೂಕ್ಷ್ಮ ಪ್ರಮೇಯಗಳನ್ನು ಎಳೆ ಎಳೆಯಾಗಿ ಬಿಡಿಸಿ ಪ್ರತಿವಾದಿಗಳು ಅವುಗಳ (ಅನುಭವ- ತರ್ಕ- ಶ್ರುತಿಗಳ ಸುಭದ್ರ ನೆಲೆಗಟ್ಟಿನಲ್ಲಿ) ಸಮಂಜಸತೆಯನ್ನು ಸ್ವತಃ ಒಪ್ಪುವಂತೆ ಮಾಡುವ ಅದ್ಭುತ ಕೌಶಲ ಶ್ರೀಜಯತೀರ್ಥರದು. ಅನುಭವ-ತರ್ಕ, ಶ್ರುತಿ ಸುಭದ್ರ ನೆಲೆ ಗಟ್ಟಾದ ಶ್ರೀಮಧ್ವದರ್ಶನವನ್ನು ಎಂದೆಂದೂ ಅಲ್ಲಾಡದಂತೆ ನಿಲ್ಲಿಸಿದ ವಿಶಿಷ್ಟ ಕೀರ್ತಿ ಅವರಿಗೆ ಸೇರಿದ್ದು.

ಅತಿ ಸರಳವೆಂದು ತೋರುವ ಶ್ರೀಮಧ್ವರ ವಾಕ್ಯಗಳಿಗೆ ಅರ್ಥ ಗಾಂಭೀರ್ಯವನ್ನೂ,ವಿವಿಧ ರೀತಿಯ ವಿಶಿಷ್ಟ ವ್ಯಾಖ್ಯಾನವನ್ನೂ ನೀಡಿ ಅವುಗಳ ಮಹತ್ವವನ್ನು ಎತ್ತಿ ತೋರಿದ ಶ್ರೀಜಯತೀರ್ಥರ ವ್ಯಾಖ್ಯಾನ ಕುಶಲತೆಯು ಅನುಪಮ,ಅದ್ಭುತ, ಆದ್ದರಿಂದಲೇ ಅವರಿಗೆ ಟೀಕಾಕೃತ್ಪಾದರೆಂಬ ಹೆಸರು ಅನ್ವರ್ಥ.

ಶ್ರೀಜಯತೀರ್ಥರ ವ್ಯಾಖ್ಯೆಗಳಿಗೆ ಟಿಪ್ಪಣಿಗಳನ್ನು ರಚಿಸಿದ ಶ್ರೀವ್ಯಾಸರಾಜರು, ಶ್ರೀರಾಘವೇಂದ್ರಸ್ವಾಮಿಗಳೇ ಮೊದಲಾದವರು ಶ್ರೀಜಯತೀರ್ಥರನ್ನು ಸರ್ವಜ್ಞ ಕಲ್ಪರೆಂದು ಕರೆದರು. ಶ್ರೀಮಧ್ವರು ಸರ್ವಜ್ಞರು. ಅವರ ಜ್ಞಾನ ಮೇರು ಸದೃಶ. ಅದನ್ನು ಹೋಲುವ ಮತ್ತು ಅದರ ಸನಿಹಕ್ಕೆ ಬರುವ ಅಪಾರಜ್ಞಾನವನ್ನು ಪಡೆದವರು ಸರ್ವಜ್ಞಕಲ್ಪರು.

ನದಿಯ ಪ್ರವಾಹವನ್ನು ಮೀರಿದ ಚೈತನ್ಯಪೂರ್ಣ ವಾಗ್ಗಂಗೆ ಶ್ರೀಜಯತೀರ್ಥರ ಮಾತುಗಳು, ನದಿಗೆ ಅಡೆತಡೆಯ ತರಂಗಗಳಿರುವುದುಂಟು. ಜಯತೀರ್ಥರ ಮಾತಿಗೆ ತಡೆಯೇ ಇಲ್ಲ. ಅದೊಂದು ಚೇತೋಹಾರಿ ಅನಂತ ಪ್ರವಾಹ, ಸಿದ್ಧಾಂತ, ಪ್ರಮಾಣಗಳ ಅವ್ಯಾಹತ ತೀರ್ಥಧಾರೆ.

ಶ್ರೀಜಯತೀರ್ಥರು ತಮ್ಮ ಪ್ರೌಢ - ಲಲಿತ ಶಾಸ್ತ್ರೀಯ ಶೈಲಿಯಿಂದ ಜಟಿಲವಾದ ಆಧ್ಯಾತ್ಮಿಕ ಸಮಸ್ಯೆ-ಪ್ರಮೇಯೆಗಳನ್ನು ಎಳೆಎಳೆಯಾಗಿ ಬಿಡಿಸಿ, ಜ್ಞಾನದ ಅಮೃತ ರಸಧಾರೆಯನ್ನು ಹರಿಸಿ, ಇಹ ಜಗತ್ತಿಗೆ ಅದರ ಪಾನ ಮಾಡಿಸಿದ್ದಾರೆ. ಸುಧಾಗ್ರಂಥವಂತೂ ಗಂಗಾ ಪ್ರವಾಹದಂತೆ ಭವ್ಯವಾಗಿ,ಆಕರ್ಷಿತವಾಗಿ, ಚೇತೋಹಾರಿಯಾಗಿ ಹರಿದಿದೆ.

ಶ್ರೀಮಜ್ಜಯತೀರ್ಥರವಾಣಿ ಕಾಮಧೇನು, ಕಲ್ಪತರುವಿನಂತೆ ಬೇಡಿದ ಇಷ್ಟಾರ್ಥಗಳನ್ನೆಲ್ಲ ನೆರವೇರಿಸುವಂತಹುದು.ದುಷ್ಟಕಾಮವೆಂಬ ಮನ್ಮಥನ ಬಾಣವನ್ನು ಮುರಿದು ವೈರಾಗ್ಯ ಯೋಗ್ಯರನ್ನಾಗಿ ಮಾಡುವಂತಹುದು.

ಶ್ರೀಮದಾಚಾರ್ಯರ ಅವತಾರಕ್ಕಿಂತ ಪ್ರಾಚೀನರಾದ ಶ್ರೀಹರ್ಷ ವಿದ್ಯಾಸಾಗರ, ವಾಚಸ್ಪತಿ, ಉದಯನ ಇವರೇ ಮೊದಲಾದ ನೂರಾರು ಗ್ರಂಥರಚನಕಾರರ ವಿಮರ್ಶೆಯನ್ನು ಟೀಕಾಕೃತ್ ಪಾದರು ಮಾಡಿದ್ದಾರೆ.ತಮ್ಮ ಕಾಲದವರೆಗೆ ಉಪಲಬ್ಧವಾದ ಎಲ್ಲ ಗ್ರಂಥಗಳನ್ನೂ ವಿಮರ್ಶೆ ಮಾಡಿರುವುದು ಶ್ರೀಟೀಕಾಚಾರ್ಯರ ವೈಶಿಷ್ಟ್ಯ.

ಋಗ್ವೇದದಲ್ಲಿ ವೃಷಾಯಮಾನ್ ಎಂಬ ಮಾತು ಬರುತ್ತದೆ.ದೇವೇಂದ್ರನಿಗೆ ವೃಷಭಾಕೃತಿ ಉಂಟು ಎನ್ನುತ್ತದೆ ವೇದವಾಕ್ಯ.ಅಂತೆಯೇ ತ್ರಿಯುಗಹೂತಿಯಾದ



ಪರಮಾತ್ಮನು ಧರ್ಮಸಂಸ್ಥಾಪನೆ ಮತ್ತು ಸಿದ್ಧಾಂತ ಸ್ಥಾಪನೆಗಾಗಿ ತನ್ನ ಪ್ರಥಮಾಂಗಭೂತರಾದ ವಾಯುದೇವರಿಗೆ ಆಜ್ಞಾಪಿಸಿದ ಬಳಿಕ ಶ್ರೀಮನ್ಮಧ್ವರು ಅವತರಿಸಿದರೆಂಬುದು ಪುರಾಣ ಪ್ರಾಮಾಣಿತ, ವಾಯುದೇವರ ಮುಖದಿಂದ ಭಗವತ್ತತ್ವಶ್ರವಣ ಕೇಳಲು ದೇವತೆ

ಗಳೇ ಭೂಮಿಗೆ ಬಂದಾಗ ಇಂದ್ರದೇವರು ಎತ್ತಿನ ರೂಪದಲ್ಲಿ ಆನಂದತೀರ್ಥರು ನಿತ್ಯ ಪಠಿಸುವ ಉದ್ಗ್ರಂಥಗಳನ್ನು ಹೊತ್ತರು ಮತ್ತು ಶ್ರವಣಾನಂದ ಪೂರ್ಣರಾದರು ಎಂದೇ ಪ್ರತೀತಿ.

**ಶ್ರೀಮದಾನಂದತೀರ್ಥರನ್ನು ಶಿಷ್ಯರು ಪ್ರಶ್ನಿಸಿದರಂತೆ:**

"ಶೇಷದೇವರಿಗೂ ಅಗಮ್ಯ ಎನ್ನಬಹುದಾದ ನಿಮ್ಮ ಗ್ರಂಥ ಸರ್ವಸ್ವದ ಮೂಲಾರ್ಥವನ್ನು ಮುಂದೆ ವಿಶ್ಲೇಷಿಸಿ ಬರೆಯವವರು ಯಾರು?" ಶ್ರೀ ಮದಾಚಾರ್ಯರು ಕೂಡಲೇ ಸಮೀಪದಲ್ಲಿಯೇ ಇದ್ದ ಎತ್ತನ್ನು ತೋರಿಸಿ ಈ ಎತ್ತು ವ್ಯಾಖ್ಯಾನಿಸುತ್ತದೆ ಎಂದು ಆದೇಶಿಸಿದರಂತೆ.

ಕಾಲಾನುಕ್ರಮದಲ್ಲಿ ದೇಶಪಾಂಡೆಯವರ ಘನರಾವುತ ಕೂಸಾದ ದೊಂಢು ನರಸಿಂಹನಿಗೆ ಶ್ರೀಮದಕ್ಷೋಭ್ಯ ತೀರ್ಥ ಶ್ರೀಪಾದರು 'ಕಿಂ ಪಶು ಪೂರ್ವದೇಹೇ' ಎಂದು ಪ್ರಶ್ನಿಸಿದಾಗ ಜ್ಞಾನ ಸ್ಮೃತಿ ಪಡೆದ ಯತಿಯಾಗಿ ಜಯತೀರ್ಥರು ರೂಪ ತಾಳಿದರಂತೆ. ವಿಂದ್ಯಾವಳಿ ಪರ್ವತ ತಪ್ಪಲಿನಲ್ಲಿ ಹನ್ನೆರಡು ವರುಷಗಳ ಕಠಿಣ ತಪಶ್ಚರ್ಯ ನಡೆಸಿ, ಸಕಲ ವೇದ ವಾಙ್ಮನೋನಿಯಾಮಕಳಾದ ದುರ್ಗದೇವಿಯ ಅನುಗ್ರಹಪಾತ್ರರಾದರು ಜಯತೀರ್ಥರು. ಸಂಕ್ಷಿಪ್ತವಾಗಿ ಇದು ಜಯತೀರ್ಥರ ಪೂರ್ವಾಶ್ರಮದ ಹಿನ್ನೆಲೆ.

**ಹರಿದಾಸರು ಕಂಡಂತೆ ಶ್ರೀಜಯತೀರ್ಥರು**

ಶ್ರೀಜಯತೀರ್ಥರನ್ನು ಕನ್ನಡನಾಡಿನ ಅನೇಕ ಮಂದಿ ಹರಿದಾಸರು ತಮ್ಮ ಕೃತಿಗಳಲ್ಲಿ ಹಾಡಿ ಹೊಗಳಿದ್ದಾರೆ.ಬೋಧಪ್ರದ ಮತ್ತು ಮಾರ್ಗಸೂಚಿಯಾದ ಶ್ರೀಜಯತೀರ್ಥರ ಪ್ರತಿಯೊಂದು ಕೃತಿಯೂ ಹರಿದಾಸರುಗಳಿಗೆ ಸ್ಫೂರ್ತಿಯ ಚಿಲುಮೆಯಾಗಿದೆ. ಶ್ರೀಬಾದರಾಯಣರು ಆಧ್ಯಾತ್ಮ ಜಗತ್ತಿನಲ್ಲಿ ಹೊರತೆಗೆದ ಜ್ಞಾನೈಶ್ವರ್ಯಕ್ಕೆ ಕುಂದಣಕಾರರಾದವರು ಜಯತೀರ್ಥರು.ಕಾಂತಿಯ ಜ್ಞಾನದೇಗುಲದ ಮಣಿದೀಪವಾದ ಜಯತೀರ್ಥರ ಕೃತಿಗಳು ಕನ್ನಡ ಹರಿದಾಸರುಗಳ ಚಿಂತನೆಗೆ ಪ್ರೇರಕಶಕ್ತಿ.

ಹರಿದಾಸ ಪಂಥ ಕನ್ನಡ ನಾಡಿನಲ್ಲಿ ಶ್ರೀಮಧ್ವಾಚಾರ್ಯದಿಂದ ಆರಂಭವಾಯಿತು. ಭಗವಂತನಲ್ಲಿ ಮಾಡುವ ಅನನ್ಯ ಶರಣಾಗತಿಭಾವವೇ ಭಕ್ತಿ ವಸ್ತುನಿಷ್ಠ ಯಥಾರ್ಥಜ್ಞಾನ ನಿರ್ಮಲ ಚಿತ್ತ, ಸದೃಢ ಪ್ರೇಮದಿಂದ ಆರಾಧಿಸುವವನೇ ಭಕ್ತ, ಶ್ರೀಹರಿ ಸದಾಕಾಲ ಭಕ್ತನನ್ನು ಉದ್ಧರಿಸುತ್ತಾನೆ. ಈದೃಷ್ಟಿಯಿಂದ ಶ್ರೀಮಧ್ವಾಚಾರ್ಯರು ಬರೆದ ದ್ವಾದಶಸ್ತೋತ್ರವನ್ನು ಭಕ್ತಿ ಪಂಥದ ಉಗಮಸ್ಥಾನ ಎಂದು ಹರಿದಾಸರುಗಳು ನಿರ್ಣಯಿಸಿ ಕೃತಿ ರಚಿಸಿರುವುದು ಯತಾರ್ಥವಾಗಿದೆ.

ಕನ್ನಡ ಹರಿದಾಸರುಗಳಿಗೆ ಶ್ರೀಜಯತೀರ್ಥರು ಜ್ಞಾನಸುಧೆ ಇದ್ದಂತೆ.ಟೀಕಾಕೃತ್ಪಾದರು, ಟೀಕಾಚಾರ್ಯ, ನ್ಯಾಯಸುಧಾಕಾರ, ಸರ್ವಜ್ಞಕಲ್ಪ - ಹೀಗೆ ಕನ್ನಡ ಹರಿದಾಸರು ಜಯತೀರ್ಥರ ತತ್ತ್ವಜ್ಞಾನ ಪ್ರಖ್ಯಾತಿಯನ್ನು ಮುಕ್ತಕಂಠದಲ್ಲಿ ಹೊಗಳಿ ಹಾಡಿದ್ದಾರೆ.ಭಾಗವತೋತ್ತಮ ದಾಸಶ್ರೇಷ್ಠರುಗಳು ಜಯತೀರ್ಥರನ್ನು - ವರ್ಣಿಸಿದ ರೀತಿ ಹೀಗಿದೆ.

"ಎದುರಾರೈ ಗುರುವೇ ಸಮರಾರೈ ಮದನಗೋಪಾಲ ಪ್ರಿಯ ಜಯರಾಯ" ಪರವಾದಿಗಳೆಂಬ ನರಿಗಳಿಗೆ ಸಿಂಹ ದೋಪಾದಿ ಗರ್ಜಿಸಿ ವಾದಿಸುವವರು, ಮಾಯವಾದದ ಕತ್ತಲೆ ಹರಿಸಿದ ಸೂರ್ಯರು ಸ್ವಮತರ ಹೃತ್ಸಂ ತಾಪ ಓಡಿಸಿ, ವಿಮತರ ಮುಖಕಮಲಗಳ ಬಾಡಿಸಿದ ಚಂದ್ರರು, ತತ್ತ್ವಬೋಧೆ ಎಂಬ ಹಾಲನ್ನು ಶಿಷ್ಯರೆಂಬ ಕರುಗಳಿಗೆ ಕುಡಿಸಿದ ಕಾಮಧೇನು. ಅಂದು ಸುಧೆ ಪಡೆದ ಇಂದ್ರನಂತೆ ಇಂದು ನ್ಯಾಯಸುಧೆ ಪಡೆದವರು. ವನಜನಾಭನ ಗುಣಮಣಿಗಳನ್ನು ತೋರಲು ಟೀಕಾಂಜನ ಹಚ್ಚಿದವರು. ಶ್ರೀಕೃಷ್ಣ ಪಾದಾಂಬಜಲೋಲರು ನಿಮಗೆ ಎದುರಾರೈ?

ನಮ್ಮ ದೇಶ ಸ್ವತಂತ್ರವಾದ ದಶಕದಲ್ಲಿ Energy is power ಎಂಬ ಮಾತು ಕೇಳಬರುತ್ತಿತ್ತು ಅನಂತರದ ದಶಕಗಳಲ್ಲಿ Education is power ಎಂದು ಕೇಳಿಬಂದು. Knowledge is power ಅಥವಾ Information is power ಎಂಬ ಮಾತು ವಿಶ್ವವಿದಿತವಾಗಿದೆ. ಹೇಗೆಂದರೆ 'ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ' ಎಂಬುದು ಗೀತಾ ಸಂದೇಶದ ಮಾತು.

ಜಗತ್ತಿನ ಲಕ್ಷಾವಧಿ ಜನರಿಗೆ, ಅನಾದಿ ಕಾಲದಿಂದ ವಿವಿಧ ಕ್ಷೇತ್ರಗಳಲ್ಲಿ ವಿಶಿಷ್ಟ ಪರಿಣತಿ ಹೊಂದಿದ ಕವಿಗಳಿಗೆ, ಪಂಡಿತರಿಗೆ, ಸಂಗೀತಗಾರರಿಗೆ, ವಾಗ್ಮಿಗಳಿಗೆ ಗೌರವ ಸಂದಿದೆ. ಅಂತೆಯೇ ಯುಕ್ತಿ ಮತ್ತು ತತ್ವಬದ್ಧ ಭಕ್ತಿ ನಿರೂಪಣೆಯ ವಿಮರ್ಶೆಗೆ ಒಬ್ಬ ವಿಮರ್ಶಕನಿಗೆ ಸಕಲ ಗೌರವ ಸಲ್ಲಬಹುದು ಎಂದು ಸಿದ್ಧವಾದದ್ದು ಪವಿತ್ರ ಕ್ಷೇತ್ರ ಯರಗೋಳದಲ್ಲಿರುವ ಶ್ರೀಮಜ್ಜಯತೀರ್ಥರಿಗೆ ಮತ್ತು ಅವರ ಶ್ರೀಮನ್ಯಾಯಸುಧಾ ಗ್ರಂಥಕ್ಕೆ ಟೀಕಾಚಾರ್ಯರೆಂಬ ಅನ್ವರ್ಥಕ ನಾಮವೇ ಇದೆಲ್ಲವನ್ನು ತಿಳಿಸುತ್ತದೆ. ಸಂಸ್ಕೃತಿ ತಿಳಿಯದ ಮತ್ತು ವೇದಾಂತ ಪರಿಜ್ಞಾನವಿಲ್ಲದೆ ನಮಗೆ ಅವರ ಬಗೆಗೆ ಅರಿವು ಹಾಗೂ ಶ್ರದ್ಧೆ ಬರಬೇಕಾದರೆ ಹೀಗೆ ಹೇಳಬಹುದು. ಇಂದಿನ Imagination, logic presentation, documentation & group discussion ಇವೆಲ್ಲವುಗಳ ಏಕಮೇವಾದ್ವಿತೀಯ ರೂಪವೇ ಶ್ರೀಮಜ್ಜಯತೀರ್ಥರು.

ಸಮಯ, ಸ್ಥಳ ಹಾಗೂ ಆದಾಯದ ಅಭಾವಗಳ ಮಧ್ಯದಲ್ಲಿ ಬದುಕುತ್ತಿರುವ ನಮಗೆ ಸಹಜವಾಗಿ ಸಂಸ್ಕಾರ, ಸತ್ಸಂಗಗಳ ಕೊರತೆ ಕಾಡುತ್ತಿದೆ. ಆದಾಗ್ಯೂ ನಾವುಗಳು ಆಗಾಗ ಸುಧಾ ಓದಿ ಪದಾ ಹೇಳು, ಕಿಂಪಶು ಪೂರ್ವ ದೇಹಿ, ಮಳಖೇಡ ವೃಂದಾವನ, ಕಾಗಿಣಾನದಿ, ಯರಗೋಳಗುಹೆ ಹೀಗೆಲ್ಲ ಕೇಳಿರಲು ಸಾಧ್ಯ.

ಎತ್ತಿನ ಅವತಾರ, ಪುಸ್ತಕ ಹೊರುವಿಕೆ,ಸರ್ಪರೂಪ - ಹೀಗೆ ಹಲವಾರು ಶಬ್ದಗಳು ಈಯತಿವರೇಣ್ಯರ ಸುತ್ತ ಆವರಿಸಿದೆ. ಇವರನ್ನು ಯತಿಕುಲರನ್ನ, ಭಯಕೃದ್ಭಯ ನಾಶನ ಸದ್ಗುಣ ಶೀಲ, ಸುಜನಪಾಲ ಎಂದು ದಾಸರು ಸುಳಾದಿಯಲ್ಲಿ ಕೊಂಡಾ

ಡಿದ್ದಾರೆ.ಒಟ್ಟಿನಲ್ಲಿ ದ್ವೈತ ವೇದಾಂತದ ಜ್ಞಾನನೇಗಿಲು ಎಂದು ದಾಸರು ಸುಳಾದಿಯಲ್ಲಿ ಕೊಂಡಾಡಿದ್ದಾರೆ.ಒಟ್ಟಿನಲ್ಲಿ ದ್ವೈತ ವೇದಾಂತದ ಜ್ಞಾನನೇಗಿಲು ಎಂದು ಹೇಳಲಾಗುವ ಶ್ರೀಜಯ ತೀರ್ಥರನ್ನು

ಸೃಷ್ಟಿಯೊಳಗೆ ಇವರ ದರ್ಶನವಾಗದಲೆ
ಸ್ಪಷ್ಟವಾದ ಜ್ಞಾನಪುಟ್ಟದಯ್ಯಾ

ಎಂದು ದಾಸರುಗಳು ವರ್ಣಿಸಿದ್ದಾರೆ. ಅಂತಹ ಜ್ಞಾನಿಯ ವೃಂದಾವನ ಮಳಖೇಡದಲ್ಲಿದ್ದು ಆಷಾಢ ಬಹುಳ ಪಂಚಮಿ ಆರಾಧನ ನಡೆಯುತ್ತದೆ.ಕಳೆದ ಆರು ಶತಮಾನಗಳಿಂದ ನಡೆ ಯುತ್ತಿರುವ ಈ ಉತ್ಸವದಲ್ಲಿ ವಿಜಯದಾಸರೇ ಮೊದಲಾಗಿ ನೂರಾರು ಹರಿದಾಸರು, ಸಹಸ್ರಾರು ಪಂಡಿತರು, ಲಕ್ಷಾವಧಿ ಸದ್ಭಕ್ತರು ಭಾಗವಹಿಸಿ ಜ್ಞಾನ, ವೈರಾಗ್ಯ ಪಡೆದ ಪವಾಡಗಳು ಇವೆ.

ಮೋಕ್ಷಕ್ಕೆ ಜಯ ಪತ್ರಿಕೆ ಕೊಡಿಸಿ ಪಕ್ಷಿವಾಹನ ಸಿರಿ ವಿಜಯವಿಠಲನ್ನ ಈಕ್ಷಿಸುವುದಕ್ಕೆ ಉಪದೇಶ ಕೊಡುವ ಋಷಿ ಎಂದು documentery evidence ಕೊಡುತ್ತಾರೆ. ಟೀಕಾ ಚಾರ್ಯರು ಭೇದಾರ್ಥ ಜ್ಞಾನ, ಪರಮ ಭಕ್ತಿಯಿಂದ ಆನಂದ ತೀರ್ಥರ ಗ್ರಂಥ ವಿಸ್ತಾರ ಮಾಡಿದ್ದು ಕರದ ಕನ್ನಡಿಯಂತೆ ಎಂಬು ದನ್ನು ಅಚ್ಚಗನ್ನಡದಲ್ಲಿ ಹೇಳುವುದು ದಾಸವಾಣಿಯ ವೈಶಿಷ್ಟ್ಯ ಆನಂದತೀರ್ಥರಿಗೆ ಮೋದತೀರ್ಥರು ಎಂದು ಹೇಳಿದ್ದಾರೆ.

ಇಂದು ಸ್ಪರ್ಧಾತ್ಮಕ ಜಗತ್ತಿನಲ್ಲಿ Stress, Strain Tension ದಿಂದ ದೂರವಿರಬೇಕಾಗಿದೆ. ಹೀಗಾಗಿ ಸಾಧನೆ, ಜಯ, ಸದ್ಗತಿ ಮತ್ತು ಸತ್ಸಂಗಕ್ಕಾಗಿ ಜಯತೀರ್ಥರ ಅಧ್ಯಯನ (ಕನ್ನಡ ದಾಸ ಸಾಹಿತ್ಯದಲ್ಲಿ) ದರ್ಶನ ಮತ್ತು ಪ್ರಸಾದ ಅಗತ್ಯ ಎನ್ನುವ ಮಾರ್ಗದರ್ಶಿಕೆ ಈ ಕೆಳಗಿನ ಪಲ್ಲವಿಯಾಗಿದೆ.

ಜ ಎಂದು ಹೊಗಳಲು ಜಯಶೀಲನಾಗುವ
ಯ ಎನ್ನೆ ಯಮರಾಯನಂಜುವನು
ತೀ ಎಂದು ಪೊಗಲು ತೀವ್ರ ಪದವಿಯುಂಟು
ರ್ಥ ಎಂದು ಪೊಗಳಲು ತಾಪತ್ರಯುಪಶಮನ

ಭಾಗವತ ಧರ್ಮವನ್ನು ವಿಶೇಷವಾಗಿ ಪ್ರಸಾರ ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಆಚಾರ್ಯರ ವಿಚಾರಗಳನ್ನು ಸಮರ್ಥಿಸಿ ಜನತೆಗೆ ತಿಳಿಸುವ ಸಮರ್ಥರು ಬೇಕಾಗಿದ್ದ ಕಾಲ ಆಗಿತ್ತು.ಅಂತೆಯೇ ಟೀಕಾ ಗ್ರಂಥಗಳ ಅನಿವಾರ್ಯತೆಯೂ ಇತ್ತು ಈ ಮಹತ್ತರವಾದ ಕಾರ್ಯವು ಸಾಮಾನ್ಯರಿಂದ ಸಾಧ್ಯವಲ್ಲದ ಕಾರಣ ಇದಕ್ಕೆ ದೈವೀ ಪುರುಷರೇ ಅವತರಿಸಿ ಬರಬೇಕಾದ ಸಂದರ್ಭವಿತ್ತು, ಆದ್ದರಿಂದ ಜ್ಞಾನ ಪ್ರಸಾರ ಮಾಡಲು ಜ್ಞಾನ ಪ್ರದಾಯಕರಾದ ಶೇಷದೇವರೇ ಜಯತೀರ್ಥರಾಗಿ ಅವ ತರಿಸಿದರು.

ಜಯ ಎಂದರೆ ಇಂದ್ರಿಯಗಳನ್ನು ಜಯಿಸಿದವರೂ, ತೀರ್ಥ ಎಂದರೆ ಜ್ಞಾನ ಸಂಪನ್ನರೂ ಎಂದು ಚಿಕ್ಕ ವಯಸ್ಸಿನಲ್ಲಿಯೇ ರಾಜದರ್ಬಾರಿನಲ್ಲಿದ್ದರೂ ಸಕಲ ವೈಭೋಗಗಳನ್ನೂ ತ್ಯಜಿಸಿ ವೈರಾಗ್ಯದಿಂದ ಸನ್ಯಾಸದೀಕ್ಷೆ ಪಡೆದವರು. ತ್ಯಾಗಿಗಳಾದ ನಂತರ ಜಯತೀರ್ಥರು ದುರ್ಗಾದೇವಿ ಮತ್ತು ಶ್ರೀಹರಿಯಿಂದ ಅನುಗ್ರಹಿಸಲ್ಪಟ್ಟು ಉತ್ತಮ ಗ್ರಂಥಗಳಿಗೆ ಅಪೂರ್ವ ವ್ಯಾಖ್ಯಾನ ರಚಿಸಿದರು. ಮುಂದೆ ಯರಗೊಳಕ್ಕೆ ಬಂದು ಏಕಾಂತ ಪರಿ ಸರದ ಗುಹೆಯಲ್ಲಿ ಪ್ರಾಣದೇವರನ್ನು ಸ್ಥಾಪಿಸಿ ಉಪಾಸನೆ ಮಾಡಿ ದರು. ಈ ಪರಿಸರದಲ್ಲಿಯೇ 18 ದಿವ್ಯ ಟೀಕೆಗಳನ್ನೂ ಮೂರು ಸ್ವತಂತ್ರ ಕೃತಿಗಳನ್ನೂ ರಚಿಸಿದರು. ತಮ್ಮ ತಪಃ ಶಕ್ತಿಯಿಂದ ಅನೇಕ ಮಹಿಮೆಗಳನ್ನು ಅಂದರೆ ಯರಗೊಳದ ಒಡ್ಡು ಒಡೆದ ಕೆರೆಯನ್ನು ನಿಲ್ಲಿಸಿದ ಹಾಗೂ ಇನ್ನಿತರ ಪವಾಡಗಳಿಂದ ಜನರ ಕಷ್ಟ ನಿವಾರಿಸಿದರು.

ಮುಂದೆ ಜಯತೀರ್ಥರು ಉತ್ತರ - ದಕ್ಷಿಣ ಭಾರತದ ಸಂಚಾರ ಕೈಗೊಂಡು ಅಹಮದಾಬಾದಿಗೆ ಬಂದು ಅಲ್ಲಿ ಆರು ತಿಂಗಳು ಬೌದ್ಧರ ಗ್ರಂಥಾಲಯದಲ್ಲಿ ಗ್ರಂಥಾವಲೋಕನ ಮಾಡಿದರು. ಬೌದ್ಧರ ಗೌರವಕ್ಕೆ ಪಾತ್ರರಾದರು. ಕಾಮದೇವ ಎಂಬ ಕುಲಪತಿಯು ಜಯತೀರ್ಥರ ಗೌರವಾರ್ಥ ಶಾಸನ ವೊಂದನ್ನು ಸ್ಥಾಪಿಸಿದ್ದಾನೆ."ನ ಭೂತೋ ನ ಭವಿಷ್ಯತಿ" ಎಂಬಂತೆ ಸಾಂಖ್ಯ, ಅದ್ವೈತ, ವಿಶಿಷ್ಟಾದ್ವೈತ, ಮೀಮಾಂಸ, ತರ್ಕ, ವ್ಯಾಕರಣ ಮೊದಲಾದ ಸಕಲ ಶಾಸ್ತ್ರಗಳಲ್ಲಿಯೂ ಪರಿಪೂರ್ಣ ಪಾಂಡಿತ್ಯವನ್ನು ಪಡೆದರು ಇವರು. ಇವರ ಕಾರ್ಯ ಕ್ಷೇತ್ರವನ್ನು ಮೂರು ವಿಧವಾಗಿ ಹೇಳಬಹುದು.1)22 ಗ್ರಂಥಗಳ ರಚನೆ,2) ವಾಕ್ಯಾರ್ಥ, ವಾದಿನಿಗ್ರಹ, ಗ್ರಂಥಾವಲೋಕನ, ಮಧ್ವಸಿದ್ಧಾಂತ ಪ್ರತಿಪಾದನೆ 3) ಸಿದ್ಧಾಂತ ಪ್ರಸಾರ, ವೈಷ್ಣವ ದೀಕ್ಷೆ, ಪ್ರಚಾರ ಶಿಷ್ಯರನ್ನು ಉದ್ಧರಿಸುವ ಕಾರ್ಯ,ಜ್ಞಾನ - ಭಕ್ತಿಯ ಪ್ರವಾಹ ನಿರಂತರವಾಗಿ ಜನ-ಮನಗಳಲ್ಲಿ ಹರಿಯುವಂತೆ ಮಾಡಿದ ಜ್ಞಾನಯಜ್ಞ. ಅದ್ಭುತ ಪ್ರತಿಭೆ, ಪ್ರಚಂಡ ಪಾಂಡಿತ್ಯ, ಚಿಂತನಶೈಲಿ, ಪ್ರೌಢಚಿಂತನೆ, ಖಚಿತ ನಿರೂಪಣೆ ಹಾಗೂ ತೂಕದ ವಿಶ್ಲೇಷಣೆ ಜಯತೀರ್ಥರ ವೈಶಿಷ್ಟ್ಯ.

ಶ್ರೀಜಯತೀರ್ಥರು ಬದುಕೇ ಅತಿದೊಡ್ಡ ಆಧ್ಯಾತ್ಮಿಕ ಸಂದೇಶ. ಅವರ ವ್ಯಕ್ತಿತ್ವವೇ ಎಲ್ಲರ ಬದುಕಿಗೆ ಆಧಾರ. ಇಂತಹ ಶ್ರೀಜಯ ತೀರ್ಥರ ಅನುಗ್ರಹದಿಂದ ಮಾನವನು ಸರ್ವಸ್ವವನ್ನೂ ಪಡೆಯ ಬಲ್ಲ. ಅಂತೆಯೇ ದಾಸ ಶ್ರೇಷ್ಠರಾದ ಶ್ರೀವಿಜಯದಾಸರು ಸಾರಿ ಭಜಿಸಿರೋ ಟೀಕಾರಾಯ ರಂಘ್ರಿಯಾ! ಘೋರ ಪಾರ ಕಾಂಬು ಧಿಯ ದೂರಮಾಳ್ಪರಾ ಎಂದು ಹಾಡಿ ಹೊಗಳಿದ್ದಾರೆ.

ಕೇವಲ 43 ವರ್ಷಗಳ ಆಯುಷ್ಯದಲ್ಲಿ ಮಹತ್ಕಾರ್ಯ ಸಾಧಿ ಸಿದ ದೈವಿಕ ಚೇತನರು ಇವರು. ಈ ಅತ್ಯಲ್ಪಕಾಲದಲ್ಲಿ ಇಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಏಕಾಂತದಲ್ಲಿ ಕುಳಿತು, ಜ್ಞಾನ ತಪ ಸ್ಸನ್ನು ಸಾಧಿಸಿ,ದ್ವೈತವಾಙ್ಮಯದ ಅತ್ಯುನ್ನತ ಶಿಖರವನ್ನೇರಿದ ದೇವಾಂಶ ಸಂಭೂತರು ಶ್ರೀಜಯತೀರ್ಥರು.



# त्रयोदशः पाठः
## ಹದಿನಾರನೇ ಪಾಠ

# ಸಂಸ್ಕೃತ ಕಲಿಯೋಣ...!!

ರಚನೆ:- ಮಹಾಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ:- ಮಹಾಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

युष्मत् = ತಂಬಿಗೆ        किन्तु = ಚೆನ್ನಾಗಿ        अस्मत् = ಮಂಚ

तर्हि; चेत् = ಸಾಕು(ಸ್ವಲ್ಪ)        ಮಾಡಿದ್ದಾರೆ. ಮಾಡುತ್ತೀಯೇ? ಮಾಡು ಮಾಡಿದ್ದೇನೆ/ಮಾಡುತ್ತೇವೆ (ಸಿದ್ಧ ಪಡಿಸುತ್ತೇನೆ)

### ಪ್ರಶ್ನೆ

1. तत्र किमर्थम् आसीः?
2. अहं तूष्णीम् आसम्।
3. तर्हि त्वं पाकं कुरु।
4. नोचेत् वयं करवाम।
5. चेत्किम्?
6. अस्मद्गृहे शाकानि न सन्ति।
7. ते कुत्र सन्ति वा खलु?
8. ते युष्मद्गृहे भोजनं कुर्वन्ति।
9. कुर्वन्ति चेत् कुर्वन्तु।
10. यूयं तूष्णीं स्त।

### ಉತ್ತರ

1. ಸಾಕು, ತಾವು ಬೇಗನೆ ಸ್ನಾನವನ್ನು ಮಾಡಿರಿ
2. ತಾವು ಸರೋವರದಲ್ಲಿ ಸ್ನಾನವನ್ನು ಮಾಡಬೇಡಿ
3. ನಮ್ಮ ಮನೆಯಲ್ಲಿ ನೀರು ಇದೆ. ಅಲ್ಲಿ ಸ್ನಾನ ಮಾಡಿರಿ.
4. ತಮ್ಮ ಮನೆ ಎಲ್ಲಿದೆ?
5. ನಮ್ಮ ಮನೆಗಳು ಅಲ್ಲಿ ಇವೆ.
6. ನೀವು ಬೇಗನೆ ಭೋಜನವನ್ನು ಮಾಡಿರಿ.
7. ನಾನು ಇದುವರೆಗೂ ಮಾಡಿಲ್ಲ
8. ಆಮೇಲೆ ಮಾಡುತ್ತೇನೆ.
9. ಅಲ್ಲಿ ಎಷ್ಟು ಬಾಲಕರು ಭೋಜನವನ್ನು ಮಾಡಿದ್ದಾರೆ.
10. ಅಲ್ಲಿ ಯಾರೊಬ್ಬರು ಭೋಜನವನ್ನು (ಊಟವನ್ನು) ಮಾಡಿಲ್ಲ.

### ಪ್ರಶ್ನೆ

1. ಬಾಲಕರು ಮಂಚದ ಮೇಲೆ ಇದ್ದಾರೋ?
2. ತಂಬಿಗೆಯಲ್ಲಿ ನೀರು ಇದೆಯೋ?
3. ನೀರು ಚೆನ್ನಾಗಿಲ್ಲ
4. ಇದು ನಮ್ಮ ಮಂಚ
5. ತಮ್ಮ ತಂಬಿಗೆಗಳು ಎಲ್ಲಿ ಇವೆ?
6. ತಾವು ಅಡುಗೆಯನ್ನು ಬೇಗನೆ ಮಾಡುತ್ತೀರಿ.
7. ಇಂದಿನ ಅಡುಗೆಯನ್ನು ಯಾರು ಮಾಡುತ್ತಾರೆ?
8. ನೀನು ಪಲ್ಯೆಯನ್ನು ಸಿದ್ಧಪಡಿಸು, ನಾನು ಅಡುಗೆಯನ್ನು ಮಾಡುತ್ತೇನೆ?
9. ನೀನು ಒಂದೇ ಒಂದು ಪಲ್ಯೆಯನ್ನು ಯಾಕೆ ಮಾಡಿದ್ದೀಯಾ?
10. ನಾನೊಬ್ಬನೆ ಅಡುಗೆಯನ್ನು ಹಾಗೂ ಪಲ್ಯೆಯನ್ನು ಚೆನ್ನಾಗಿ ಸಿದ್ಧಪಡಿಸುತ್ತೇನೆ.(ಮಾಡುತ್ತೇನೆ)

### ಉತ್ತರ

1. युष्मद्गृहे के सन्ति?
2. अस्मद्गृहे सर्वे बालकाः स्नानं कुर्वन्ति।
3. ते पाकं कुर्वन्तु।
4. अहं पाकम् अकरवम्।
5. अहो! यूयं तत्र तूष्णीम् आस्त किम्?
6. किञ्चित् पाकं कुरुत।
7. अहम् आदौ अनेकधा अकरवम्।
8. किन्तु ते अस्मद्गृहे न सन्ति।
9. यूयम् इदानीं स्नानं न कुरुत।
10. आदौ वयं स्नानं करवाम।



# ರಾಶಿ ಫಲಗಳು



ಮೂಲ- ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್

**ಮೇಷ**

ದೂರ ಪ್ರಯಾಣಗಳು ಕೂಡಿ ಬರುತ್ತವೆ. ಗೃಹವಾತಾವರಣವು ಅನುಕೂಲಕರವಾಗಿರುತ್ತದೆ. ಆರೋಗ್ಯವು , ಪುತ್ರರ ಕಾರಣ ಉತ್ತಮವಾಗಿರುತ್ತದೆ.ದೇಹದಲ್ಲಿನ ಸಮಸ್ಯೆಗಳು ತೊಲಗಿ ಆರೋಗ್ಯ ಮೈದೋರುವುದು. ಧೈರ್ಯ ಆತ್ಮಸ್ಥೈರ್ಯ, ಆಚರಣೆ , ವಿಜಯ ಇವು ಕೈಗೊಡುತ್ತವೆ. ಮುಖ್ಯವಾದ ಕಾರ್ಯಗಳನ್ನು ಪ್ರಾರಂಭಿಸುವ ಮೊದಲು ಕುಟುಂಬ ಸದಸ್ಯರೊಂದಿಗೆ ಚರ್ಚಿಸುವುದು ಅಗತ್ಯ.

**ವೃಷಭ**

ಧೈರ್ಯ, ಚಾಕುಚಕ್ಯತೆ , ಉತ್ಸಾಹದಿಂದ ಪರಿಸ್ಥಿತಿಗಳನ್ನು ಸರಿದೂಗಿಸುವ ನಿಮ್ಮ ಪ್ರಯತ್ನ ಫಲವೀಯುತ್ತದೆ. ವಾಕ್ಚಾತುರ್ಯವನ್ನು ಪ್ರದರ್ಶಿಸಿ ಕಾರ್ಯಜಯ ಪಡೆಯುತ್ತೀರಿ.ಗೃಹೋಪಯೋಗಿ ವಸ್ತುಗಳನ್ನು ಖರೀದಿಸುವುದು ನೂತನ ಯೋಜನೆಗಳನ್ನು ರೂಪು ರೇಷೆಗೊಳಿಸುವಿರಿ.ದೂರ ಪ್ರದೇಶದಲ್ಲಿರುವ ಭೂಮಿ ಖರೀದಿ - ಮಾರಾಟ ಒದಗಿ ಬರುತ್ತದೆ. ಕುಟುಂಬದ ಜವಾಬ್ದಾರಿ ಯೊಡನೆ ಎಲ್ಲಾ ರಂಗಗಳಲ್ಲಿಯೂ ವಿಜಯವನ್ನು ಸಾಧಿಸಲಿದ್ದೀರಿ.

**ಮಿಥುನ**

ಜನ್ಮರಾಶಿಯಲ್ಲಿ ರವಿ ಸಂಚಾರದಿಂದಾಗಿ ಸ್ವಲ್ಪ ಕೋಪೋದ್ರೇಗಕ್ಕೆ ಗುರಿಯಾಗುತ್ತೀರಿ. ಮಧುಮೇಹ, ರಕ್ತದೊತ್ತಡ ಮುಂತಾದ ದೀರ್ಘಕಾಲಿಕ ವೇದನೆಗಳು ಬಾದಿಸುತ್ತದೆ. ಅಧಿಕಾರ ವಿಸ್ತರಣೆಯಾಗಲಿದೆ. ಪ್ರಯತ್ನಿಸಿದ ಕಾರ್ಯಸಿದ್ಧಿ. ಕೌಟುಂಬಿಕ ಸೌಖ್ಯ ಪ್ರಾಪ್ತಿ, ವ್ಯಾಪಾರ ಸ್ಥಗಿತಗೊಳ್ಳುವ ಅವಕಾಶವಿದೆ. ವೃತ್ತಿ ವಿಷಯಗಳು ಸಾಮಾನ್ಯ ರೀತಿಯಲ್ಲಿ ನಡೆಯುತ್ತವೆ. ಧನದ ವಿಚಾರದಲ್ಲಿ ಕೊರತೆಯಾಗಲಾರದು.

**ಕರ್ಕಾಟಕ**

ವಿದ್ಯಾರ್ಥಿಗಳಿಗೆ ಉನ್ನತ ವ್ಯಾಪಾರಕ್ಕಾಗಿ ಅವಕಾಶಗಳೊದಗಿ ಬರುವುವು. ಈ ರಾಶಿಯವರಿಗೆ ಅಧಿಕಾರ ವಿಸ್ತರಣೆ. ಉದ್ಯೋಗದಲ್ಲಿ ಉನ್ನತಿ, ವೃತ್ತಿ - ವ್ಯವಹಾರಗಳಲ್ಲಿ ಅನುಕೂಲ, ಆರೋಗ್ಯ ಐಶ್ವರ್ಯಗಳ ಹರಿವು, ಇತರನ್ನು ವಾಕ್ಚಾತುರ್ಯದಿಂದ ನೀರಿಳಿಸುವ ಸಾಹಸವುಂಟಾಗುವುದು.ಎಲ್ಲರಲ್ಲೂ ಮಿರಿ ಮಿರಿ ಮಿಂಚುವರಿ. ತಲೆನೋವು ಬಿಡದೆ ಬಾಧಿಸುವುದು.

**ಸಿಂಹ**

ಸಾಂಘಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ತಕ್ಕುದಾದ ಸಲಹೆ ಸೂಚನೆಗಳನ್ನು ನೀಡುವುದರಿಂದ ಗೌರವಾಭಿವೃದ್ಧಿ ಸಾಂಘಿಕ ಕಾರ್ಯಕ್ರಮಗಳಿಗಾಗಿ ಸ್ವಂತ ಧನವ್ಯಯಿಸಿಸುವುದು, ವ್ಯವಹಾರ ಜಯ, ಗ್ರಹಸ್ಥಿತಿ ಅನುಕೂಲಕರವಾಗಿ ಮಾರ್ಪಡುವುದು. ಭೂ-ಗೃಹ ಸ್ಥಿರಾಸ್ತಿಗಳು ವೃದ್ಧಿಯಾಗುವುದು.

**ಕನ್ಯ**

ಸೋದರ - ಸೋದರಿಯರೊಂದಿಗೆ ಮಾತಿನ ಚಕಿಮುಕಿ, ಧನ ವ್ಯಯ, ಮಿತ್ರರೊಡನೆ ಉಪಕಾರ - ಪ್ರತ್ಯುಪಕಾರಗಳು, ಬಗೆಹರಿಯದ ಸಮಸ್ಯೆಗಳೆಲ್ಲವೂ ಈ ತಿಂಗಳು ಬಗೆಹರಿಯಲಿವೆ. ಉನ್ನತ ವ್ಯಾಸಾಂಗ ಉದ್ಯೋಗಾವಕಾಶಗಳು, ವಿದೇಶ ಪ್ರಯಾಣಗಳು ಒದಗಿ ಬರು ತ್ತವೆ. ವಿದ್ಯೆಯಲ್ಲಿ ವಿಜೇತರಾಗುತ್ತೀರಿ, ಕ್ಯಾಂಪಸ್‌ಸಂಬಂಧಿ ಆಯ್ಕೆಗಳಲ್ಲಿ ವಿಜಯಿಸುತ್ತೀರಿ.

**ತುಲಾ**

ದುಃಖವು ನಶಿಸಿ, ಆನಂದೋತ್ಸಾಹ ತಿರುಗಿ ಬರುವುದು, ಸಮಾಜದಲ್ಲಿ ಗಣ್ಯರೊಂದಿಗೆ ಪರಿಚಯ, ನಿಮ್ಮ ಸಹಾಯವನ್ನು ಅವರು ಅರಸಿ, ಬಂಧು - ಮಿತ್ರರೊಂದಿಗೆ ರಾಜ ಸಂದರ್ಶನ, ದ್ರವ್ಯಲಾಭ ಒದಗಿ ಬರುವುವು.ಇತರರೊಂದಿಗೆ ಸಂಭಾಷಿಸುವಾಗ ಉತ್ತಮ ಚಾಕಚಕ್ಯತೆಯನ್ನು ಪ್ರದರ್ಶಿಸಿ ಸಹೃದ್ಭಾವನ ವಾತಾವರಣವನ್ನು ಕಲ್ಪಿಸುವಿರಿ.

**ವೃಶ್ಚಿಕ**

ವಿದ್ಯೆ - ವಿಷಯಗಳಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣ ರಾಗುವಿರಿ. ಮನೋಕಾಮನೆಗಳನ್ನು ಅದುಮಿಟ್ಟುಕೊಂಡು ಮುಂದೆ ಸಾಗುವುದು ಅತ್ಯಗತ್ಯ, ನಿಮ್ಮ ಮೇಲೆ ಮಿಥ್ಯಾಪರಾಧಗಳು ಬರುವ ಸಂಭವವಿದೆ. ಗೃಹಸ್ಥಿತಿ ಅನುಕೂಲಕರವಾಗಿಲ್ಲ. ವೈದ್ಯರ ಸಹಾಯ, ವೈರಲ್ ಸಂಬಂಧಿ ಜ್ವರಗಳಿಂದ ಶರೀರಕ್ಕೆ ಸೋಂಕು ಉಂಟಾಗುತ್ತದೆ. ಧೀರ್ಘಕಾಲ ಸಮಸ್ಯೆಗಳು ಬಗೆ ಹರಿಯುವ ಅವಕಾಶಗಳು ಬರುತ್ತವೆ.

**ಧನಸ್ಸು**

ರಾಜಕೀಯ ಉನ್ನತಿಗಾಗಿ ತಪಿಸುತ್ತೀರಿ ಒದಗಿ ಬರುವ ಕಾಲವಿದೆ. ನಿರ್ಮಾಣಕಾಯ ಒದಗಿ ಬರಲಿವೆ. ಶರೀರದ ಆರೋಗ್ಯ ಮೇಲೆ ನಿಘಾ ಅವಶ್ಯತೆ, ವೃತ್ತಿ ವ್ಯವಹಾರಗಳು ಕೈಗೂಡುವುದು. ಮೀನು. - ಜಾನುವಾರ ಸಂಬಂಧಿ ವ್ಯಾಪಾರಗಳು ಒದಗಿ ಬರುತ್ತವೆ. ಗೃಹನಿರ್ಮಾಣ ಕಾರ್ಯ ಒದಗುತ್ತದೆ. ಸ್ಥಿರಾಸ್ಥಿ ವೃದ್ಧಿ ಮಾಡುತ್ತೀರಿ ವಿದ್ಯಾರ್ಥಿಗಳು ಪದವಿಗಳನ್ನು ಗೆದ್ದು ಕೊಳ್ಳುವರು.

**ಮಕರ**

ಗೃಹಲಂಕಾರ ವಸ್ತುಗಳನ್ನು ಖರೀದಿಸುವಿರಿ. ನೂತನ ವಸ್ತು ಲಾಭ, ಅಲಂಕಾರಪ್ರಿಯತೆ ಬೆಳವಣಿಗೆ, ಜಾತಿ - ಕುಲಗೋಷ್ಠಿ ಕಾರ್ಯ ಕ್ರಮಗಳಲ್ಲಿ ಪಾಲ್ಗೊಳ್ಳುವಿರಿ. ಆಧ್ಯಾತ್ಮಿಕ ಚಿಂತನೆ ವೃದ್ಧಿಯಾಗಲಿದೆ. ಆದಾಯ ಮಾರ್ಗಗಳು ಬೆಳವಣಿಗೆಯಾಗಲಿವೆ. ಋಣಗಳು ತೀರಿ ಸಮಾಧಾನವುಂಟಾಗುತ್ತದೆ. ವ್ಯವಹಾರ ಪ್ರತಿಬಂಧಕಗಳು ತೊಲಗಿ ಸ್ಥಿರಾಸ್ತಿ ಖರೀದಿ ಮಾಡುವಿರಿ.

**ಕುಂಭ**

ಸ್ಥಾನಪಲ್ಲಟ ಸೂಚನೆಗಳಿವೆ. ಅಂದುಕೊಂಡ ಪ್ರತಿ ಕೆಲಸವು ಭರದಿಂದ ಸಾಗುತ್ತದೆ. ಆದರೆ ಗೃಹದಲ್ಲಿ ಆನಂದಕರವಾದ ವಾತಾವರಣ ಉಂಟಾಗುತ್ತದೆ. ಉದ್ಯೋಗಾವಕಾಶ ಕೈಗೂಡುತ್ತದೆ. ವೃತ್ತಿ - ವ್ಯವಹಾರಗಳು ಅನುಕೂಲವಾಗಿರುತ್ತವೆ. ನೀವು ಮಾಡುವ ಪ್ರತಿ ಕಾರ್ಯದಲ್ಲೂ ದೈವ ಬಲವಿರುತ್ತದೆ. ಉದ್ಯೋಗಸ್ಥರು ಹೊಸ ಜವಾಬ್ದಾರಿಗಳನ್ನು ಸ್ವೀಕರಿಸಲು ಸನ್ನದ್ಧರಾಗುವ ಅಗತ್ಯವಿರುತ್ತದೆ. ಆಕಸ್ಮಿಕ ಧನ ಲಾಭ ನಿಮ್ಮನ್ನು ಸೇರುತ್ತದೆ.

**ಮೀನ**

ಆತ್ಮಬಲ, ಮುಖವರ್ಚಸ್ಸು ವೃದ್ಧಿಸುತ್ತದೆ. ಶರೀರದ ಆರೋಗ್ಯ ಉತ್ತಮವಾಗಿರುತ್ತದೆ. ಊಹೆಗಿಂತಲೂ ಅಧಿಕ ಧನವ್ಯಯವಾಗುತ್ತದೆ. ಶುಭಕಾರ್ಯ ಒದಗಿ ಬರುವುದರಿಂದ ಆನಂದಕರ ವಾದ ಸಮಯ ಮನೆಯಲ್ಲಿ ಮಂಗಳ ತೋರಣಗಳು,ಅಧಿಕವ್ಯಯವಿದ್ದರೂ ಕಾರ್ಯ ಜಯ ಉಂಟಾಗುತ್ತದೆ. ಗೃಹ ನಿರ್ಮಾಣಗಳು ಆಲಸ್ಯವಾಗುತ್ತವೆ. ದೈವ ಧ್ಯಾನ-ಧರ್ಮನಿಷ್ಠೆಯುಂಟಾಗುತ್ತದೆ.









# ತ್ಯಾಜ್ಯ ಪದಾರ್ಥಗಳೆಲ್ಲವೂ ಔಷಧಿಗಳೇ


ತೆಲುಗು ಮೂಲ : ಡಾ|| ಸಿ. ಮಧುಸೂದನಶರ್ಮ

ಅನುವಾದ : ಡಿ.ಎಸ್. ಬದ್ರಿನಾಥ್


ಮಾನವ ಜಾತಿಯ ಉಗಮದಿಂದಲೂ ಗಿಡಮೂಲಿಕೆಗಳು ಮಾನವ ಜಾತಿಗೆ ಮಹೋಪಕಾರವನ್ನು ಮಾಡುತ್ತಲೇ ಬಂದಿವೆ. ಆಹಾರ, ಆಸನ, ಔಷಧವಾಗಿಯೊಂದೇ ಅಲ್ಲದೇ, ಪರಿಸರದ ಸಂರಕ್ಷಣೆ, ವಾತಾವರಣದ ಸಮತೋಲನವನ್ನು ಕಾಪಾಡುವಿಕೆ ಮೊದಲಾದ ಪ್ರಕ್ರಿಯೆಗಳಲ್ಲಿ ತಮ್ಮ ಭಾಗದ ವ್ರತವನ್ನು ಸಕ್ರಿಯವಾಗಿ ನಿರ್ವಹಿಸುತ್ತಾ ಜೀವಜಾಲಗಳ ಮುಂದುವರಿಕೆಗೆ ಭರಣೀಭೂತವಾಗಿವೆ.

ಆರೋಗ್ಯದ ವಿಷಯಕ್ಕೆ ಬಂದರೆ ಜಗತ್ತಿನಲ್ಲಿ ಔಷಧವಾಗಿ ಉಪಯೋಗ ಪಡೆಯದಂತಹ ಪದಾರ್ಥವು ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು ಆದ್ದರಿಂದಲೇ "ನಾನೌಷಧಿ ಭೂತಂ ಜಗತಿ ಕಿಂಚಿ ದ್ರವ್ಯಮಸ್ತಿ"ಎಂದು ಅನೌಷಧೀಯನಾಸ್ತಿವೃಕ್ಷಂ"ಎಂದು ಇವುಗಳ ಹಿರಿಮೆಯನ್ನು ಹಾಡಿಗಳಿದೆ ನಮ್ಮ ವೇದವಾಙ್ಮಯ.

ಅವಾಹಾನಾಲೋಪ, ನ್ಯೂನ್ಯತೆಯ ಭಾವ,ಆಸಕ್ತಿರಾಹಿತ್ಯ ಮೊದಲಾದ ಕಾರಣದಿಂದ ನಮ್ಮ ಸುತ್ತಲಿರುವ ಎಷ್ಟೋ ಪದಾರ್ಥಗಳನ್ನು ಸದ್ವಿನಿಯೋಗ ನಡೆಸಲಾರದೇ ತ್ಯಾಜ್ಯ ವಸ್ತುಗಳನ್ನಾಗಿ ಬಿಟ್ಟು ಬಿಡುತ್ತಾ ಇರುತ್ತೇವೆ. ಅಂತಹ ಪದಾರ್ಥಗಳನ್ನು ಆರೋಗ್ಯ ಸಂರಕ್ಷಣೆಗಾಗಿ ಹೇಗೆ ಸದ್ವಿನಿಯೋಗ ಪಡೆಸಿಕೊಳ್ಳಬಹುದೆಂದು ಪ್ರಸ್ತುತ ತಿಳಿದು ಕೊಳ್ಳೋಣ.

## ಹುಣಸೇ ಬೀಜಗಳು:

### ಚೇಳು ಕಡಿತಕ್ಕೆ:

ಹುಣಸೇಬೀಜಗಳನ್ನು ನೀರಿನಲ್ಲಿ ತೇದ ಉತ್ತಮ ನಾಧವನ್ನು ಲೇಪನ ಮಾಡಿದರೆ, ಚೇಳು ಕಡಿತದಿಂದ ಉಂಟಾಗುವ ಉರಿ, ಸೆಳೆತ, ನೋವು, ಬಾಧೆ, ಊತ ಮೊದಲಾದ ಲಕ್ಷಣಗಳು ಕಡಿಮೆಯಾಗುತ್ತವೆ.

### ಬಿಳಿ ಮತ್ತು ಕೆಂಪು ಸೆರಿಗಿಗೆ :

ದಿನವೂ ಎರಡೂ ಬಾರಿ , ಬಾರಿಯೊಂದಕ್ಕೆ ಅರ್ಧ ಟೀ ಸ್ಪೂನ್ ಹುಣಸೇ ಬೀಜದ ಪುಡಿ 100 ಮಿ.ಲೀ. ಅಕ್ಕಿಯನ್ನು ತೊಳೆದ ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ, ಸ್ತ್ರೀಯರಿಗೆ ಸಂಬಂಧಿಸಿದ ಬಿಳಿಸೆರಗೆಂದು ಕರೆಯಲ್ಪಡುವ ಶ್ವೇತಪದರ, ಕೆಂಪುಸೆರಗೆಂದು ಕರೆಯಲ್ಪಡುವ ರಕ್ತಪ್ರದರವು ತಗ್ಗುತ್ತದೆ.

## ಸೂಚನೆ:

ಹುಣಸೇಬೀಜಗಳನ್ನು ನೀರಿನಲ್ಲಿ ಹಾಕಿ ಒಂದು ದಿನವೆಲ್ಲಾ ನೆನೆಸಿ ಹಿಸುಕಿದರೆ ಮೇಲಿನ ತೊಗಲು ಹೊರಬರುತ್ತದೆ.ಒಳಗಿನ ಪೆಪ್ಪನ್ನು ಚೆನ್ನಾಗಿ ಒಣಗಿಸಿ ಮತ್ತೆ ತರಿತರಿಯಾಗಿ ಪುಡಿ ಮಾಡಿಕೊಳ್ಳಬೇಕು.

ಹುಣಸೆ ಬೀಜದ ಪುಡಿ ಆಯುರ್ವೇದ ಔಷಧ ವಿಕ್ರಾಲಯಗಳಲ್ಲಿ ಕೂಡ ಲಭ್ಯವಾಗುತ್ತದೆ.

**ಮೊಣಕಾಲು ನೋವಿಗೆ :**

ದಿನವೂ 2 ಬಾರಿ,ಬಾರಿಯೊಂದಕ್ಕೆ 50 ಮಿ.ಲೀ. ಹಾಲು, 50 ಮಿ.ಲಿ. ನೀರು, ಅರ್ಧಟೀಸ್ಪೂನ್ ಹುಣಸೇ ಬೀಜದ ಪುಡಿ ಅರ್ಧ ಟೀ ಸ್ಪೂನ್ ಕಲ್ಲುಸಕ್ಕರೆ ಇಲ್ಲವೇ ತಾಳೆ ಕಲ್ಲುಸಕ್ಕರೆ ಕಲಿಸಿ ಸ್ವಲ್ಪ ಹೊತ್ತು ಮರಳಿಸಿ, ಪಾಯಸದಂತೆ ಮಾಡಿ, ಬಿಸಿ ಯಾರಿದ ನಂತರ ಸೇವಿಸುತ್ತಿದ್ದರೆ ಮೊಣಕಾಲು ಸಂಬಂಧ ದಿಂದ ಬರುವ ನೋವುಗಳಿಂದ ಪರಿಷ್ಕಾರ ದೊರೆಯುತ್ತದೆ.

**ಕಲ್ಲಂಗಡಿ ಬೀಜಗಳು :**

**ಕಿಡ್ನಿ ಸ್ಟೋನ್ ಕಡಿಮೆಯಾಗಲು:**

ಕಲ್ಲಂಗಡಿ ಬೀಜಗಳನ್ನು ಒಣಗಿಸಿ ಮಾಡಿದ ಪುಡಿಯನ್ನು ದಿನವೂ 3 ಬಾರಿ, ಬಾರಿಯೊಂದಕ್ಕೆ 2-3 ಗ್ರಾಂನಂತೆ ತೆಗೆದು ಕೊಂಡು 100ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಮೂತ್ರ ವಿಸರ್ಜಾನಾಂಗಕ್ಕೆ ಸಂಬಂಧಿಸಿದ ಕಲ್ಲು ಕರಗಿ ಹೋಗು ತ್ತವೆ.

**ನಿಂಬೆ ಸಿಪ್ಪೆ ಹಾಗೂ ನಿಂಬೆ ಬೀಜಗಳು :**

**ಮುಖವು ಕಾಂತಿಯುತವಾಗಿ ಆಗಲು:**

ನಿಂಬೆ ಸಿಪ್ಪೆಯನ್ನು ಚೆನ್ನಾಗಿ ಒಣಗಿಸಿ, ಪುಡಿಮಾಡಿ, ಜರಡಿ ಹಿಡಿದು, ಇಟ್ಟುಕೊಂಡು, ತಕ್ಕಷ್ಟು ಪುಡಿಗೆ ಬೇಕಾದಷ್ಟು ಹಾಲನ್ನು ಹಾಕಿ ಪೇಸ್ಟಿನಂತೆ ಮಾಡಿ ಮುಖದ ಮೇಲೆ ಲೇಪಿಸಿ, ಒಂದು ಗಂಟೆ ಬಿಟ್ಟು ನಂತರ ತೊಳೆಯುತ್ತಿದ್ದರೆ ಮುಖದ ಮೇಲಿನ ಮೊಡವೆಗಳು, ಗುಳ್ಳೆಗಳು, ಮಚ್ಚೆಗಳು, ಕಾಂತಿಹೀನತೆ ಕುಗ್ಗಿ ಮುಖವು ಕೋಮಲವಾಗಿ, ನುಣುಪಾಗಿ, ಸೌಂದರ್ಯ ಯುತವಾಗಿ ತೇಜೋಮಯವಾಗಿ ತಯಾರಾಗುತ್ತವೆ.

**ಹಲ್ಲಿನ ಮೇಲಿನ ಕೊಳೆ ತೊಲಗಲು :**

25 ಗ್ರಾಂ ಒಣಗಿದ ನಿಂಬೆ ಸಿಪ್ಪೆಯ ಪುಡಿ, 100 ಗ್ರಾಂ ಅಡಿಗೆ ಸೋಡ, 100 ಗ್ರಾಂ ಉಪ್ಪು ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ದಂತಧಾವನ ಚೂರ್ಣವನ್ನಾಗಿ ಬಳಸುತ್ತಿದ್ದರೆ ಶೀಘ್ರ ಸಮಸ್ಯೆ ಬಗೆ ಹರಿಯುತ್ತದೆ.

**ಚರ್ಮವ್ಯಾಧಿಗೆ :**

ಒಣಗಿಸಿದ ನಿಂಬೆ ಸಿಪ್ಪೆಯನ್ನು ಸುಟ್ಟು ಬೂದಿ ಮಾಡಿ, ಬಿಸಿಯಾರಿದ ನಂತರ ಜರಡಿ ಹಿಡಿದು, ಇಟ್ಟುಕೊಂಡು ದಿನವೂ ಒಂದು ಬಾರಿ ತಕ್ಕಷ್ಟು ಬೂದಿಯಲ್ಲಿ ತಕ್ಕಷ್ಟು ಕೊಬ್ಬರಿ ಎಣ್ಣೆ ಕಲಿಸಿ ಬಾವಿನ ಮೇಲೆ ಲೇಪಿಸುತ್ತಿದ್ದರೆ ಕಜ್ಜಿ, ದದ್ದು, ತಾಮರ, ನವೆಯಂತಹ ಚರ್ಮ ವ್ಯಾಧಿಗಳು ತೊಲಗುತ್ತವೆ.

**ಹೇನು ಕಡಿತಕ್ಕೆ :**

ಒಣಗಿದ ನಿಂಬೆ ಬೀಜದ ಪುಡಿ 15 ಗ್ರಾಂ, ಜೀರಿಗೆ ಪುಡಿ 15 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ತಕ್ಕಷ್ಟು ಪುಡಿ ಯಲ್ಲಿ ತಕ್ಕಷ್ಟು ನೀರು ಸೇರಿಸಿ, ನಾದಿ ಪೇಸ್ಟೆನಂತೆ ಮಾಡಿ ಹಚ್ಚು ತ್ತಿರಬೇಕು.

**ಮೆಕ್ಕೆ ಜೋಳದ ಪೀಚು:**

**ವಿಸರ್ಜನಾಂಗದ ಕಲ್ಲಿನ ಸಮಸ್ಯೆಗೆ :**

ದಿನವು 2 ಬಾರಿ ಬಾರಿಯೊಂದಕ್ಕೆ 2 ಮಿ.ಲೀ. ನೀರಿನಲ್ಲಿ ಮೆಕ್ಕೆತೆನೆಯ ಪೀಚನ್ನು 5-10 ಗ್ರಾಂ ಕತ್ತರಿಸಿ ಪುಡಿಮಾಡಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಕೆಳಗಿಳಿಸಿ ಬಿಸಿ ಯಾರಿದ ನಂತರ ಶೋಧಿಸಿ ಕುಡಿಯುತ್ತಿದ್ದರೆ ಮೂತ್ರ ವಿಸ ರ್ಜನಾಂಗದ ಕಲ್ಲುಗಳು ಕರಗಿ ಹೋಗುತ್ತವೆ.

**ದಾಳಿಂಬೆ ಸಿಪ್ಪೆಗಳು :**

**ರಕ್ತಕಣಗಳ ವಿಕಾರಗಳು ತಗ್ಗಲು:**

ದಿನವೂ ಎರಡು ಇಲ್ಲವೇ 3 ಬಾರಿ, ಬಾರಿಯೊಂದಕ್ಕೆ 200 ಮಿ.ಲೀ. ನೀರಿನಲ್ಲಿ 5 ಗ್ರಾಂ ಒಣಗಿಸಿದ ದಾಳಿಂಬೆ ಸಿಪ್ಪೆಯ ಪುಡಿ ಸೇರಿಸಿ 100 ಮಿ.ಲೀ ನೀರು ಉಳಿಯುವಂತೆ ಮರಳಿಸಿ, ಬಿಸಿಯಾರಿದ ನಂತರ ಶೋಧಿಸಿ ತಕ್ಕಷ್ಟು ಕಲ್ಲುಸಕ್ಕರೆ ಕಲಿಸಿ ಸೇವಿಸುತ್ತಿರಬೇಕು.

**ಹೊಟ್ಟೆಯುಬ್ಬರಕ್ಕೆ :**

ಒಣಗಿದ ದಾಳಿಂಬೆ ಸಿಪ್ಪೆಗಳು ಚೂರ್ಣ 50 ಗ್ರಾಂ ಪುದಿನ ಎಲೆಗಳನ್ನು ಒಣಗಿಸಿ ಮಾಡಿದ ಚೂರ್ಣ 25 ಗ್ರಾಂ, ಸೈಂಧವ ಲವಣ ಚೂರ್ಣ 25 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ ಆಹಾರ ಸೇವನೆಯ ನಂತರ ಬಾರಿಯೊಂದಕ್ಕೆ 2-3 ಗ್ರಾಂ ಪುಡಿಯನ್ನು 100 ಮಿ.ಲೀ ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಹೊಟ್ಟೆಯುಬ್ಬರ ಕಡಿಮೆಯಾಗುವುದೊಂದೇ ಅಲ್ಲದೇ ಜೀರ್ಣ ರಸಗಳು ಚೆನ್ನಾಗಿ ಉತ್ಪತ್ತಿಯಾಗಿ ಹಸಿವು ಚೆನ್ನಾಗಿ ಆಗುತ್ತದೆ. ಜೀರ್ಣಶಕ್ತಿ ವೃದ್ಧಿಸುತ್ತದೆ.

**ದಂತ- ವಸಡಿನ ಸಮಸ್ಯೆಗೆ :**

100 ಗ್ರಾಂ ಒಣಗಿಸಿದ ದಾಳಿಂಬೆ ಬೀಜದ ಚೂರ್ಣ 25 ಗ್ರಾಂ ನಂತೆ ಜೀರಿಗೆ ಪುಡಿ, ಉಪ್ಪು ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ದಂತಧಾವನ ಚೂರ್ಣವನ್ನಾಗಿ ಬಳಸುತ್ತಿದ್ದರೆ ವಸಡಿನಿಂದ ಕೀವು,ರಕ್ತ ಬರುವುದು ನಿಂತು ಹೋಗಿ ಹಲ್ಲುಗಳು ಆರೋಗ್ಯವಾಗಿ, ದೃಢವಾಗಿ, ಬಲಿಷ್ಠವಾಗಿರುತ್ತದೆ.



# 108 ವೈಷ್ಣವ ದಿವ್ಯ ಕ್ಷೇತ್ರಗಳು

# ಅನ್ಬಿಲ್ ಕ್ಷೇತ್ರ (ಬಾಣಾಪುರಂ)


ತೆಲುಗುಮೂಲ : ಆಚಾರ್ಯ ಚಕ್ರವರ್ತಿ ರಂಗನಾಥನ್

ಕನ್ನಡ ಅನುವಾದ : ಸೂರ್ಯವಂಶಿ




ಭಗವಂತ ಪರ-ವ್ಯೂಹ-ವಿಭವ-ಅಂತರ್ಯಾಮಿ-ಆರ್ಚಾ ಎಂಬ ಐದು ರೂಪಗಳೊಂದಿಗೆ ದಿವ್ಯಕ್ಷೇತ್ರಗಳಲ್ಲಿ ರಾರಾಜಿಸುತ್ತಾ, ಆರ್ಚಾ ಮೂರ್ತಿಯಾಗಿ ಎಲ್ಲರನ್ನು ವಿಶೇಷವಾಗಿ ಅನುಗ್ರಹಿಸುತ್ತಿದ್ದಾನೆ. ಆಳ್ವಾರರಿಂದ ಕೊಂಡಾಡಲ್ಪಟ್ಟ ದಿವ್ಯಕ್ಷೇತ್ರಗಳಲ್ಲಿ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಿರುವ ಅನ್ಬಿಲ್ ಎಂಬ ದಿವ್ಯ ದೇಶವೂ ಒಂದಾಗಿದೆ ಇದು ಶ್ರೀರಂಗಪುರದ ಬಳಿ ಇದೆ.

**ಅನ್ಬಿಲ್ ದಿವ್ಯ ಕ್ಷೇತ್ರದ ಪರಿಚಯ:**

ಹಿಂದೆ ಒಬ್ಬ ಮುನಿಯು ನಿರಂತರವಾಗಿ ತಪಸ್ಸು ಮಾಡುವ ಕಾರಣದಿಂದ, ಯೋಗ್ಯವಿದ್ಯೆಯ ಮೂಲಕ ಜಲಸ್ತಂಭನ ವಿದ್ಯೆಯಲ್ಲಿ ನಿಷ್ಣಾತನಾಗಿ, ನೀರಿನಲ್ಲಿ ಅನೇಕ ವರ್ಷಗಳ ಕಾಲ ತಪಸ್ಸನ್ನು ಮಾಡತೊಡಗಿದ. ಆತನ ಕೀರ್ತಿಯನ್ನು ಕೇಳಿದ ದುರ್ವಾಸಮುನಿ, ಆ ಮುನಿಯನ್ನು ಸಂದರ್ಶಿಸುವುದಕ್ಕಾಗಿ ಆತ ತಪಸ್ಸು ಮಾಡುತ್ತಿದ್ದ ತಟಾಕದ ಬಳಿ ಬಂದು ಆ ಮುನಿ ಹೊರಗೆ ಬರುವವರೆಗೂ ಅಲ್ಲೇ ನಿರೀಕ್ಷಿಸುತ್ತಿದ್ದರು. ಎಷ್ಟು ಹೊತ್ತಾದರೂ ಆ ಮುನಿ ತಪಸ್ಸಿನಿಂದ ಹೊರಗೆ ಬರದೇ ಇದ್ದುದರಿಂದ ಕೋಪಿಷ್ಠನೆಂದೇ ಹೆಸರಾದ ದುರ್ವಾಸ ಮಹರ್ಷಿ ಅತ್ಯುಗ್ರನಾಗಿ,ತನ್ನತ್ತ ಆ ಮುನಿಯು ಪ್ರದರ್ಶಿಸಿದ ಆ ಗೌರವವನ್ನು ಸಹಿಸಲಾರದೇ "ಮಂಡೂಕೋಭವ" ಅಂದರೆ ನೀನು ಜಲದಲ್ಲೇ ಇರುವುದಕ್ಕೆ ಇಷ್ಟಪಡುತ್ತಿರುವುದರಿಂದ ಈ ನೀರಿನಲ್ಲೇ ಕಪ್ಪೆಯಾಗಿರು ಎಂದು ಶಪಿಸಿದ.

ಕೂಡಲೇ ಆ ಮುನಿಯು ಜಲಸಮಾಧಿಯಿಂದ ಹೊರಗೆ ಬಂದು, ದುರ್ವಾಸ ಮುನಿಯನ್ನು ಅನೇಕ ರೀತಿಯಲ್ಲಿ ಪ್ರಾರ್ಥಿಸಿ ತನ್ನನ್ನು ಕ್ಷಮಿಸಬೇಕೆಂದು ಕೇಳಿ ಕೊಂಡ. ಆಗ ದುರ್ವಾಸ ಮಹರ್ಷಿ ಶ್ರೀರಂಗದ ಸಮೀಪದಲ್ಲಿರುವ ದಿವ್ಯಕ್ಷೇತ್ರಗಳಲ್ಲಿ ಒಂದಾದ ಅನ್ಬಿಲ್ ಎಂಬ ಕ್ಷೇತ್ರವಿದೆ. ಅಲ್ಲಿ ದಿವ್ಯಮೂರ್ತಿಯಾಗಿ ವಿರಾಜಿಸುತ್ತಿರುವ ತಿರುವಡಿಗಳಗಿಯನಂಗಿ ಎಂಬ ಪೆರುಮಾಳ್ ಸೇವೆಯನ್ನು ಮಾಡಿ ನಂತರ ಪುಷ್ಕರಿಣಿಯಲ್ಲಿ ತಪಸ್ಸನ್ನು ಆಚರಿಸಿದರೆ,ನಿನಗೆ ಶಾಪವಿಮೋಚನೆಯಾಗುತ್ತದೆ ಎಂದು ಶಾಪಾಂತವನ್ನು ಅನುಗ್ರಹಿಸಿ ಅಲ್ಲಿಂದ ಹಿಂದಿರುಗಿದರು.



ನಂತರ ಆ ಮುನಿಯು ದುರ್ವಾಸಮುನಿಯ ಸೂಚನೆಯ ಪ್ರಕಾರ ಅನ್ಬಿಲ್ ಕ್ಷೇತ್ರಕ್ಕೆ ಹೋಗಿ ಅಲ್ಲಿ ತಿರುವಡಿವಳಗಿಯನಂಬಿ ಪೆರುಮಾಳ್ ಅನ್ನು ಸೇವಿಸಿ, ಅಲ್ಲಿರುವ ಪುಷ್ಕರಿಣಿಯಲ್ಲಿ ತಪಸ್ಸು ಮಾಡಲಾರಂಭಿಸಿದ. ಆತನ ತಪಸ್ಸಿಗೆ ಮೆಚ್ಚಿದ ಪರಮಾತ್ಮ ಪ್ರತ್ಯಕ್ಷನಾಗಿ, ಆ ಮುನಿಗೆ ಮೋಕ್ಷವನ್ನು ಅನುಗ್ರಹಿಸಿದ. ಅಂದಿನಿಂದ ಆ ಮುನಿಗೆ "ಮಂಡೂಕಮುನಿ" ಎಂದೂ, ಆ ತಪಸ್ಸನ್ನು ಆಚರಿಸಿದ ಆ ತೀರ್ಥವು





ಮಂಡೂಕತೀರ್ಥವೆಂದು" ಪ್ರಸಿದ್ಧಿಯಾಗಿದೆ. ತಿರುವಡಿವಳಗಿಯ ನಂಬಿ ಎಂದರೆ ಸುಂದರವಾದ ಆಕೃತಿಯನ್ನು ಹೊಂದಿರುವವನು ಎಂದರ್ಥ. ಮಂಡೂಕಮುನಿಯ ಶರೀರ ವಿಕಾರವನ್ನು ತೊಲಗಿಸಿ, ಸುಂದರ ಸ್ವರೂಪವನ್ನು ಅನುಗ್ರಹಸಿದ್ದರಿಂದ ಈ "ತಿರುವಡಿವಳಗಿಯ ನಂಬಿ" ಎಂಬ ನಾಮವು ಸಾರ್ಥಕನಾಮಧೇಯವಾಗಿದೆ.

### ತಿರುಅನ್ಬಿಲ್

ಅನ್ಬಿಲ್ ನಾಮ್ನೀ ಪುರೇ ಪ್ಲವಾಖ್ಯಸರಸೀ ಸಂಶೋಭಿತೇ ತಾರಕೇ
ಶ್ರೀಮೂರ್ತ್ಯುಜ್ಜ್ವಲ ಪೂರ್ಣನಾಮಕ ವಿಭುರ್ಭೋಗೀಂದ್ರ ಭೋಗೇಶಯಃ
ಆಲಿಂಗಸ್ ರುಚಿರೋಪಪೂರ್ವಲತಿಕಾ ದೇವೀಂ ಸುರೇಶಾಮುಖೋ
ವಾಲ್ಮೀಕಿ ದ್ರುಹಿಣಪ್ರಿಯೋ ವಿಜಯತೇ ಶ್ರೀಭಕ್ತಿ ಸೌರಸ್ತುತಃ॥

ಈ ದಿವ್ಯಕ್ಷೇತ್ರದಲ್ಲಿ ಲಕ್ಷ್ಮೀನಾರಾಯಣರು. "ತಿರುವಡಿವಳಗಿಯನಂಬಿ ಪೆರುಮಾಳ್- ಅಳಗಿಯವಲ್ಲಿ ತಾಯಾರ್" ಎಂಬ ಹೆಸರಿನಿಂದ ಕಂಗೊಳಿಸುತ್ತಿದ್ದಾರೆ. ಇಲ್ಲಿ ಮಂಡೂಕ ಪುಷ್ಕರಿಣಿ-ತಾರಕ ವಿಮಾನ-ಪೂರ್ವಮುಖ-ಭುಜಂಗಶಯನ ಎಲ್ಲವೂ ಗೋಚರಿಸುತ್ತದೆ. ಈ ಕ್ಷೇತ್ರದಲ್ಲಿ ವಾಲ್ಮೀಕಿ ಮಹರ್ಷಿಗೆ ಬ್ರಹ್ಮನಿಗೂ ಪ್ರತ್ಯಕ್ಷವಾದರೆಂದು ಪ್ರತೀತಿ ಇದೆ.

### ಈ ಕ್ಷೇತ್ರದ ವೈಶಿಷ್ಟತೆ:

ಈ ಕ್ಷೇತ್ರವು ತಿರುಚ್ಚಿ-ಕಲ್ಲಣೈ-ಕುಂಭಕೋಣಂ ಬಸ್ ಮಾರ್ಗದಲ್ಲಿ ಇದೆ. ತಿರುಚ್ಚಿಯಿಂದ ಬಸ್ ಸೌಕರ್ಯ ಮಿತವಾಗಿ ಇದೆ. ಆದ್ದರಿಂದ ನಟರಾಜಪುರಕ್ಕೆ ಬಸ್ಸಿನಲ್ಲಿ ಹೋಗಿ ಅಲ್ಲಿಂದ್ದ ಒಂದು ಕಿ.ಮೀ. ನಡೆದು ಸನ್ನಿಧಿಯನ್ನು ತಲುಪುವುದು ಸುಲಭ. ಇಲ್ಲಿ ಯಾವ ರೀತಿಯ ವಸತಿ ಸೌಕರ್ಯಗಳಿಲ್ಲ. ಶ್ರೀರಂಗದಿಂದಲೇ ಹೋಗಬೇಕಾಗುತ್ತದೆ. ಶ್ರೀರಂಗಕ್ಕೆ ಇಪ್ಪತ್ತ ಮೂರು ಕಿ.ಮೀ. ದೂರದಲ್ಲಿ ತಿರುಪ್ಪೇರ್ ನಗರ ಇದೆ.

ತಿರುಮಳಿಶೈ ಆಳ್ವಾರ್‌ಗಳು ಈ ಕ್ಷೇತ್ರವನ್ನು ಈ ರೀತಿಯಾಗಿ ವರ್ಣಿಸಿದ್ದಾರೆ.

ನಾಗತ್ತಣೈಕ್ಕುಡಂದೈವೆಃಕಾತ್ತಿರುವೆವ್ವುಳ್
ನಾಗತ್ತಣೈ ಯರಂಗಮ್ ಪೇರಂಬಿಲ್ ನಾಗತ್
ತ್ತಣೈ ಪ್ಪೋಣ್ಕೋಡಲ್ ಕಿಡುಕ್ಕುಮ್ ಆದಿ ನೆಡುಮಾಲ್
ಅಣೈ ಪ್ಪಾರ್ ಕರುತ್ತ ನಾವಾಸ್

"ಅನ್ಬೆ" ಅಂದರೆ ಪ್ರೇಮ ಎಂದು "ಇಲ್" ಎಂದರೆ ಆಲಯ ಎಂದರ್ಥ. ಆದ್ದರಿಂದ ಅನ್ಬಿಲ್ ಎಂದರೆ ಪ್ರೇಮಾಲಯ ಎಂದು ಅರ್ಥ ಈ ಕ್ಷೇತ್ರದಲ್ಲಿ ಸ್ವಾಮಿ ಕ್ಷೀರಸಾಗರದಲ್ಲಿ ಶಯನಿಸಿದಂತೆ ಶಯನಸ್ವರೂಪದಲ್ಲಿ ನೆಲೆಸಿದ್ದಾನೆ. ಇದಕ್ಕೆ ಕಾರಣವೇನೆಂದರೆ ಹಿಂದೆ ಭೃಗುಮಹರ್ಷಿ ವಿಷ್ಣುವಿಗೆ ಮಾಡಿದ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿ ಈ ಕ್ಷೇತ್ರದಲ್ಲಿ ತಪಸ್ಸನ್ನು ಆಚರಿಸಿದಾಗ, ಭಗವಂತನು ಅನುಗ್ರಹಸಿ , ಶೇಷಶಾಯಿಯಾಗಿ ಇಲ್ಲಿ ನೆಲೆಸಿದ್ದಾರೆ. ಈ ಆಲಯದಲ್ಲಿ ಪ್ರವೇಶಿಸಿದ ನಂತರ ಆಂಡಾಳ್ ಸನ್ನಿಧಿಯು ಕಂಡುಬರುತ್ತದೆ. ಇಲ್ಲಿ ಆಂಡಾಳ್ ಆಸೀನಳಾಗಿ ದರ್ಶನ ನೀಡುತ್ತಿದ್ದಾಳೆ. ವಿವಾಹವಾಗದ ಕನ್ಯೆಯರು ಇಲ್ಲಿ ಆಂಡಾಳ್ ಅನ್ನು ಸೇವಿಸಿದರೆ, ಸಕಾಲದಲ್ಲಿ ವಿವಾಹ ನಡೆಯುವುದು ಎಂದು ಇಲ್ಲಿನ ಭಕ್ತರ ವಿಶ್ವಾಸ. ಗರ್ಭಾಲಯದಲ್ಲಿ ಲಕ್ಷ್ಮೀನರಸಿಂಹ ಸ್ವಾಮಿ, ವೇಣುಗೋಪಾಲಸ್ವಾಮಿ ಹಾಗೆಯೇ ಹನುಮಂತನ ಸನ್ನಿಧಿಯೂ ಇದೆ. ಗರ್ಭಗುಡಿಯಲ್ಲಿ ಸ್ವಾಮಿಯು ಶಯನರೂಪವಾಗಿ ಪ್ರಕಾಶಿಸುತ್ತಿದ್ದಾನೆ. ಇಲ್ಲಿಯ ವಿಶೇಷವೇನೆಂದರೆ ಸ್ವಾಮಿಯ ಪವಡಿಸಿದ ಆದಿಶೇಷ ಭಕ್ತಾನುಗ್ರಹಕಾರಕನಾಗಿ ಅಂದರೆ ಸ್ವಲ್ಪ ವಕ್ರಾಕೃತಿಯಿಂದ ಭಕ್ತರನ್ನು ನೋಡುತ್ತಿರುವಂತೆ ದರ್ಶನವನ್ನು ನೀಡುತ್ತಾನೆ.

"ನ ಹಿ ದೇವ ತೋಷಣಂ ವೃಥಾ"- ಅಂದರೆ ಭಗವಂತನಿಗೆ ಮಾಡುವ ಸೇವೆ ಎಂದೂ ವೃಥಾ ಆಗುವುದಿಲ್ಲ. ಆದ್ದರಿಂದ ಭಕ್ತರು ಶ್ರದ್ಧಾ ಭಕ್ತಿಗಳಿಂದ ಆ ದೇವದೇವನನ್ನು ಸೇವಿಸಿ ಧನ್ಯರಾಗಿ...



# ಏಕಾದಶಿ ಮಹಾತ್ಮೆ

- ಡಾ ॥ ಎ. ಕುಮುದ
97319 03752

"ಏಕಾದಶೇಂದ್ರಿಯೈಃ ಪಾಪಂ ಯತ್ಕೃತ ಭವತಿ ಪ್ರಭೋ
ಏಕಾದಶ್ಯುಪಾಸನೇ ತತ್ಸರ್ವಂ ವ್ರಜೇತ್ ॥
ಉಪವಾಸವ್ರತಂ ಕುರ್ಯಾತ್ ತ್ರಿಕಾಲಂ ಚಾರ್ಚಯಂಸ್ತು ಮಾಮ್।
ಸರ್ವಕ್ರತುಫಲಂ ಲಬ್ಧಾ ಮಮ ಲೋಕೇ ಮಹೀಯೇತೇ॥

ಏಕಾದಶೀ ವ್ರತವು ಸಂಧ್ಯಾವಂದನಾದಿ ಕ್ರಿಯೆಗಳಂತೆ ನಿತ್ಯವಾಗಿದೆ. ಈ ವ್ರತದ ಅನುಷ್ಠಾನದಿಂದ ಮನುಷ್ಯನು ತನ್ನ ಏಕಾದಶೇಂದ್ರಿಯಗಳಿಂದ ಮಾಡಿದ ಎಲ್ಲ ಪಾಪಗಳಿಂದ ಮುಕ್ತನಾಗಿ ಸರ್ವಯಜ್ಞಗಳ ಫಲವನ್ನು ಪಡೆದು ವಿಷ್ಣು ಸಾನ್ನಿಧ್ಯವನ್ನು ಹೊಂದುವನು. ನಾಲ್ಕು ಆಶ್ರಮದವರೂ, ನಾಲ್ಕು ವರ್ಣದವರೂ ಅವಿವಾಹಿತ ಸ್ತ್ರೀಯರೂ, ಮುತ್ತೈದೆಯರೂ, ವಿಧವೆಯರೂ ಹಾಗೂ ಮಿಶ್ರಜಾತಿಯವರು ಎಲ್ಲರೂ ಮಾಸದ ಎರಡು ಪಕ್ಷಗಳಲ್ಲಿ ಬರುವ ಏಕಾದಶಿಯಂದು, ಭೋಜನ ಮಾಡಬಾರದು ಆ ದಿನ ಶ್ರಾದ್ಧವಾಗಲಿ, ಪಿತೃಗಳಿಗೆ ತರ್ಪಣವನ್ನಾಗಲೀ ಕೊಡಬಾರದೆಂಬ ಕಲ್ಪನೆಯಿದೆ.

ನಮ್ಮ ಕನ್ನಡದ ಪಂಚಾಂಗದ ಪ್ರಕಾರವೂ ಒಂದು ವರ್ಷಕ್ಕೆ ಹನ್ನೆರಡು ತಿಂಗಳುಗಳಿವೆ. ಒಂದು ತಿಂಗಳಿಗೆ ಶುಕ್ಲ ಹಾಗೂ ಕೃಷ್ಣಪಕ್ಷ ಎಂಬ ಎರುಡು ಪಕ್ಷಗಳಿವೆ. ಒಂದೊಂದು ಪಕ್ಷದ ಹನ್ನೊಂದನೆಯ ತಿಥಿಯನ್ನು ಏಕಾದಶೀಯೆಂದೂ,ದಿನವೆಂದೂ ಕರೆಯಲಾಗಿದೆ. ಏಕಾದಶಿಯ ದಿನ ಉಪವಾಸವ್ರತವನ್ನಾಚರಿಸಿ ರಾತ್ರಿ ಜಾಗರಣೆಯನ್ನು ಮಾಡಬೇಕು. ಮರುದಿನ ಮಾಡಿದ ಅಡಿಗೆಯನ್ನು ಶ್ರೀಹರಿಗೆ ಭಕ್ತಿಯಿಂದ ಪೂಜಿಸಿ ನೈವೇದ್ಯ ಮಾಡಿ ಸದ್ಭಕ್ತರಿಗೆ ಉಣಬಡಿಸಿ ನಂತರ ಭುಜಿಸಬೇಕೆಂಬ ನಿಯಮವಿದೆ. ಏಕಾದಶಿಯ ದಿನ ಭೋಜನ ಮಾಡಿದರೆ ಬ್ರಹ್ಮಹತ್ಯೆಯನ್ನು ಭುಜಿಸಿದಂತೆ ಎಂಬ ಕಲ್ಪನೆಯಿದೆ.

ವಿಷ್ಣು ಸಾಯುಜ್ಯ,ಸಂತಾನ,ಮತ್ತು ಸಂಪತ್ತುಗಳನ್ನು ಅಪೇಕ್ಷಿಸುವವರು ಏಕಾದಶಿ ವ್ರತವನ್ನು ಆಚರಿಸಬೇಕು. ಆಷಾಡ,ಶ್ರಾವಣ,ಭಾದ್ರಪದ ಕಾರ್ತೀಕ ಈ ನಾಲ್ಕು ಮಾಸಗಳನ್ನು ಚಾತುರ್ಮಾಸ ಎಂದು ಕರೆಯುವರು. ಆಷಾಡ ಶುಕ್ಲ ಪಕ್ಷ ಏಕಾದಶಿಯನ್ನು ಪ್ರಥಮ ಏಕಾದಶಿ ಎಂದೂ ಶಯನಿ ಏಕಾದಶಿಯೆಂದೂ ಕರೆಯುವರು. ಆ ದಿನ ಶ್ರೀಹರಿಯು ವಾಮನಾವತಾರಿಯಾಗಿ ಬಲಿಚಕ್ರವರ್ತಿಯನ್ನು ಮೂರು ಪಾದ ಭೂಮಿಯನ್ನು ದಾನ ಬೇಡಿದನು. ಶ್ರೀಹರಿಯು ಒಂದು ಪಾದವನ್ನು ಭೂಮಂಡಲವನ್ನೂ ಎರಡನೆ ಪಾದವನ್ನು ಆಕಾಶವನ್ನು ಅಳೆದನು. ಮೂರನೇ ಪಾದಕ್ಕೆ ಬಲಿಯು ತನ್ನ ತಲೆಯನ್ನು ತೋರಿದನು. ಆಗ ಶ್ರೀಹರಿಯು ಬಲಿಯನ್ನು ಪಾತಾಳಕ್ಕೆತಳ್ಳಿ ನಂತರ ತಾನು ಯೋಗನಿದ್ರಾವಶ್ಥೆಗೆ ತೆರಳಿದನು. ನಾಲ್ಕು ತಿಂಗಳು ಹರಿಯು ಯೋಗನಿದ್ರೆಯಲ್ಲಿರುತ್ತಾನೆಂದು ನಂಬಲಾಗಿದೆ. ಆ ದಿನವನ್ನು ಪ್ರಥಮೇಕಾದಶಿ ಎನ್ನಲಾಗಿದೆ. ಕಾರ್ತೀಕ ಶುದ್ಧ 'ಉತ್ತಾನ ದ್ವಾದಶಿಯಂದು ಎಚ್ಚರಗೊಳ್ಳುತ್ತಾನೆಂದು ಪ್ರತೀತಿಯಿದೆ. ಆ ನಾಲ್ಕು ತಿಂಗಳೂ ಪ್ರತಿ ದಿನ ಜಪ, ತಪ, ಧ್ಯಾನ, ಪುರಾಣ ಕಥಾ ಶ್ರವಣಮನ ನಾದಿಗಳು, ಅರ್ಚನೆ, ನಾಮ ಸಂಕೀರ್ತನೆ ಮಾಡಬೇಕು ವಿಶೇಷವಾಗಿ ಏಕಾದಶಿ ದಿನ ಮಾಡಲೇಬೇಕು. ಮರುದಿನ ಪಾರಣೆ ಮಾಡಿದರೆ ಶ್ರೀಹರಿಯು ಸದಾ ಪ್ರಸನ್ನನಾಗಿರುತ್ತಾನೆಂದು ನಂಬಿಕೆ.

ಹೊಸದಾಗಿ ಮದುವೆಯಾದ ಸುಮಂಗಲಿಯರು ಚಾತುರ್ಮಾಸದ ಮೊದಲ ಏಕಾದಶಿಯಿಂದ ಪ್ರತಿದಿನ ದೇವರ ಮುಂದೆ 33 ಗೋ ಪದ್ಮಗಳನ್ನು ರಂಗೋಲಿಯಿಂದ ಐದು ವರ್ಷ ಹಾಕಬೇಕು. ಗಂಧ ಪುಷ್ಪಾದಿಗಳಿಂದ ಪೂಜಿಸಿ 33 ಪ್ರದಕ್ಷಿಣೆ ನಮಸ್ಕಾರಗಳನ್ನು ಹಾಕುವುದು ಒಂದು ವ್ರತ. ಈ ವ್ರತವನ್ನು ನಾಲ್ಕು ತಿಂಗಳು ಮಾಡಬೇಕು.

ಪ್ರಥಮ ಏಕಾದಶಿ ಯಂದು ತಮ್ಮ ಮಠದ ಗುರುಗಳಿಂದ ತಪ್ತ ಮುದ್ರಾಧಾರಣೆಯನ್ನು ಮಾಡಿಸಿಕೊಳ್ಳಬೇಕು. ಈ ತಪ್ತಮುದ್ರಾಧಾರಣೆಯು ವೈಷ್ಣವರಿಗೆ ಆಗ ಬೇಕಾದ ಪಂಚ ಸಂಸ್ಕಾರಗಳಲ್ಲಿ ಒಂದು. ಲೋಹದಿಂದ ಶಂಖ ಚಕ್ರಗಳನ್ನು ತಯಾರಿಸಿ ತಪ್ತವಾದ ಅವು

ಗಳಿಂದ ದೇಹದಲ್ಲಿ ಅಂಕನ ಮಾಡಿಸಿಕೊಳ್ಳ ಬೇಕು. ಈ ರೀತಿ ಚಕ್ರಾಂಕನ ಮಾಡಿಸಿಕೊಳ್ಳುವುದರಿಂದ ಮೋಕ್ಷ ಪ್ರಾಪ್ತಿಯಾಗುವುದು. ಚಕ್ರಾಂಕನವಿಲ್ಲದ ವನು ಮಾಡುವ ಪೂಜೆಯು ವಿಫಲವಾಗುವುದೆಂಬ ನಂಬಿ ಕೆಯಿದೆ.

ಇತಿಹಾಸದಲ್ಲಿ ಅನೇಕ ರಾಜಮಹಾರಾಜರುಗಳು ವ್ರತ ಉಪವಾಸಗಳಿಂದ ಭಗವಂತನನ್ನು ಒಲಿಸಿಕೊಂಡಿರುವುದನ್ನು ಪುರಂದರದಾಸರು ಈ ರೀತಿ ಬಣ್ಣಿಸಿರುವರು.

ರುಕುಮಾಂಗದನಂತೆ ವ್ರತವ ನಾನರಿಯೆ
ಶುಕಮುನಿಯಂತೆ ಸ್ತುತಿಸಲರಿಯೆ
ಬಕವೈರಿಯಂತೆ ಧ್ಯಾನವ ಮಾಡಲರಿಯೇ ದೇ -
ವಕಿಯಂತೆ ಮುದ್ದಿಸಲರಿಯೆನೂ ಕೃಷ್ಣಾ॥

ವಿಷ್ಣುಭಕ್ತನಾದ ರುಕುಮಾಂಗದ ರಾಜನು ಏಕಾದಶಿಗೆ ಸಮನಾದ ವ್ರತವು ಮತ್ತೊಂದಿಲ್ಲ ಎಂದು ಸಾರಿದನು. ದಾಸರುಗಳು ಹರಿದಿನಕ್ಕೆ ಸಮನಾದ ವ್ರತವಿಲ್ಲ ಎಂದರು ರುಕುಮಾಂಗದ ರಾಜನು ಏಕಾದಶಿ ವ್ರತವನ್ನು ತಾನು ಅತಿ ನಿಷ್ಠೆಯಿಂದ ಆಚರಿಸುತ್ತಿದ್ದ. ಅಲ್ಲದೆ ತನ್ನ ರಾಜ್ಯದ ಎಲ್ಲಾ ಪ್ರಜೆಗಳೂ ಆಚರಿಸಲೇಬೇಕೆಂದು ಕಟ್ಟು ನಿಟ್ಟಿನ ಕಾನೂನು ಮಾಡಿದ್ದನೆಂಬ ಉಲ್ಲೇಖವಿದೆ ಪುರಾಣಗಳಲ್ಲಿ.

ಅಂಬರೀಶನ ವ್ರತನಿಷ್ಠೆ ಬಗ್ಗೆ ನೋಡ ಹೋದರೆ, ಅಂಬರೀಶನು ಸೂರ್ಯವಂಶದ ವೈವಸ್ವತ ಮನುವಿನ ಮಗುನಾದನಾಭಾಗನ ಮಗ. ಇವನು ವಿಷ್ಣು ಭಕ್ತಾಗ್ರೇಸರನ್ನೂ ದಾನ ಶೂರನ್ನೂ ಆಗಿದ್ದನು. ಅಂಬರೀಶನು ಒಮ್ಮೆ ಏಕಾದಶೀ ವ್ರತವನ್ನು ಕೈಗೊಂಡಿದ್ದನು. ಇವನ ನಿಯಮಕ್ಕೆ ಭಂಗ 'ಉಂಟು ಮಾಡಬೇಕೆಂಬ ಸಂಕಲ್ಪದಿಂದ ದೂರ್ವಾಸ ಮುನಿಯು ದ್ವಾದಶಿಯ ಬೆಳಿಗ್ಗೆ ಪಾರಣೆಗೆ ಬರುವುದಾಗಿ ಹೇಳಿದ್ದನು. ಸ್ನಾನ ಸಂಧ್ಯಾವಂನಾದಿಗಳನ್ನು ಮುಗಿಸಿ ಬರಲು ನದಿಗೆ ಹೋಗಿ ಬಹಳ ಹೊತ್ತಿನವರೆಗೂ ಹಿಂದಿರುಗಿ ಬರಲಿಲ್ಲ. ಪಾರಣೆಯಕಾಲ ಮೀರಿ ಹೋಗುತ್ತಿತ್ತು. ಅಂಬರೀಶನು ಮಿಕ್ಕ ಋಷಿಗಳ ಸೂಚನೆಯಂತೆ ಪಾರಣೆಗೆ ಪ್ರತಿನಿಧಿಯಾಗಿ ತೀರ್ಥಪ್ರಾಶನ ಮಾಡಿದ. ಕೂಡಲೆ ದೂರ್ವಾಸರು ಅಲ್ಲಿಗೆ ಬಂದು ಅಂಬರೀಶನನ್ನು ಶಪಿಸಿದರು. ಆದರಿಂದ ವಿಷ್ಣುವಿನ ಚಕ್ರಯುಧಕ್ಕೆ ಸಿಲುಕಿ ತಪ್ಪಿಸಿಕೊಳ್ಳಲಾಗದೆ ಅಂಬರೀಶನನ್ನೇ ಮೊರೆ ಹೋಗಬೇಕಾಯಿತೆಂದು ಪುರಾಣಗಳ 'ಉಲ್ಲೇಖ.

ಏಕಾದಶಿವ್ರತ ಆಚರಣೆಯಿಂದ ಮನೋನಿಗ್ರಹವುಂಟಾಗುವುದು. ಅಲ್ಲದೆ ಪಚನಕ್ರಿಯೆಯು ಸಲೀಸಾಗುವುದೆಂದು ವೈಜ್ಞಾನಿಕವಾಗಿ ತಿಳಿದು ಬಂದಿದೆ.



## ಭಾವಾರ್ಥ ಸಹಿತ ಶ್ರೀ ಭಾರತೀಶ ಕರಾವಲಂಬನ ಸ್ತೋತ್ರಂ

### ಶ್ರೀ ಗುರುಭ್ಯೋ ನಮಃ ಹರಿ ಓಂ ಶ್ರೀಃ

ಶ್ರೀ ವೇಂಕಟೇಶ ಪದಪದ್ಮ ಸುಚಂಚರೀಕ
ಶ್ರೀ ವಿಷ್ಣುಭಕ್ತಿ ಗುಣವರ್ಯ ಗುರೂತ್ತಮೇಶ।
ಶ್ರೀ ಶೇಷ ರುದ್ರ ಗರುಡಾದಿ ಸೇವಿತಾಂಘ್ರಿ
ಶ್ರೀ ಭಾರತೀಶ ಮಮ ದೇಹಿ ಕರಾವಲಂಬಮ್ ॥1॥



**ಶ್ರೀ ವೇಂಕಟೇಶನ ಪಾದಪದ್ಮಗಳಲ್ಲಿ ದುಂಬಿಯಂತೆ ಸೇವಿಸುವ ಶ್ರೀವಿಷ್ಣು ಭಕ್ತಿಯೆಂಬ ಶ್ರೇಷ್ಠ ಗುಣವುಳ್ಳ ಉತ್ತಮ ಗುರುಗಳಿಗೂ ಒಡೆಯರಾದ ಶ್ರೀಶೇಷ ರುದ್ರ ಗರುಡಾದಿ ದೇವತೆಗಳಿಂದಲೂ ಸೇವಿಸಲ್ಪಡುವ ಪಾದ ಕಮಲಗಳುಳ್ಳ ಶ್ರೀಭಾರತೀಪತಿಯಾದ ವಾಯುದೇವರು ನಮ್ಮನ್ನು ಕಾಪಾಡಲಿ.**

ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್. ನರಸಿಂಹಾಚಾರ್ಯ


- ಅನುವಾದ :ಶ್ರೀಮತಿ

(ಕಳೆದ ಸಂಚಿಕೆಯಿಂದ)

"ತನ್ನಿರ್ಗತನದೀವಿಷ್ಟೇವ ಕುರ್ವಾಣಾಃ ಸ್ನಾನತರ್ಪಣೇ
ತಪಃ ಕುರ್ವಂತಿ  ವಾಂಛಂತಃ ಸಾಕ್ಷಾತ್ಕರ್ತುಂ ಜನಾರ್ದನಮಂ"

(ಶುಕರಿಗೂ ಮೊದಲು ಹಲವು ಮುನಿಗಳು,ಭೃಗು ಮಹರ್ಷಿಗಳೇ ಮೊದಲಾದ ತಪೋದನರು.ಪ್ರಹ್ಲಾದರಾದಿಯಂತಹ ಪುಣ್ಯಾತ್ಮರು, ಅಂಬರೀಷ ಮೊದಲಾದ ರಾಜರುಗಳು ಆ ಪರ್ವತರಾಜನಲ್ಲಿರುವ ಶ್ರೀ ವಿಷ್ಣುದೇವನನ್ನು ಮೂರ್ತಿ ಮುಖೇನ ಸ್ತುತಿಸುವವರಾಗಿ, ಅಲ್ಲಿ ಕಾಲಿಡಲೂ ಸಹ ಭೀತರಾಗಿ, ಆ ಪ್ರಾಂತ್ಯದಲ್ಲಿ ವಾಸಿಸುವವರಾಗಿ ಆ ಪರ್ವತದಿಂದ ಪ್ರವಹಿಸುವ ಜಲಧಾರೆಯಲ್ಲಿ ಸ್ನಾನ - ತರ್ಪಣಗಳನ್ನು ಕೈಗೊಂಡವರಾಗಿ ಶ್ರೀಮನ್ನಾರಾಯಣನನ್ನು ಸಾಕ್ಷಾತ್ಕರಿಸುವ ಗುರಿಯುಳ್ಳವರಾಗಿ ತಪವನ್ನಾಚರಿಸಿದ್ದಾರೆ.)

ಅಲ್ಲದೇ ಪರತತ್ವಜ್ಞರಲ್ಲಿ ಪ್ರಮುಖರಾದ ಶುಕಾದಿ ಮಹರ್ಷಿಗಳು ಪ್ರಹ್ಲಾದ ಮೊದಲಾದ ಪರಮಭಾಗವತರು, ಅಂಬರೀಷಾದಿ ರಾಜರ್ಷಿಯರು ಈ ದಿವ್ಯತಾಣವಾದ ತಿರುಮಲೆಯೇ ಎಲ್ಲರಿಗೂ ಅತೀತನಾದ ಶ್ರೀಮನ್ನಾರಾಯಣನ ದಿವ್ಯಮಂಗಳ ವಿಗ್ರಹವನ್ನು ನೆನೆದು, ತಮ್ಮ ಪ್ರಾಕೃತ (ನೀಚ) ಶರೀರದಿಂದ (ಪಾದಗಳಿಂದ) ತುಳಿಯಲು ಹಿಂಜರಿದವರಾಗಿ ಪ್ರಾಂತ್ಯದ ಮುಂದೆಯೇ ಇದ್ದು, ಆ ಬೆಟ್ಟದ ದ್ವಾರದಲ್ಲಿಯೇ  ಸ್ನಾನಾದಿ ತರ್ಪಣಗಳನ್ನು ಮಾಡಿಕೊಳ್ಳುತ್ತಾ ಭಗವತ್ ಸಾಕ್ಷಾತ್ಕಾರಕ್ಕಾಗಿ ಪ್ರಾರ್ಥಿಸುತ್ತಿದ್ದರೆಂದು ಸ್ಕಂದ, ವಾಮನ, ವರಾಹಾದಿ, ಪುರಾಣಗಳಲ್ಲಿರುವಂತೆ ತಿಳಿಸಿದೆ ಅಜ್ಞಾನವು ತೊಲಗಿ, ಭಕ್ತಿ ಜ್ಞಾನಗಳನ್ನು ಹೊಂದಿದ ಆಳ್ವಾರರೂ ಸಹಾ ಪ್ರಾಕೃತ ಶರೀರದೊಂದಿಗೆ ತಿರುಮಲೆಯ ತಪ್ಪಲಿನ ದ್ವಾರದಲ್ಲೇ ನಿಂತು, ಮಂಗಳಶಾಸನ ಮಾಡಿಸಿರುವುದನ್ನು ಕಂಡು,ಸರ್ವಜ್ಞರಂತೆ ಮೊದಲು ತಾವು ಸಹಾ ಒಂದು ಯಾತ್ರ ಸಂದರ್ಭದಲ್ಲಿ ಆಳ್ವಾರರಂತೆಯೇ ತಿರುಮಲೆಯನ್ನೇರದೇ, ಬೆಟ್ಟದಿಂದಿಳಿದು, ಕೆಲವು ದಿನಗಳಿದ್ದು,ಶ್ರೀವೈಷ್ಣವರ ಸನ್ನಿಧಿಯಲ್ಲಿ ಇತಿಹಾಸ ಶ್ರೇಷ್ಠವಾದ ಶ್ರೀರಾಮಾಯಣವನ್ನು ಪ್ರವಚನ ಮಾಡುತ್ತಿದ್ದುದನ್ನು ಕಂಡು, ಶ್ರೀವೇಂಕಟಾಚಲಪತಿಗೆ ಒಂದು ಮಂಗಳಶಾಸನವನ್ನು ಮಾಡಿ, ತಮ್ಮ ಇತಿಹಾಸಾಚಾರ್ಯರಾದ ತಿರುಮಲನಂಬಿಯು,ತಮ್ಮ ಪ್ರಿಯ ಶಿಷ್ಯರಾದ ಅನಂತಾಚಾರ್ಯರನ್ನು ಶ್ರೀವೇಂಕಟೇಶ್ವರನಿಗೆ ಮನಃ ಪ್ರೀತಿಕರವಾಗುವಂತೆ ಕೆಲಸ ಕಾರ್ಯಗಳನ್ನು ಕೈಗೊಂಡಿದುದನ್ನು ಕಂಡು ತಾವೂ ಸಹಾ ಮನದಲ್ಲೇ ಆನಂದಿಸಿದ್ದಾರೆ. ಆಗ ತಿರುಮಲೆಯ ಮೇಲೆ ನಿತ್ಯ ವಾಸ ಮಾಡುತ್ತಿದ್ದ ಮನುಷ್ಯ ಪಾಮರರು. ದಿವ್ಯ ತಿರುಮಲ ಕ್ಷೇತ್ರ



ವೈಭವವನ್ನು, ಆದಿಕಾಲದಿಂದಲೂ ಕ್ಷೇತ್ರ ವಾಸಿಗಳಾಗಿದ್ದ ಮಹರ್ಷಿಗಳ ಅನುಷ್ಠಾನ ವಿಶೇಷಗಳನ್ನು ಶ್ರೀವೇಂಕಟೇಶ ಹೃದಯವಾದ ಶಾಸ್ತ್ರಾರ್ಥಗಳನ್ನು ತಿಳಿಯದೇ ಸ್ವೇಚ್ಛವಾಗಿ ವರ್ತಿಸುವುದನ್ನು ಕಂಡು ಅವರು ತಿಳಿದೂ ತಿಳಿಯದೇ ಮಾಡಿದ ಶಾಸ್ತ್ರ ಮರ್ಯಾದೆಗೂ ಮೀರಿದ ಅಂಶಗಳನ್ನು ನಿವಾರಣೆಗೊಳಿಸಲೆಂದು ಒಂದು ಶಾಸ್ತ್ರನಿಯುಕ್ತಿಯನ್ನು ಎಲ್ಲರಿಗೂ ಅರ್ಥವಾಗುವಂತೆ ರಚಿಸಬೇಕೆಂದು ತಮ್ಮ ದಿವ್ಯ ಚಿತ್ತದಲ್ಲಿ ಸಂಕಲ್ಪಿಸುವ ರಾದರು.

"ಕೇಚಿತ್ಕೈಂಕರ್ಯನಿರತಾಃ ಕೇಚಿದ್ಬ್ರಹ್ಮಾಣಿ ನಿಷ್ಠಿತಾಃ
ಧ್ಯಾನಾನಿಷ್ಠಸ್ತಪೋನಿಷ್ಠಾಃ ಕೇಚಿ ದುದ್ಯಾನಕಾರಿಣಃ
ವಿಗ್ರಹಲೋಕನ ಪರಾಃ ತತ್ರಾಽಸನ್ಮುನಿಪುಂಗವಾಃ"

(ಹಲವು ಮುನಿಶ್ರೇಷ್ಠರು ಕೈಂಕರ್ಯಾಸಕ್ತರಾಗಿ, ಹಲವರು ಬ್ರಹ್ಮ ನಿಷ್ಠರಾಗಿ,ಹಲವರು ಧ್ಯಾನನಿಷ್ಠರಾಗಿ,ತಪೋನಿಷ್ಠರಾಗಿ,ಹಲವರು ಉದ್ಯಾನ ಕಾವಲುಗಾರರಾಗಿ ಇನ್ನು ಹಲವರು ದಿವ್ಯಮಂಗಳ ವಿಗ್ರಹದ ಸಂದರ್ಶನದ ಪುಣ್ಯಕ್ಕಾಗಿ ಹಂಬಲಿ ಸುತ್ತಿದ್ದರು.)

ಎಂದು ಸ್ಕಂದ ಪುರಾಣದಲ್ಲಿನ ಸುವರ್ಣಮುಖರಿ ಮಹಾತ್ಮೆಯ ಘಟ್ಟದಲ್ಲಿರುವುದನ್ನು ಅನುಸರಿಸಿ,ತಿರುಮಲೆಯಲ್ಲಿ ಕೈಂಕರ್ಯ ಪರರಾಗಿ ರುವವರು ಮಾತ್ರವೇ ನಿತ್ಯವಾಸ ಮಾಡಬಹುದೆಂದೂ ತಿರುಮಲೆಯ ದ್ವಾರದಲ್ಲಿ ವಾಸಿಸುವ ಭಗವದ್ಗುಣಾನುಭ ಪರರನ್ನೂ ಇತರ ಸಂಸಾರಿ ಗಳನ್ನು ಉತ್ಸವ ಕಾಲದಲ್ಲಿ ತಿರುಮಲೆಯ ಮೇಲೆ ಸ್ವಾಮಿ ದರ್ಶನ ಮಾಡಿ ಕೊಂಡು ಕೆಳಗಿಳಿಯಬೇಕೆಂದು

"ಕಂದ ಮೂಲಾಫಲಾದ್ಯಾಶ್ಚ ನೋಪಭೋಜ್ಯ ಸ್ವತಂತ್ರತಃ"
ತತ್ರೋತ್ಪನ್ನಾಸ್ತು ರಾಜೇಂದ್ರ ಯತಸ್ಸಪ್ರಾಕೃತಮೇ ಗಿರಿಃ"

(ಆ ಬೆಟ್ಟ ಅಪ್ರಾಕೃತವೆಂದೂ, ಆದ್ದರಿಂದ ಅದರ ಉತ್ಪನ್ನಗಳಾದ ಕಂದ ಮೂಲಗಳನ್ನು ಸ್ವೇಚ್ಛಾಚಾರದಿಂದ ಭುಂಜಿಸಬಾರದು)

ಎಂದು ಸ್ಕಂದ ಪುರಾಣದ ಸುರ್ವಣಮುಖರಿ ಮಹಾತ್ಮೆಯಲ್ಲಿನ ತಿರುಮಲೆ ಅಪ್ರಾಕೃತಸ್ಥಳವಾದ್ದರಿಂದ ಅಲ್ಲಿ ಹುಟ್ಟಿದ ಅಲ್ಲಿಯೇ ಉಪಯು ಕ್ತವಾಗಬೇಕೆಂದು, ವೈಷ್ಣವಾಗಮಸಿದ್ಧವಾದ ಕಂದಮೂಲ ಫಲಾದಿ ಗಳೂ, ಸಕಲ ಪದಾರ್ಥಗಳೂ

"ಕಂದಮೂಲಾನಿ ವಸ್ತೂನಿ ಭೋಜ್ಯಾನಿ ಚ ಹವಿಂ ಷಿಚ
ನಿವೇದ್ಯ ಪುರತೋ ವಿಷ್ಣೋಃ ತತ್ಪ್ರಾಸಾದೋವ ಜೀವನಃ"

(ಕಂದ ಮೂಲಾದಿಗಳನ್ನು, ಭೋಜ್ಯ ಪದಾರ್ಥಗಳನ್ನು, ಹವಿಸ್ಸನ್ನು ಮೊದಲು ವಿಷ್ಣುಮೂರ್ತಿಗೆ ನಿವೇದಿಸಿ ನಂತರ ಆ ಪ್ರಸಾದವನ್ನು ಭುಂಜಿಸಿ ಜೀವಿಸುತ್ತಿದ್ದರು)

ಎಂದು ಈ ಪ್ರಸಂಗಕ್ಕೂ ಮುಂಚೆಯೇ ಹೇಳಿರುವುದರಿಂದ,ಬೇರೆ ಸ್ಥಳಗಳಿಂದ ಬಂದ ಪದಾರ್ಥಗಳನ್ನಾಗಲೀ ದೇವಾಲಯಕ್ಕೆ ಯೋಗ್ಯ ವೆಂದು ಹೇಳಲಾಗುವ ಪದಾರ್ಥಗಳನ್ನು ಸ್ಥಳೀಯ ವಾಸಿಗಳು ತಂತಮ್ಮ ಮನೆಗಳಲ್ಲಿ ಪಾಕಗಳನ್ನು ಮಾಡದೇ,ದೇವಾಲಯದಲ್ಲೇ ಪಾಕಗಳನ್ನು ಮಾಡಿಸಿ, ಶ್ರೀವೇಂಕಟಾಚಲಪತಿಗೆ ನಿವೇದನೆ ಮಾಡಿ ಸಿದ ನಂತರ ಆ ಪ್ರಸಾದವನ್ನು ತೆಗೆದುಕೊಂಡು ಮನೆ ಯಲ್ಲಿ ದೇವತೆಗಳಿಗೆ ನಿವೇದನೆ ಕಾಲಕ್ಕೆ ತಕ್ಕಂತೆ ಹವ್ಯ ಕವ್ಯಗಳು (ದೇವತಾರ್ಚನೆ, ಪಿತೃ ದೇವತಾರಾಧನೆ) ಆಚರಿಸಿ,ಶರೀರ ಪೋಷಣೆಯನ್ನು ಮಾಡಿಕೊಳ್ಳು ತ್ತಿದ್ದರು.

ದೇವಾರ್ಪಿತೈರ್ಗಂಧ ಮಾಲ್ಯೈರ್ಹವಿಷಾಚ ಮಹಾರ್ಷಯಃ
ಆಚಾರಯ್ಯೋಽರ್ಚನಾಂ ವಿಷ್ಣೋರೊಘುಸ್ತತ್ರ ಮರ್ಹೀಧರೇಃ

(ಆ ಬೆಟ್ಟದ ಮೇಲೆ ವಾಸಿಸುವ ಮಹರ್ಷಿಗಳು ಮೊದಲು ದೇವಾರ್ಪಣೆಗಾಗಿ ಗಂಧಮಾಲ್ಯಾಗ ಳೊಂದಿಗೆ ಹವಿಸ್ಸು (ಅನ್ನ) ಸಹಿತವಾಗಿ ವಿಷ್ಣುವನ್ನಾ ರಾಧಿಸುತ್ತಿದ್ದರು)

ಎಂದು ಬ್ರಹ್ಮೋತ್ತರ ಪುರಾಣದಲ್ಲಿ ಏಳನೇ ಅಧ್ಯಾಯದಲ್ಲಿರುವಂತೆ ಸ್ಥಳೀಕರು ತಮ್ಮ ಗೃಹಾರಾಧನೆ ಗಾಗಿ ದಿವ್ಯೋದ್ಯಾನದಿಂದ ಪತ್ರಪುಷ್ಪಗಳನ್ನು ಸಂಗ್ರ ಹಿಸಿ, ಶ್ರೀವೇಂಕಟೇಶ್ವರನಿಗೆ ಸಮರ್ಪಿಸಿ ಅರ್ಪಿತವಾದ ಪತ್ರಪುಷ್ಪಗಳನ್ನೇ ದೇವತಾರಾಧನೆಗಾಗಿ ಉಪಯೋಗಿ ಸಬಹುದೆಂದು ಭಗವನ್ನಿವೇದಿತ ಶೇಷದಿಂದಲೇ ತಮ್ಮ ಜೀವನವನ್ನು ಸಾಗಿಸಬೇಕಾಗಿತ್ತು. ಇದೊಂದು ತಿರು ಮಲದ ಉಪಲಕ್ಷಣವು. ಈಸೂಚನಾ ಪ್ರಕಾರವೇ ಭಗ ವಂತನ ಬಾಯಿಗೆ ಭೋಜ್ಯವಾಗುವ ಹಾಲು,ಪರ ಮಾನ್ನ, ಸೂಪ,ಹಿಡ್ಡಿನಡುಗೆಗಳನ್ನು ಸ್ಥಳೀಕರು ತಂತಮ್ಮ ಮನೆಗಳಲ್ಲಿ ತಯಾರಿಸಬಾರದೆಂದು, ಅದು ದೇವಾಲ ಯಾಚರಣೆಗೆ ವಿರುದ್ಧವಾದುದೆಂದು ತರಕಾರಿ, ಹಣ್ಣು, ಗಡ್ಡೆ - ಗೆಣಸು ಮುಂತಾದವುಗಳನ್ನು ಕ್ಷೇತ್ರವಾಸಿಗಳು ತಂತಮ್ಮ ಮನೆಗಳಲ್ಲಿ ಬಳಸಬಹುದೆಂಬಂತೆ.

"ಕಲಾವನ್ನಗತಪ್ರಾಣಃ ಪ್ರಾಣಿನ ಸರ್ವ ಏವ ಹಿ"

(ಕಲಿಕಾಲದಲ್ಲಿ ಜೀವಿಗಳೆಲ್ಲರೂ ಅನ್ನಾಶ್ರಿತರಾದ ಜೀವವನ್ನು ಹೊಂದಿರುವವರೇ)

ಎನ್ನುವಂತೆ ಸಕಲ ಮಾನವರಿಗೂ ಯಾವಾ ಗಲೂ ದೇಹ ದಾರಣವು ಅನ್ನದಿಂದಲೇ ಆಗುವುದರಿಂದ ಅನ್ನವನ್ನು ಮಾತ್ರ ಮನೆಯಲ್ಲಿ ತಯಾರಿಸಬಹುದು. ತಿರುಮಲೆಯಲ್ಲಿ ವಾಸಿಸುವವರಿಗೆ ಸಂತಾನಪ್ರಾಪ್ತಿ ಯಾದಲ್ಲಿ, ಮೃತ್ಯವುಂಟಾದಲ್ಲಿ (ಜನನ ಮರಣಗಳು) ಒಂದೊದಗಲು ಅವರು ಬೇರೆ ಸ್ಥಳಕ್ಕೆ ವಲಸೆ ಹೋಗ ಬೇಕು.ಆಕಸ್ಮಾತ್ತಾಗಿ (ಹಠಾತ್ತಾಗಿ) ಮರಣವು ಪ್ರಾಪ್ತ ವಾದಲ್ಲಿ ದೇಹ ಕೊಳೆಯುವ ಮೊದಲೇ ಆ ದೇಹದ ಶವ ಸಂಸ್ಕಾರವನ್ನು ಮಾಡಬೇಕು.

(-ಮುಂದುವರೆಯುತ್ತದೆ.)

ಧಾರಾವಾಹಿ

# ಶ್ರೀಮದ್ಭಗವದ್ಗೀತೆ

ತೆಲುಗು ಮೂಲ : ಕೆ. ವಿಶ್ವನಾಥ ಶರ್ಮ

ಅನುವಾದ : ಶ್ರೀಮತಿ ಬಿ. ಪದ್ಮಜ



**ಹಿಂದಿನ ಸಂಚಿಕೆಯಿಂದ**

ಮಂತ್ರಾಣಾಂ ಎಂದರೆ “ಮನನಾತತ್ರಾಯತೇ ” ಇತಿ ಮಂತ್ರ, ಒಂದು ವಿಷಯವನ್ನು ಯೋಚಿಸಿ ಅದನ್ನು ನಮ್ಮ ಮನಸ್ಸಿನಲ್ಲಿ ಭದ್ರಪಡಿಸಿಕೊಂಡರೆ ಆ ವಿಷಯ ನಮ್ಮನ್ನು ಕಾಪಾಡುತ್ತದೆ. ಅಂತಹಾ ವಿಷಯಕ್ಕೆ ಮಂತ್ರ ಎಂದು ಹೆಸರು. ಆ ಮಂತ್ರಗಳು ಹೇಳಿದ ವಿಷಯಗಳನ್ನೇ ಪುನಃಪುನಃ ಹೇಳುತ್ತಿರುತ್ತವೆ. ಏಕೆಂದರೆ ಮನಸ್ಸಿನಲ್ಲಿ ಆ ವಿಷಯ ಭದ್ರವಾಗಿ ನೆಲೆಯೂರಬೇಕು. ಆ ರೀತಿ ಭದ್ರಪಡಿಸಿಕೊಳ್ಳುವುದಕ್ಕಾಗಿ ಮಂತ್ರಗಳು ಹೇಳಿದ್ದನ್ನೇ ಪುನಃ ಹೇಳಬಾರದೆಂಬ ನಿಯಮವೇನಿಲ್ಲ ಎಂದು ಶಂಕರಾಚಾರ್ಯರಂತಹಾ ಮಹಾನುಭಾವರು ದೃಢಪಡಿಸಿದ್ದಾರೆ. ಆದ್ದರಿಂದ ಪುನರುಕ್ತಿ ಎಂದು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕಷ್ಟವಾದ ವಿಷಯಗಳಲ್ಲಿ “ಪುನರುಕ್ತಿಯೂ” ಕೂಡಾ ಒಂದು ಗುಣವಾಗಿರುತ್ತದೆ. ಪುನರುಕ್ತಿ ಸರಿಯಾದ ಮಾರ್ಗವೆಂದು ನಾಲಕ್ಕು ಬಾರಿ ಹೇಳಿದ್ದೇವೆ. ಪುನರುಕ್ತಿಯೂ ದೋಷವಲ್ಲ. ಹಾಗೆಯೇ ಅದು ಸರಿಯಾದುದು ಎಂಬ ವಿಷಯವನ್ನು ದೃಢಪಡಿಸಿ ಕೊಳ್ಳುವುದಕ್ಕಾಗಿಯೇ ಇದು ದೋಷವಲ್ಲ. ಇದು ಮಂತ್ರಗಳ ರೀತಿಯೂ ಅಲ್ಲ. ಪರಮಾತ್ಮನ ವಿಧಾನ ಇದಲ್ಲ ಎಂದು ತಿಳಿಯಬೇಕು. ಪುನರುಕ್ತಿ ಎನ್ನುವುದು ಇಲ್ಲಿ ಸರಿಯಾದ ಗುಣ ಪರಮಾತ್ಮನ ಉದ್ದೇಶ ಅದಲ್ಲ. ಪರಮಾತ್ಮ ಪುನರುಕ್ತಿ ಮಾಡಿದ ಪ್ರತಿಬಾರಿ ಪ್ರತಿಯೊಂದರಲ್ಲೂ ಒಂದು ಸಣ್ಣ ವಿಶೇಷವನ್ನು ಬಂದು ಚಿಕ್ಕ ಅನುಮಾನವನ್ನು ಬಗೆಹರಿಸುವುದಕ್ಕಾಗಿ ಒಂದು ಚಿಕ್ಕ ವಿಶೇಷವನ್ನು ಖಂಡಿತಾ ಹೇಳಿರುತ್ತಾನೆ. ಇಲ್ಲಿಯವರೆಗೂ ““ಆತ್ಮ ಅವಿನಾಶಿ” ಎಂಬ ವಿಷಯ ತಿಳಿದಿದ್ದೇವೆ ಅಲ್ಲ ಎಂದು ಯಾವ ರೀತಿಯಲ್ಲಿ ಹೇಳಬೇಕು? ಅಂದರೆ ನಾನು ಯಾವ ಕ್ರಿಯೆಗೂ ಕರ್ತನಲ್ಲ ಎಂದು ತಿಳಿಸಬೇಕು. ನಾನು ಸಂಹಾರ ಎಂಬ ಕ್ರಿಯೆಯೂ ಆಗಬಹುದು ಮತ್ತೊಂದು ಕ್ರಿಯೆಯೂ ಆಗಬಹುದು. ಈ ಕ್ರಿಯೆಗೂ ನಾನು ಕರ್ತನಲ್ಲ ನನಗೂ ಆ ಕ್ರಿಯೆಗೂ ಸಂಬಂಧವಿಲ್ಲ ಕ್ರಿಯೆಗಳೆಲ್ಲವೂ ದೇಹದಲ್ಲಿರುವುದೇ, ನನಗೂ ಕ್ರಿಯೆಗೂ ಸಂಬಂಧವಿಲ್ಲದ ಶುದ್ಧವಾದ ಆತ್ಮಸ್ವರೂಪ ಎಂದು ಎನಿಸಿದರೆ ನಾನು ಹೇಳಿದ್ದು ನಿನಗೆ ಅರ್ಥವಾದಂತೆಯೇ! ಇಲ್ಲದಿದ್ದರೆ ನೀನು ಇದರ ಬಗೆಗೆ ಮತ್ತಷ್ಟು ಶ್ರಮ ವಹಿಸಬೇಕಾಗುತ್ತದೆ. ಆ ವಿಷಯವನ್ನು ಸೂಚಿಸುವುದಕ್ಕಾಗಿಯೇ “ಕಥಂ ನ ಪುರುಷಃ ಪಾರ್ಥಕಂ ಘಾತಯತಿ ಹಂತಿ ಕಂ” ಎಂದು ಪ್ರಶ್ನೆಯನ್ನು ಮಾಡಿದ. “ನಾನುಹೇಳಿದ ವಿಷಯವನ್ನು ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರು ವಂತೆ ಪ್ರಯತ್ನ ಮಾಡುತ್ತೇನೆ ನೀವು ಖಂಡಿತವಾಗಿಯೂ ಆ ಕೆಲಸ ಮಾಡಿ” ಎಂದು ಸೂಚನೆಯನ್ನು ನೀಡುತ್ತಾ.

“ವೇದಾವಿನಾಶಿನಂ ನಿತ್ಯಂ ಯ ಏನ ।ಮಜವ್ಯಯಮ್।
ಕಥಂಸಪುರುಷಃ ಪಾರ್ಥ ಕಾಂಘತಯತಿ ಹಂತಿ ಕಮ್॥

ಎಂದು ಹೇಳುತ್ತಿದ್ದಾನೆ. ಪ್ರತಿ ಸಂದರ್ಭದಲ್ಲೂ ಸಣ್ಣ ಪುಟ್ಟ ವಿಶೇಷವನ್ನು ಅದರಲ್ಲಿ ಸೇರಿಸುತ್ತಾನೆ. ಅದೇ ಸಮಯದಲ್ಲಿ ನಮಗೆ ಹೇಳಿದ ವಿಷಯ ಸ್ವಲ್ಪ ಕಷ್ಟವಾದದ್ದಾದರೆ ಆ ವಿಷಯವನ್ನು ನಮ್ಮ ಮನಸ್ಸಿನಲ್ಲಿ ಭದ್ರವಾಗಿ ನೆಲೆಯೂರುವವರೆಗೂ ಹೇಳುತ್ತಲೇ ಇರುತ್ತಾನೆ, ಆ ಪರಮಾತ್ಮ ! ಆ ವಿಷಯವನ್ನು ಪುನಃ ಪುನಃ ಇಂತಹಾ ರಾರಾಜಿಸುತ್ತಿರುವ ಪುನರುಕ್ತಿ ಎಂಬ ಗುಣದಿಂದ ಕೂಡಿರುವ ಈ ಶ್ಲೋಕವನ್ನು ಒಂದು ಪಾಠದಂತೆ ಸ್ವೀಕರಿಸಿ ಮೇಲೆ ತಿಳಿಸಿದ ಶ್ಲೋಕದಲ್ಲೂ ಇದೇ ಭಾವನೆಯೊಂದಿಗೆ, ದೇಹಗಳು ಅನಿತ್ಯ ಎಂಬ ಭಾವನೆಯನ್ನೂ ಸೇರಿಸಿ ನಮಗೆ ಪರಮಾತ್ಮನು ಭೋದಿಸುತ್ತಿದ್ದಾನೆ.

(ಮುಂದುವರೆಯುತ್ತದೆ.)



ಧಾರಾವಾಹಿ

# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

### ಹಿಂದಿನ ಸಂಚಿಕೆಯಿಂದ

ಮೇಲೆ ತಿರುಮಲೆ ಎನ್ನುವ ಪದ ಈ ಬೆಟ್ಟಕ್ಕೆ ಅನ್ವಯವಾಗುತ್ತದೆ.ತಪ್ಪಾಗಿ ಪ್ರಯೋಗಿಸಲ್ಪಟ್ಟಿಲ್ಲವೆಂದು ರಾಯರ ಹೇಳಿಕೆಯಿಂದಲೇ ಸಿದ್ಧಪಡಿಸಿದ್ದಾಯಿತು. ರಾಯರು ಹೇಳುವಂತೆ ಪೇಯಾಳ್ವಾರ್ ಅವರ ಮೂನ್ರಾಂತಿರುವಂದಾದಿಯಲ್ಲಿ ಒಂದು ಪದ್ಯದಲ್ಲಿ ಮಾತ್ರ ತಿರುಮಲೆ ಎನ್ನುವ ಪದ ಬಳಕೆಯಾಗಿಲ್ಲ.ಆದರೆ 63 ಮತ್ತು 75 ನೇ ಪಾಶುರಗಳಲ್ಲಿ ಎರಡು ಜಾಗಗಳಲ್ಲಿ ‘ತಿರುಮಲೆ’ ಎನ್ನುವ ಪದ ಪ್ರಯೋಗಿಸಲ್ಪಟ್ಟಿದೆ.

ತಾರು ಶಡೈಯುಂ ನೀಳ್ ಮುಡಿಯಂ ಒಣ್ ಮುರುವುಂಶಕ್ಕರಮುಂ
ಶೂರು ಅರವುಂ ಪೊನ್ ನಾಣುಂ ತೋನ್‌ರುಂ ಅಲ್ - ಶೂರುಂ
ತಿರಂಡು ಅರುವಿ ಪಾಯುಂ ತಿರುಮಲೈ ಮೇಲ್ ಎಂದೈಕ್ಕು
ಇರಂಡುರುವುಂ ಒನ್‌ರಾಯ್ ಇಶೈಂದು ॥63॥

ಶಾರ್‌ನ್ದ ಅಹಡು ತೇಯ್ಪುತಡಾವಿಯ ಕೊಟ್ಟು ಉಚ್ಚಿವಾಯ್
ಊರ್‌ನ್ದು ಇಯಂಗು ವೆಣ್‌ಮದಿಯಿನ್ ಒಣ್ ಮುಯಲೈ ಶೇರ್ನ್ದು
ಶಿನವೇಂಗೈ ಪಾರ್ಕುಂ ತಿರುಮಲೈಯೇ ಅಯನ್
ಪುನವೇಂಗೈ ನಾರುಂ ಪೊರುಪ್ಪ ॥75॥

ಶ್ರೀರಾಮಚಂದ್ರರಾಯರು ಈ ಹರಿಹರ ಅಭೇದದ ಪಾಶುರ (63)ವನ್ನು ತಿರುವೇಂಗಡನಾಥನಿಗೆ ಆರೋಪಿಸಿ ವೈಷ್ಣವರಾದ ಪೇಯಾಳ್ವಾರ್ ಬರೆದಿರಲಾರರೆಂಬ ಊಹೆಯಿಂದ ಮೇಲಿನ ವಾದವನ್ನು ಮುಂದಿಟ್ಟಿದ್ದಾರೆಂದು ತಿಳಿಯಬೇಕಾಗಿದೆ. ನಿಜ,ಪೇಯಾಳ್ವಾರ್ ಅವರ ಈ ಪಾಶುರ ಒಂದೇ ವಿಚಿತ್ರವಾಗಿದೆ. ಅದನ್ನು ಮುಂದೆ ಚರ್ಚಿಸೋಣ.ಅಂತೂ ಪೇಯಾ ಳ್ವಾರ್ ತಿರುಮಲೆ ಎಂದು ಬಳಸಿರುವ ಪದದ ಪಾಶುರಗಳು ಒಂದಲ್ಲ ಎರಡಿವೆ ಎಂದಾಯಿತು. ಆದ್ದರಿಂದ ತಿರುಮಲೆ,ಪೆರುಮಲೆ ಎನ್ನುವ ಪದಕ್ಕೆ ತಪ್ಪಾಗಿ ಪ್ರಯೋಗಿಸಲ್ಲ ಎಂದೂ ಸಿದ್ಧವಾಯಿತು. ಇದು ಬೇರೊಬ್ಬರ ಕೈವಾಡವಲ್ಲ.ಆಳ್ವಾರ್ ಅವರು ಸ್ವತಹ ಪ್ರಯೋಗಿಸಿದ್ದಾರೆ ಎಂದು ದೃಢವಾಗಿ ಹೇಳಬಹುದು ಅಲ್ಲವೆ?

ಇನ್ನು ಈ ‘ತಿರುಮಲೆ’ಎನ್ನುವ ಪದವನ್ನು ಮತ್ತೊಬ್ಬ ಆಳ್ವಾರರೂ ಈ ಬೆಟ್ಟವನ್ನು ಕುರಿತೇ ಪ್ರಯೋಗಿಸಿದ್ದಾರೆ.ತಿರುಮಂಗೈ ಆಳ್ವಾರ್ ತಮ್ಮ ತಿರುಕ್ಕುರುಂದಾಂಡಗಂ ಪ್ರಬಂಧದಲ್ಲಿನ 7 ನೇ ಪಾಶುರದಲ್ಲಿ ತಿರುಮಲೆಯ ಪ್ರಸ್ತಾಪ ಮಾಡುತ್ತಾರೆ.

ಇಮ್ಮೈಯ್ಯೈ ಮರುಪ್ಪೈ ತನ್ನೈ ಎಮಕ್ಕು ವೀಡಾಹಿನಿನ್‌ರಿ
ಮೆಯ್‌ಮ್ಮೈಯ್ಯೈವಿರಿಂದ ಶೋಲೈವಿಯನ್ ತಿರುವರಂಗಂ ಮೇಯ

ಶಮ್ಮೈಯ್ಯೈ, ಕರುಮ್ಯೈ ತನ್ನೈ ತಿರುಮಲ್ಯೈ ಒರುಮ್ಯೈಯಾನ್ನೈ
ತನ್ಮೈಯ್ಯೈನಿನ್ಯೈವಾರ್ ಎನ್ ತನ್ ತಲ್ಯೈ ಮಿಶೈಮನ್ನು ವಾರೇ ॥7॥

ಈ ಸಂದರ್ಭದಿಂದ ಇದು ತಿರುಪತಿ ಬೆಟ್ಟಕ್ಕೇ ಉಪಯೋಗಿಸಿರುವ ಪದ ಎನ್ನಬಹುದು-ನಮ್ಮಾಳ್ವಾರ್ ತಿರುವಾಯ್ಮೊಳಿಯ(2-10-4)ಪಾಶುರದಲ್ಲಿ ತಿರುಮಲ್ಯೈ ಮಾಲಿರುಂಶೋಲೈಗೇ ಅನ್ವಯಗೊಂಡಿರುವುದು ಆ ಸಂದರ್ಭದಿಂದ ಅರಿವಾಗುವಂತೆ! ಆದ್ದರಿಂದ ತಿರುಮಲ್ಯೈ ಎನ್ನುವ ಪದ ಪ್ರಯೋಗ ಪ್ರಾಚೀನ ಕಾಲದಿಂದಲೂ ಈ ಬೆಟ್ಟಕ್ಕೆ ಬಳಸುವ ಒಂದು ಹೆಸರು ಎಂಬುವುದು ತಿಳಿದು ಬರುತ್ತದೆ.

ಇದನ್ನು ಗಮನಿಸಿದಾಗ ಪೆರುಮಲೆಗೆ ಬದಲಾಗಿ ತಿರುಮಲೆ ಖಂಡಿತವಾಗಿಯೂ ತಪ್ಪಾಗಿ ಉಪಯೋಗಿಸಲ್ಪಟ್ಟಿಲ್ಲವೆಂದು ನಿರ್ಧಾರವಾಗಿ ನಾವು ಹೇಳಬಹುದು "ತಿರು" ಎನ್ನುವ ಪದ ಕೇವಲ 'ಶ್ರೀ'ಎಂಬ ಅರ್ಥದಿಂದಾಗಲೀ, ದೊಡ್ಡ ಎನ್ನುವ ಅರ್ಥದಿಂದಾಗಲೀ ಬಳಸಲ್ಪಡುವುದಿಲ್ಲ. ಅದಕ್ಕೆ ಬೇರೆ ಅರ್ಥವೊಂದಿದೆ ಎನ್ನುವುದು ತಿಳಿಯುತ್ತದೆ. ನಿಜ, ತಿರು ಎಂದರೆ ಶ್ರೀ ಅಥವಾ ಲಕ್ಷ್ಮಿ ಎನ್ನುವುದು ಒಂದು ಅರ್ಥ. ಆದರೆ ದೊಡ್ಡ ಎನ್ನುವ ಅರ್ಥ ಎಲ್ಲಿಯೂ ಹೇಳಿರುವಂತೆ ನನಗೆ ಗೊತ್ತಿಲ್ಲ ಭಾಷಾಕೋವಿದರು ಹೇಳಬೇಕು. ಆದರೆ ತಿರು ಎನ್ನುವುದನ್ನು ಮತ್ತೊಂದು ಅರ್ಥದಲ್ಲಿ ಶ್ರೀವೈಷ್ಣವರು ಬಳಸುತ್ತಾರೆ. ಅದೇ 'ಪವಿತ್ರ' ಅಥವಾ 'ಶ್ರೇಷ್ಠ' ಎನ್ನುವ ಅರ್ಥ. ಆದ್ದರಿಂದ ತಿರುಮಲೆ ಎಂದಾಗ ಶ್ರೇಷ್ಠವಾದ, ಪವಿತ್ರವಾದ ಬೆಟ್ಟ ಎನ್ನುವ ಅರ್ಥ ಬರುತ್ತದೆ. ಇದೇ ಅರ್ಥದಿಂದಲೇ ನಮ್ಮಾಳ್ವಾರ್ ತಿರುಮಾಲಿರುಂಶೋಲೈ ಅನ್ನು ತಿರುಮಲ್ಯೈ ಎಂದು ಕರೆದಿರುವುದು. ಇದು ಸಮಂಜಸವಾದ ಅರ್ಥವೆನಿಸುತ್ತದೆ. ಈ ಅರ್ಥ ಬಂದಾಗ ತಿರುಮಲೆ ಎನ್ನುವುದೇ ಸರಿಯಾದ ಪದವಾಗುತ್ತದೆ. ಎಲ್ಲಾ ಶ್ರೇಷ್ಠವಾದ ಮಲೆಗೂ ತಿರುಮಲೆ ಎಂದೇ ಕರೆಯಬಹುದು. ಆದರೆ ಬಳಕೆಯಿಂದ ತಿರುಪತಿಯ ಬೆಟ್ಟಕ್ಕೆ ಈ ಹೆಸರು ಅನ್ವಯಗೊಳ್ಳುತ್ತದೆ ಎಂದು ಮೇಲಿನ ಉದಾಹರಣೆಯಿಂದ ಕಂಡುಕೊಳ್ಳಬಹುದು. ಪೆರುಮಲೆ ಎಂದು ಇರಬೇಕಿತ್ತು. ಎನ್ನುವ ವಾದ ತಪ್ಪಾಗುತ್ತದೆ. ತಿರುಮಲೆ ಎನ್ನುವ ಪದಕ್ಕೇನೋ ಸಮಾನ ಸಂಸ್ಕೃತ ಪದ "ಶ್ರೀಶೈಲ"ಎಂಬುದಾಗಿ, ಶ್ರೀವೈಷ್ಣವರು ತಿರುಪತಿಯ ಬೆಟ್ಟವನ್ನು 'ಶ್ರೀಶೈಲ' ವೆಂದೇ ಉಲ್ಲೇಖಿಸಿದ್ದಾರೆ. 'ಶ್ರೀಶೈಲಮಂಜನಗಿರಿಂ' ಎಂದು ತಿರುಮಲೆಯನ್ನು ನಿರ್ದೇಶ ಮಾಡಿದ್ದಾರೆ. ಈ ಶ್ರೀಶೈಲವನ್ನು ಕರ್ನೂಲಿನ ಶ್ರೀಶೈಲಕ್ಕೆ ಅವರು ಬಳಸಿಲ್ಲ. ಶ್ರೀವೈಷ್ಣವರ ಪ್ರಕಾರ ತಿರುಪತಿಯ ಬೆಟ್ಟ ಶ್ರೀಶೈಲವಲ್ಲದೆ ಬೇರೆ ಬೆಟ್ಟವನ್ನು ಶ್ರೀಶೈಲವೆಂದು ಹೆಸರಿಸಿರುವುದು ಅವರಿಗೆ ವ್ಯವಹಾರದಲ್ಲಿ ಬಂದಿಲ್ಲ, ತಿಳಿದಿಲ್ಲ. ಶ್ರೀ ಸಂಬಂಧವಾದ ಬೆಟ್ಟದಲ್ಲಿ ಮಲ್ಲಿಕಾರ್ಜುನನು ನೆಲಸಿರುವುದು ಹೇಗೆಂಬುದಾಗಿ ಶಿವಭಕ್ತರು ತಿಳಿಸ ಬೇಕಾದ ವಿವರಣೆ! ಆದರೆ ಶ್ರೀಎಂದರೆ ಶ್ರೇಷ್ಠ ಎನ್ನುವ ಅರ್ಥದಲ್ಲೇ ಶ್ರೀಶೈಲದಲ್ಲಿ 'ಶ್ರೀ' ಉಪಯೋಗಿಸಲ್ಪಟ್ಟಿರುವುದು.

ಇನ್ನೊಂದು ವಿಚಾರ. ಆಳ್ವಾರುಗಳು ದೊಡ್ಡಬೆಟ್ಟ ಎನ್ನಬೇಕಾದರೂ ಸಹ ಎಲ್ಲಿಯೂ ಪೆರುಮಲ್ಯೈ ಎಂದು ವ್ಯವಹರಿಸಿರುವುದು ಕಂಡು ಬಂದಿಲ್ಲ. ಮಾಮಲ್ಯೈ ಎಂಬ ಪದದಲ್ಲೇ ಈ ಅರ್ಥದ ನಿರ್ದೇಶ ಮಾಡಿದ್ದಾರೆ. 'ಮಾ' ಎಂದರೆ 'ಮಹಾ' ಅಥವಾ 'ಹಿರಿದಾದದ್ದು' ಎಂದು ಅರ್ಥ.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.



ಶ್ರೀ ಪ್ರಸನ್ನವೆಂಕಟ ದಾಸಾರ್ಯವಿರಚಿತ

ಧಾರಾವಾಹಿ

# "ಇದು ಯೇನ್ನೆ ಚಂದಾ ನಮ್ಮ ಮನೆಗೆ ಗೋವಿಂದ ಬಂದಾ"

## ಆತ್ಮನಿವೇದನೆ ಕೀರ್ತನೆಯ ಒಳನೋಟ


- ಡಾ॥ ಸುಭಾಸ ಕಾಖಂಡಕಿ

79754 42458


ಇದು ಯೇನ್ನೆ ಚಂದಾ। ನಮ್ಮ ಮನೆಗೆ ಗೋವಿಂದಾ ಬಂದಾ ॥ಪ॥

ಶ್ರೀಪ್ರಸನ್ನ ವೆಂಕಟದಾಸರ ಅಪರೂಪವಾದ ಈ ಕೃತಿಯಲ್ಲಿ ಅವರಿಗಾದ ದಿವ್ಯ ಅನುಭವದ ತಾತ್ವಿಕತೆಯ ಭಕ್ತಿಭಾವ ತುಂಬಿದ ಅನನ್ಯತೆಯ ಭಾವವನ್ನು ಹೇಳುವಂತಿದೆ.ಈ ಕೀರ್ತನೆ ದಾಸರ ಜೀವನದಲ್ಲಿ ನಡೆದ ಒಂದು ಅಪೂರ್ವವಾದ ದೈವಿ ಪ್ರಸಂಗವನ್ನು ಬಿಂಬಿಸುತ್ತದೆ. ಶ್ರೀಪ್ರಸನ್ನವೆಂಕಟದಾಸರು ತಮ್ಮ ಭಕ್ತಿಯ ಪರಾಕಾಷ್ಠತೆಯಿಂದ ಶ್ರೀನಿವಾಸನನ್ನು ಒಲಿಸಿಕೊಂಡು ಅವನಿಂದ ನೇರವಾಗಿ ಅಂಕಿತ ಪಡೆದು ಕೊಂಡಾಗ ಅದೇ ದಿನ ಶ್ರೀನಿವಾಸ ದೇವರು ಪ್ರಧಾನ ಅರ್ಚಕರ ಸ್ವಪ್ನದಲ್ಲಿ ಬಂದು ಗರ್ಭಗುಡಿಯಲ್ಲಿ ಒಂದು ರೇಶ್ಮೆ ಗಂಟಿದೆ ಅದನ್ನು ಪ್ರಸನ್ನ ವೆಂಕಟದಾಸರಿಗೆ ದಯಪಾಲಿಸಬೇಕೆಂಬ ಅಪ್ಪಣೆ ಆಗುತ್ತದೆ. ಮರುದಿವಸ ನಸುಕಿನಲ್ಲಿ ಗರ್ಭಗುಡಿ ಬಾಗಿಲ ತೆಗೆದಾಗ ಅರ್ಚಕರು ಅಲ್ಲಿರುವ ಗಂಟನ್ನು ಕಂಡು ದಾಸರಿಗೆ ತಮಗಾದ ಸ್ವಪ್ನದೃಷ್ಟಾಂತ ತಿಳಿಸಿ ಗಂಟನ್ನು ದಾಸರಿಗೆ ಕೊಡುತ್ತಾರೆ. ಆ ಗಂಟನ್ನು ಬಿಚ್ಚಿದಾಗ ಅದರಲ್ಲಿ ಶ್ರೀದೇವಿ-ಭೂದೇವಿ ಸಹಿತವಾದ ದಿವ್ಯವಾದ ಶ್ರೀನಿವಾಸನ ವಿಗ್ರಹಗಳಿರುತ್ತವೆ. ದಾಸರ ಮನಸ್ಸು ತುಂಬಿ ಬಂದು ಅವುಗಳನ್ನು ಭಕ್ತಿ ಪೂರ್ವಕವಾಗಿ ಕಣ್ಣಿಗೊತ್ತಿಕೊಂಡು, ಸ್ವೀಕರಿಸುತ್ತಾರೆ. ಮುಂದೆ ದಾಸರು ಇದೇ ವಿಗ್ರಹಗಳನ್ನು ದಿನ ನಿತ್ಯ ಪೂಜಿಸಿ ಆರಾಧಿಸುತ್ತಾರೆ. ಹಾಗೆ ಒಂದು ದಿನ ದೇವರನ್ನು ವಿಗ್ರಹಗಳಲ್ಲಿ ಆವ್ಹಾನ ಮಾಡಿ ಕೈಯಲ್ಲಿ ಹಿಡಿದು ತದೇಕ ಚಿತ್ತದಿಂದ ಶ್ರೀನಿವಾಸನ ವಿಗ್ರಹವನ್ನು ಧ್ಯಾನ ಪರವಶರಾಗಿ ನೋಡುತ್ತಿದ್ದಾಗ, ಅವರಿಗೆ ಶ್ರೀನಿವಾಸನೆ ಕಂಡಂತಾಗುತ್ತದೆ. ಅಂತಲೇ ದಾಸರು ಭಕ್ತಿ ಪರವಶರಾಗಿ ಬಂದೆಯಾ ನನ್ನಪ್ಪ! ಎಂಥ ಕರುಣಾಳುನೀನು'' ಎಂದು ಈ ಹಾಡನ್ನು ಹಾಡುತ್ತಾರೆ.

ಇದು ಏನು ಚಂದಾ ನಮ ಮನೆ ಗೋವಿಂದ ಬಂದಾ''

ತಮ್ಮ ಮನೆಗೆ ಹೇಗೆ ಬಂದಾ, ಒಬ್ಬನೇ ಬರಲಿಲ್ಲ -

ಶ್ರೀದೇವಿ - ಭೂದೇವಿ ಸಹಿತದಿ ಮಾಧವಾ।
ಮುದದಿ ಬಂದಾ ವೈಕುಂಠದಿಂದ ॥ಅ.ಪ.॥

ಭೂದೇವಿ-ಶ್ರೀದೇವಿ ಸಹಿತನಾಗಿ ಭೂವೈಕುಂಠದಿಂದ ಬಂದು ದರ್ಶನವಿತ್ತ ಎನ್ನುವ ಅಲೌಕಿಕ ಆನಂದ ಭಾವವನ್ನೇ ಸುರಿಸಿ ಸ್ಮರಿಸಿದ್ದಾರೆ ದಾಸರು.

**ನುಡಿ - ೧ರಲ್ಲಿ**

ನಾರದ ತುಂಬುರು ಗಾನವ ಸವಿದಾ ।
ಸುರಮುನಿಗಳ ವೇದ ಘೋಷಾನಂದಾ॥
ಪರಿಪರಿ ಸ್ಮರಿಸುವ ಜನರಾ ।
ಪರಗತಿದಾಯಕ ಪರಸನ್ನವೆಂಕಟಾ॥೧॥

ತಿರುಪತಿ ವೆಂಕಟರಮಣ ನಿಂತ ನೆಲೆ-ವೈಕುಂಠ ಸಮಾನವೆ ಆಗಿದೆ. ಆ ಪವಿತ್ರ ನೆಲ-ಬೆಟ್ಟಗಳು ಭೂವೈಕುಠವೇ ಎನಿಸಿದೆ. ಅಂಥ ಭಗವಂತನ ಸಾನಿಧ್ಯದಲ್ಲಿ ನಾರದ ತುಂಬುರರು ಬಂದು ಗಾನ ಮಾಡುತ್ತ ಭಗವಂತನನ್ನು ಅನನ್ಯವಾಗಿ ಸ್ತುತಿಸುತ್ತಿದ್ದಾರೆ. ಸುರಮುನಿ ಗಳು ಇಲ್ಲಿ ಬಂದು ವೇದಘೋಷ ಮಾಡುತ್ತಿದ್ದಾರೆ. ಭಕ್ತ ಜನರೆಲ್ಲ ಅವನ ದರ್ಶನಕ್ಕೆ ಬಂದು ಭಗವಂತನ ನಾಮಸ್ಮರಣೆಯಲ್ಲಿ ನಿರತ ರಾಗಿದ್ದಾರೆ. ಇಂಥ ಪರಸಸನ್ನವೆಂಕಟ ನೆಲೆಸಿದ ಪವಿತ್ರ ನೆಲ ವೈಕುಂ ಠವೇ ಎಂಬ ಪರಿಕಲ್ಪನೆಯಲ್ಲಿ ಸ್ತುತಿಸಿದ ದಾಸರು ಇಂಥ ಮುಕುಂದ ಗೋವಿಂದ ನಮ್ಮ ಮನೆಗೆ ಬಂದಾ''ಎಂದಿದ್ದಾರೆ.

**ನುಡಿ - ೨ರಲ್ಲಿ**

ಚಾರು ಕುಸುಮಗಳ ಹಾರದಿಂದೊಪ್ಪುತ ।
ಘೋರಮುತ್ತಿನ ಸರಿ ಮಣಿಗಳ ಹಾರ ॥
ಸರಿಸಿಜೋದ್ಭವ ಸುರನರ ವಂದಿತ
ಪರಮ ಪುರುಷ ಪರಸನ್ನ ವೆಂಕಟಾ ॥೨॥

ದಾಸರಿಗೆ ಭಗವಂತನು ಅನುಗ್ರಹಿಸಿದ ದಿವ್ಯ ದರ್ಶನ ಕಣ್ಣಿಗೆ ಕಟ್ಟಿದಂತೆ ಅವನ ಅಲಂಕಾರವನ್ನು ವರ್ಣಿಸಿದ್ದಾರೆ. ಕೌಸ್ತುಭ ಮಣಿಯಿಂದ ಕೂಡಿದ ಹಾರ, ಮುತ್ತು ರತ್ನಗಳಿಂದ ಶೋಭಿಸುವ ಹಾರಗಳನ್ನು ಧರಿಸಿದ್ದಾನೆ.ಇಂಥಾಭಗವಂತನನ್ನು ಕಂಡು ಕಣ್ಣುತುಂಬಿ



ಕೊಂಡ ಬ್ರಹ್ಮಾದಿ-ಸುರರೆಲ್ಲ ಇಲ್ಲಿ ಬಂದು ಅವನನ್ನು ನಿರಂತರವಾಗಿ ಸ್ತುತಿಸುತ್ತಿದ್ದಾರೆ'' ಎಂದು ವರ್ಣಿಸಿದ್ದಾರೆ.

**ಇನ್ನು ಕೊನೆಯ ನುಡಿಯಲ್ಲಿ**

ಧರಿಸಿ ದಶಾವತಾರ ಧರೆಯೊಳು
ದುರಿತವ ತರಿದು ಪೊರೆದದಯಾಳು ॥
ಕರೆಯಲು ಬಂದು ಕರುಣದಿಂದ ತಾ
ಹರಿಸಿ ಸಂಕಟ ಪರಸನ್ನ ವೆಂಕಟಾ ॥3॥

ಇಲ್ಲಿ ''ಧರಿಸಿ ದಶಾವತಾರಧರೆ ಗಳು''ಎನ್ನುವಾಗ

ದುಷ್ಟರನ್ನು ಶಿಕ್ಷಿಸಿ-ಶಿಷ್ಯರನ್ನು ಪೊರೆಯಲು ಹತ್ತು ಅವತಾರಗಳನ್ನು ಎತ್ತಿದ ಶ್ರೀಹರಿ-ಇಂದು ವೆಂಕಟರಮಣನಾಗಿ ಬಂದು ಇಂಥ ಪವಿತ್ರ ಬೆಟ್ಟದಲ್ಲಿ ನೆಲಸಿ-ಭೂಲೋಕದ ಜನರನ್ನು ಉದ್ಧಾರ ಮಾಡುತ್ತಿದ್ದಾನೆ. ಅವರ ಅಘಗಳನ್ನೆಲ್ಲ ಪರಿಹರಿಸಿ ಮುಕ್ತಿ ಮಾರ್ಗಕ್ಕೆ ದಾರಿ ತೋರುತ್ತಿದ್ದಾನೆ.ಇಂಥಾ ಕರುಣಾಮಯಿ ಇವತ್ತು ಶ್ರೀದೇವಿ ಭೂದೇವಿ ಸಹಿತನಾಗಿ ಪೂಜೆಗೊಳ್ಳಲು ನಮ್ಮ ಮನೆಗೆ ಬಂದಾ''ಎನ್ನುವಲ್ಲಿ ದಾಸರಲ್ಲಿ ಭಕ್ತಿರಸದ ಪರಿಪೂರ್ಣತೆ ತುಂಬಿ ಹರಿಯುತ್ತಿದೆ. ಇಂಥ ಅಪರೂಪದ ಕೃತಿಯಲ್ಲಿ ಭಗವಂತನ ದರ್ಶನ ಮಾಡಿಸಿದ್ದಾರೆ.

ಭಗವಂತನಿಂದ ದಾಸರಿಗೆ ಅನುಗ್ರಹಿಸಿ ತನ್ನ ಸಾನಿಧ್ಯ ತೋರಿದ ಈ ಪವಿತ್ರವಾದ ವಿಗ್ರಹಗಳು ಬಾಗಲಕೋಟೆಯಲ್ಲಿರುವ ದಾಸರ ಸನ್ನಿಧಾನದಲ್ಲಿ ಅವರ ವಂಶಸ್ಥರಿಂದ ನಿತ್ಯ ಪೂಜೆಗೊಳ್ಳುತ್ತಿವೆ.

ಈ ಕೀರ್ತನೆಗೆ ರಾಗ ಸಯೋಜಿಸಿ ಭಕ್ತಿ ಭಾವದಿಂದ ಮನ ತಟ್ಟುವಂತೆ ನಮ್ಮ ಮನೆಗೆ ಗೋವಿಂದ ಬಂದಾ ಎಂಬ ಶೀರ್ಷ ಕೆಯ ಧ್ವನಿ ಮುದ್ರಿಕೆಯಲ್ಲಿ ಹಾಡಿದ್ದಾರೆ. ಪಂ.ಪುತ್ತೂರನರಸಿಂಹನಾಯಕ ಅವರು.

**ಹರೇ ಶ್ರೀನಿವಾಸ**

# ರಸಪ್ರಶ್ನೆಗಳು

ಅ)ತಿರುಪತಿಯಲ್ಲಿ ಭಾಸ್ಕರಕ್ಷೇತ್ರವೆಂದು ಕರೆಯಲ್ಪಡುತ್ತಿರುವ ದೇವಾಲಯ ಯಾವುದು?
1. ಸೂರ್ಯನಾರಾಯಣಸ್ವಾಮಿ ಆಲಯ ತಿರುಚಾನೂರು
2.ಗುಡಿಮಲ್ಲಂ 3.ಯೋಗಿಮಲ್ಲವರಂ
4.ವೇದನಾರಾಯಣಸ್ವಾಮಿ ಆಲಯ ನಾಗಲಾಪುರಂ

ಆ) ಶ್ರೀನಿವಾಸ ಪದ್ಮಾವತೀ ದೇವಿಯನ್ನು ವಿವಾಹವಾದ ಊರು ಯಾವುದು?
1.ನಾಗಲಾಪುರಂ 2.ಗೋವಿಂದರಾಜಪಟ್ಟಣ
3.ಶ್ರೀನಿವಾಸಮಂಗಾಪುರಂ 4.ನಾರಾಯಣವನಂ

ಇ) ಅಪ್ಪಲಾಯಗುಂಟ ದೇವಾಲಯವನ್ನು ನಿರ್ಮಿಸಿದವರು ಯಾರು?
1. ಶ್ರೀಕೃಷ್ಣದೇವರಾಯ 2.ಸಾಳ್ವನರಸಿಂಹರಾಯ
3.ತಿರುಮಲರಾಯ 4.ಕಾರ್ವೇಟಿನಗರದ ರಾಜರು

ಈ) ಅರ್ಚಾಮೂರ್ತಿ ಎಂದರೇನು?
1.ಧರ್ಮಶಾಸ್ತ್ರದ ಪ್ರಕಾರ 2.ವೇದಗಳ ಪ್ರಕಾರ
3. ಸನಾತನ ಸಂಪ್ರದಾಯದ ಪ್ರಕಾರ
4. ಪೂಜೆಗೆ ಅರ್ಹವಾದ ವಿಗ್ರಹ

ಉ)ಜ್ಞಾನದಿಂದ ಉಂಟಾಗುವ ಗುಣವೇನು?
1.ನ್ಯಾಯನಿಷ್ಠೆ 2. ತತ್ತ್ವನಿಷ್ಠೆ
3.ಪ್ರಾಣಿದಯೆ 4. ಧರ್ಮನಿಷ್ಠೆ

ಊ)ಮಾನವರನ್ನು ಸತ್ಪುರುಷರನ್ನಾಗಿಸುವುದು ಯಾವುದು?
1. ಯೋಗ 2.ಧರ್ಮ
3. ಜ್ಞಾನ 4. ತತ್ತ್ವ


ಋ)ವೇದನಾರಾಯಣಸ್ವಾಮಿ ನೆಲೆಗೊಂಡಿರುವ ಊರು ಯಾವುವು?
1.ಅಪ್ಪಲಾಯಗುಂಟ 2.ನಾಗಲಾಪುರಂ
3.ಶ್ರೀನಿವಾಸಮಂಗಾಪುರಂ 4.ತೊಂಡಮನಾಡು

ಉತ್ತರಗಳು:
ಅ) 1 ಆ) 4 ಇ) 4 ಈ) 4 ಉ) 4 ಊ) 2 ಋ) 2

# ನೀತಿ ಕಥೆ

# ಸೋಮಾರಿತನ





ಒಮ್ಮೆ ಒಂದು ಒಂಟೆ ಬ್ರಹ್ಮದೇವರನ್ನು ಕುರಿತು ತಪಸ್ಸು ಮಾಡಿತು. ಒಂಟೆಯ ಉಗ್ರ ತಪಸ್ಸಿಗೆ ಬ್ರಹ್ಮದೇವನು ಮೆಚ್ಚಿ ಪ್ರತ್ಯಕ್ಷನಾಗಿ ಒಂಟೆಯನ್ನು ಕುರಿತು “ನನ್ನಿಂದ ನಿನಗೇನಾಗಬೇಕು” ಎಂದು ಕೇಳಿದನು. ಆಗ ಒಂಟೆಯು “ಬ್ರಹ್ಮದೇವ ನನಗೆ ಅಂಥ ದೊಡ್ಡ ಆಸೆಯೇನೂ ಇಲ್ಲ. ನನಗೆ ಆಹಾರಕ್ಕಾಗಿ ಕಾಡೆಲ್ಲಾ ಸುತ್ತಿ ಸುತ್ತಿ ಸಾಕಾಗಿದೆ. ಇನ್ನು ಮೇಲೆ ನನಗೆ ಕುಳಿತಲ್ಲೇ ಆಹಾರ ದೊರೆಯುವಂತೆ ಅನುಗ್ರಹಿಸು. ಅಂದರೆ ಆಹಾರ ಎಷ್ಟೇ ದೂರ ಇದ್ದರೂ ಕುಳಿತಲ್ಲಿಂದಲೇ ಅದನ್ನು ತಿನ್ನಲು ಅನುಕೂಲವಾಗುವಂತೆ ನನ್ನ ಕುತ್ತಿಗೆಯನ್ನು ಉದ್ದವಾಗಿಸಬೇಕು”ಎಂದಿತು ಒಂಟೆ. ಆಗ ಬ್ರಹ್ಮನು “ತಥಾಸ್ತು” ಎಂದನು. ಅಂದಿನಿಂದ ಒಂಟೆಗೆ ಆಹಾರದ ಹುಡುಕಾಟದ ಕೆಲಸ ತಪ್ಪಿತು. ಕುಳಿತಲ್ಲಿಂದಲೇ ತನ್ನ ಕುತ್ತಿಗೆಯನ್ನು ಕಾಡಿನಲ್ಲೆಲ್ಲಾ ಚಾಚಿ ಆಹಾರ ಸ್ವೀಕಾರ ಮಾಡಲು ಶುರು ಮಾಡಿತು. ಇದರಿಂದ ದೇಹಕ್ಕೆ ಯಾವ ರೀತಿಯ ಶ್ರಮ, ವ್ಯಾಯಾಮವಾಗಲಿ ಇಲ್ಲದೆ ಸೋಮಾರಿಯಾಯಿತು.

ಒಮ್ಮೆ ಒಂಟೆಗೆ ಗ್ರಹಚಾರ ಕೆಟ್ಟಿತು. ಆ ದಿನ ಹತ್ತಿರದಲ್ಲಿ ಎಲ್ಲಿಯೂ ಆಹಾರ ದೊರಕಲಿಲ್ಲ. ಬೆಳೆದ ಉದ್ದ ಕುತ್ತಿಗೆಯಿಂದ ಆಹಾರಕ್ಕಾಗಿ ಕಾಡೆಲ್ಲಾ ಹುಡುಕಿತು. ಬಹಳ ದೂರದವರೆಗೆ ಆಹಾರಕ್ಕಾಗಿ ಉದ್ದ ಕುತ್ತಿಗೆಯನ್ನು ಚಾಚಿತು. ಅದೇ ವೇಳೆ ದೊಡ್ಡ ಹುಲಿಯೊಂದು ಆಹಾರ ಹುಡುಕುತ್ತ ಬಂತು. ದಾರಿಗೆ ಅಡ್ಡವಾಗಿ ಬಿದ್ದಿದ್ದ ಒಂಟೆಯ ಕುತ್ತಿಗೆಯಿತ್ತು. ಮಾಂಸಾಹಾರಿಯಾದ ಹಸಿದ ಹುಲಿಯು ಆಹಾರ ದೊರಕಿತೆಂದು ಸಂತೋಷದಿಂದ ಒಂಟೆಯ ಕುತ್ತಿಗೆಗೆ ಬಾಯಿ ಹಾಕಿತು. ಒಂಟೆಯು ಕೂಡಲೆ ತನ್ನ ಕುತ್ತಿಗೆಯನ್ನು ಬಿಡಿಸಿಕೊಳ್ಳಲು ಪ್ರಯತ್ನಿಸಿತು. ಆದರೆ ದೂರ ಚಾಚಿದ್ದ ಕುತ್ತಿಗೆಯನ್ನು ಬಿಡಿಸಿಕೊಳ್ಳಲಾಗಲಿಲ್ಲ. ಅಲ್ಲೇ ತುಂಡಾಯಿತು.

### ನೀತಿ

**ಸೋಮಾರಿತನ ಎಂದಿಗೂ ಒಳ್ಳೆಯದಲ್ಲ. ಚಟುವಟಿಕೆಯು ನಮ್ಮ ದೇಹ ಮತ್ತು ಮನಸ್ಸನ್ನು ಆರೋಗ್ಯವಾಗಿಡುತ್ತದೆ. ಸೋಮಾರಿತನ ಮನುಷ್ಯನ ದೊಡ್ಡ ಶತ್ರು. ಅವರವರ ಕೆಲಸವನ್ನು ಅವರವರೇ ಮಾಡಿಕೊಳ್ಳುವುದು ಉತ್ತಮ.**

ಚಿತ್ರಕಥೆ

# ಅಯ್ಯೋ ! ಹುಲಿ


ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್.ಕೆ.
ಚಿತ್ರಗಳು : ಬಿ. ಶಿವಾಜಿ




ಮಗನ ಕೂಗು ಸೋಮಯ್ಯನ ಕಿವಿಗೆ ಕೇಳಿಸಿತು....
ಅಯ್ಯೋ! ಇದೇನಿದು ? ಈಗ ತಾನೇ ಬಂದೆ .... ಮತ್ತೇ ಅಷ್ಟರಲ್ಲಿ ಈಗೇ.....
ಹಾ.. ಬರುತ್ತಿದ್ದೇನೆ.
ಸೋಮಯ್ಯ ಓಡೋಡಿ ಬಂದನು.
ಎಲ್ಲಿ ಹುಲಿ
ಹಹ್ಹಹ್ಹಾ.... ಹಹ್ಹಹ್ಹಾ....
ಹುಲಿನಾ? ಹುಲಿ ಇಲ್ಲ ಏನೂ ಇಲ್ಲ . ಸುಮ್ಮನೆ ತಮಾಷೆ ಮಾಡಿದೆ ಭಲೇ! ಭಲೇ!
ಸೋಮಯ್ಯನಿಗೆ ತುಂಬಾ ಕೋಪ ಬಂದಿತು.
ಮೂರ್ಖ ! ನಿನಗೆ ಚೇಷ್ಟೆ ತುಂಬಾ ಹೆಚ್ಚಾಗಿದೆ. ನನಗೆ ಹೊಲದಲ್ಲಿ ಕೆಲಸ ಮಾಡಲು ನೀನು ಬಿಡುತ್ತಿಲ್ಲ ನಿನಗೆ ತಮಾಷೆ ಹೆಚ್ಚಾಗಿದೆ. ನೀನು ಈ ಮಧ್ಯದಲ್ಲಿ ಸುಳ್ಳು ಹೇಳುವುದು ಜಾಸ್ತಿಯಾಗಿದೆ.
ಸೋಮಯ್ಯ ಹೊರಟು ಹೋದನು. ಸ್ವಲ್ಪ ಹೊತ್ತಿಗೆ ನಿಜವಾಗಿಯೂ ಹುಲಿ ಬಂತು.
ರಂಗನು ಪ್ರಾಣ ಭಯದಿಂದ ಮರವನ್ನು ಹತ್ತಿ ಕುಳಿತನು. ಹುಲಿಯು ಕುರಿಯನ್ನು ಹಿಡಿದುಕೊಂಡು ಹೊರಟು ಹೋಯಿತು.
ಈ ಸಲ ನಿಜವಾಗಿಯೇ ಹುಲಿ ಬಂತು. ಅಪ್ಪಾ! ಹುಲಿ! ಹುಲಿ! ಕಾಪಾಡಿ ..ಕಾಪಾಡಿ..
ರಂಗನ ಕೂಗು ಕೇಳಿಸಿದರೂ ಸೋಮಯ್ಯ ಈ ಸಲ ನಿಜವಾಗಿಯೂ ಹುಲಿ ಬಂದರೂ ನಂಬಲಿಲ್ಲ ಹಿಂತಿರುಗಿ ಬರಲೂ ಇಲ್ಲ.
ಹೊಲದ ಕೆಲಸವನ್ನು ಮುಗಿಸಿಕೊಂಡು ಹಿಂತಿರುಗಿದ ಸೋಮಯ್ಯನಿಗೆ ನಡೆದದು ಕೇಳಿ ತುಂಬಾ ನೊಂದುಕೊಂಡನು. ರಂಗನಿಗೆ ಬುದ್ಧಿಯೂ ಬಂದಿತು. ಸುಳ್ಳನ್ನು ಹೇಳಿದರೆ ಆಗುವ ಅನರ್ಥವೇನೆಂದು ತಿಳಿಯಿತು.
ಇನ್ನು ಮುಂದೆ ಯಾವಾಗಲೂ ಸುಳ್ಳನ್ನು ಹೇಳುವುದಿಲ್ಲ ಅಪ್ಪಾ.
2
ಸ್ವಸ್ತಿ

## ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......

ಪಕ್ಕದಲ್ಲಿರುವ ಗೊಂಬೆಯನ್ನು ಬಾಕ್ಸ್‌ನಲ್ಲಿ ಬರಿಯೋಣ...





ಈ ಚಿತ್ರದಲ್ಲಿ ಒಟು 7 ವ್ಯತ್ಯಾಸಗಳಿವೆ.

ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....

| | | | | | | | |
|---|---|---|---|---|---|---|---|
| ಪಿ | ದ್ರ | ಹೊ | ಣ | ಮು | ಲು | ರು | |
| ಸ | ಕ್ಕ | ಪಾ | ಕಾ | ರೆ | ಮೊ | ದ್ದ | ನೀ |

ಉತ್ತರಗಳು:
ಪಾಪಿ ಸಮುದ್ರ ಹೊಕ್ಕರೆ ಮೊಣಕಾಲುದ್ದ
ನೀರು

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.

# ಒಡಿಶಾ ರಾಜ್ಯದ ಭುವನೇಶ್ವರ್‌ನಲ್ಲಿ ತಿ.ತಿ.ದೇ., ನಿರ್ಮಿಸಿದ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದ ಮಹಾಸಂಪ್ರೋಕ್ಷಣ ದೃಶ್ಯಮಾಲಿಕೆ









25-05-2022 ರಂದು ಹನುಮಜಯಂತಿ ಉತ್ಸವಗಳನ್ನು ತಿ.ತಿ.ದೇ., ಯು ವೈಭವವಾಗಿ ನಿರ್ವಹಿಸಿತು. ಈ ಸಂದರ್ಭವಾಗಿ ಆಕಾಶ ಗಂಗೆಯಲ್ಲಿ ನೆಲೆಸಿರುವ ಅಂಜನಾದೇವಿ. ಬಾಲ ಆಂಜನೇಯ ಸ್ವಾಮಿಯವರಿಗೆ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿಯವರು ರೇಷ್ಮೆ ವಸ್ತ್ರಗಳನ್ನು ಸಮರ್ಪಿಸಿದರು.







SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
Printing on 25-06-2022 and Posting at Tirupati RMS.Regd. with the Registrar of Newspapers for
India under RNI. No. APKAN/2021/80589. Postal Regd.No.TRP/156/2021-2023 "Licenced to
Post Without Prepayment No. PMGK/RNP/WPP-04(6)/2021-2023" Posting on 20th of Every Month



ವಿಷ್ಣೋರ್ಲೋಕೈಕ ಸೋಪಾನಂ ಸರ್ವ ದುಃಖೈಕನಾಶಮನಮ್ ।
ಸರ್ವೈಶ್ವರ್ಯ ಪ್ರದಂ ನೃಣಾಂ ಸರ್ವ ಮಂಗಲಕಾರಕಂ ॥೧೩॥

- ಬ್ರಹ್ಮಾಂಡ ಪುರಾಣ